TIGHT BINDING BOOK

UNIVERSAL LIBRARY
OU_198541
UNIVERSAL LIBRARY

OUP—901—26-3-70—5,000

OSMANIA UNIVERSITY LIBRARY

Call No. K923.5 K44S Accession No. K2426


Author [illegible]

Title


This book should be returned on or before the date last marked below.



ಗಂಡುಗಲಿ ಕುಮಾರರಾಮ



ಕುಮ್ಮಟದುರ್ಗ



ರತ್ನಸಿಂಹಾಸನ

# ಗಂಡುಗಲಿ ಕುಮಾರರಾಮ

●

## ಮೊದಲ ಮಾತು

ಕಂಪಿಲರಾಯ ಹಾಗು ಅವನ ಮಗ ಕುಮಾರರಾಮ ಎಂಬವರು ಹಂಪೆಯ ಸುತ್ತಲಿನ ರಾಜ್ಯವನ್ನು ಕ್ರಿ. ಶ. ೧೪ನೆಯ ಶತಮಾನದ ಆದಿ ಭಾಗದಲ್ಲಿ ಆಳುತ್ತಿದ್ದರು. ಇವರ ರಣಶೌರ್ಯ, ಸಾಹಸದ ಕಾರ್ಯಗಳನ್ನು ವಿವರಿಸಿ ಬರೆದ ನಾಲ್ಕು ಸಾಂಗತ್ಯ ಕನ್ನಡದಲ್ಲಿವೆ. ಈ ಕಾವ್ಯಗಳ ಭಾಷೆ ಹುರಿದುಂಬಿಸುವ ಸರಳವಾದ ವೀರಭಾಷೆ. 'ಗಂಗ' ಕವಿ ರಚಿತವಾದ 'ಕುಮಾರರಾಮನ ಸಾಂಗತ್ಯ'ದ ಸಾರಾಂಶವನ್ನು ಶ್ರೀಯುತ ಯಂ. ಎಚ್. ರಾಮಶರ್ಮರು ೧೯೩೪ರ ಅಕ್ಟೋಬರಿನ ಮಿಥಿಕ್ ಸೊಸೈಟಿಯ ತ್ರೈಮಾಸಿಕ ಪತ್ರಿಕೆಯಲ್ಲಿ ಪ್ರಕಟಿಸಿರುವರು. ನಂಜುಂಡ ಕವಿಯ 'ಪರದಾರ ಸೋದರ ರಾಮನ ಸಾಂಗತ್ಯ' ದ ಬಹು ಭಾಗವು ಮೈಸೂರು ಶಾಸನಶೋಧನ ಇಲಾಖೆಯ ೧೯೩೪ರ ವರದಿಯಲ್ಲಿ ಪ್ರಕಟವಾಗಿದೆ. ಸಾರಾಂಶಗಳೆರಡೂ ಇಂಗ್ಲೀಷು ಭಾಷೆಯಲ್ಲಿವೆ. ಈ ಕತೆಯನ್ನು ಕನ್ನಡದಲ್ಲಿ ಬಹು ಸೂಕ್ಷ್ಮವಾಗಿ ಶ್ರೀಯುತ ಆಲೂರು ವೆಂಕಟರಾಯರೂ, ನಾರಾಯಣ ಶರ್ಮರೂ ಬರೆದಿರುವರು. 'ಬಾಲ ಕುಮಾರರಾಮನ ಸಾಂಗತ್ಯ' ಎಂಬ ಇನ್ನೊಂದು ಅಪೂರ್ವ ಗ್ರಂಥವನ್ನು ಕೆಲ ದಿನಗಳ ಹಿಂದೆ ಈ ಲೇಖಕನು ಬೆಳಕಿಗೆ ತಂದಿರುವನು.* ಹಂಪೆಯ ಚರಪತಿ ಮಹಲಿಂಗಸ್ವಾಮಿ ಎಂಬ ಕವಿ ಈ ಗ್ರಂಥವನ್ನು ಸಾಂಗತ್ಯದಲ್ಲಿ ರಚಿಸಿರುವನು. ಇದರಲ್ಲಿ ೧೯ ಸಂಧಿಗಳೂ ೪೨೮೩ ಪದ್ಯಗಳೂ ಇವೆ.

ಇದೇ ಕತೆಯನ್ನು ನಾಗಸಂಗಯ್ಯನೆಂಬ ಕವಿಯು 'ಪರನಾರಿಯರಿಗೆ ಸಹೋದರನೆಂಬಂತ ಕತೆ' ಎಂಬ ಹೆಸರಿನಿಂದ ಸಾಂಗತ್ಯದಲ್ಲಿಯೇ

---

* ತಾಯಿನಾಡು ೧೮-೬-೧೯೩೯

ರಚಿಸಿರುವನು. ಈ ಗ್ರಂಥದಲ್ಲಿ ೨೫ ಸಂಧಿಗಳೂ ೨೫೭೩ ಪದ್ಯಗಳೂ ಇವೆ. ನನಗೆ ದೊರೆತ ಎರಡು ಪ್ರತಿಗಳಲ್ಲಿಯೂ ಈ ಕತೆಯು ಅಪೂರ್ಣವಾಗಿದೆ. ಕವಿಯು ಮೊದಲನೆಯ ಸಂಧಿಯಲ್ಲಿ ಉಮಾಪತಿ, ಪಾರ್ವತಿ, ಲೇಪಾಕ್ಷಿಯ ವೀರೇಶ, ಚನ್ನವೀರ, ಶ್ರೀಕೃಷ್ಣರನ್ನು ಧ್ಯಾನಿಸಿ, ಪ್ರತಿಯೊಂದು ಸಂಧಿಯ ಪ್ರಾರಂಭದಲ್ಲಿ ನಾಗಶಂಕರನಿಗೆ ಶರಣು ಎಂದಿರುವನು. ಕೆಲವು ಸಂಧಿಗಳಲ್ಲಿ ಜಟ್ಟಂಗಿ ರಾಮೇಶನನ್ನೂ, ಕೆಲವೆಡೆಗಳಲ್ಲಿ ತಗಡೂರು ವಿಷ್ಣುರಾಜನನ್ನೂ, ಗರಳಪುರಿಯ ನಂಜುಂಡೇಶನನ್ನೂ ಧ್ಯಾನಿಸಿರುವನು. ಕವಿಯ ವಿಷಯ ಈ ಗ್ರಂಥದಲ್ಲಿ ಹೆಚ್ಚಿಗೆ ತಿಳಿದುಬರುವುದಿಲ್ಲ. 'ಅಂದದಿಂದೊರೆದು ಪೇಳುವೆನು ಈ ಕಥೆಯನು ಚಂದ್ರಶೇಖರನ ವರದಿಂದ' ಎಂದು ಹೇಳಿರುವುದರಿಂದ ಇವನು ಶೈವನಾಗಿರಬಹುದು.

**ಆಧಾರವಿಡಿದು ಪೇಳಿದ ನಾಗಸಂಗ್ಯೆಯ್ಯ । ಈ ಧರೆಯ ವಿದ್ವಾಂಸರೊಳಗೆ ।**
**ಸಾಧಿಸಿ ಅವರ ಸೇವಕನಾಗಿ ಪೇಳ್ವೆನು । ಯಾದವ ಸಖ ಪಾರ್ಥ ಕಥೆಯ ॥**

ಎಂದು ಪ್ರಥಮ ಸಂಧಿಯಲ್ಲಿಯೇ ಹೇಳಿರುವುದರಿಂದ ಹಿಂದೆಯೇ ಒರೆಯಲ್ಪಟ್ಟಿದ್ದ ಗ್ರಂಥದ ಆಧಾರದಿಂದ ಈ ಸಾಂಗತ್ಯವನ್ನು ಬರೆದಿರುವನೆಂದು ವ್ಯಕ್ತವಾಗುವುದು. ಆದರೆ ಹಿಂದಿನ ಆಧಾರಗ್ರಂಥದ ಹೆಸರನ್ನಾಗಲಿ, ಗ್ರಂಥಕರ್ತನ ಹೆಸರನ್ನಾಗಲಿ ಹೇಳದಿರುವುದು ಆಶ್ಚರ್ಯಕರವಾಗಿದೆ. 'ವಿದ್ವಾಂಸರಿಗೆ ಸೇವಕನಾಗಿರುವೆನೆಂದು' ಹೇಳಿಕೊಂಡಿರುತ್ತಾನೆ; ಆದರೆ ಹಿಂದಿನ ಕವಿಗಳ ಹೆಸರನ್ನು ಹೇಳಿರುವದಿಲ್ಲ.

ಈ ನಾಲ್ಕು ಸಾಂಗತ್ಯಗಳೂ ಕ್ರಿ. ಶ. ೧೪ನೆಯ ಶತಮಾನದ ಆದಿಭಾಗದಲ್ಲಿ ಕೆಲಕಾಲ ಪ್ರಜ್ವಲಿಸಿ ಬಲವಾದ ಆಪಘಾತದಿಂದ ತಟಕ್ಕನೆ ನಂದಿಹೋದ ಕುಮ್ಮಟ ರಾಜ್ಯದ ಚರಿತ್ರೆ. ಕಥಾನಾಯಕನಾದ ಕುಮಾರರಾಮನು ಕನ್ನಡನಾಡಿನ ಇತಿಹಾಸದಲ್ಲಿ ಚಿರಜೀವಿ ಪಟ್ಟವನ್ನು ಪಡೆದಿರುವ ವೀರಾಧಿವೀರ. ಅವನ ಕಲಿತನದ ಸಾಧನೆಗಳೂ, ಧರ್ಮಾಭಿಮಾನವೂ, ದೇಶಾಭಿಮಾನವೂ ಪರದಾರಸೋದರತೆಯೂ ಕನ್ನಡನಾಡಿಗೊಂದು ಹೆಮ್ಮೆ. ಈ ಗ್ರಂಥ ಕಟ್ಟುಕತೆಯಲ್ಲ; ಇತಿಹಾಸದ ಸತ್ಯಾಂಶಗಳ ವಿವರಣೆ. ನಾಗಸಂಗಯ್ಯನ ಗ್ರಂಥವನ್ನು ಅನುಸರಿಸಿ ಅದರ ಸರಳಾನುವಾದವನ್ನು ಈ ಪುಸ್ತಕರೂಪದಲ್ಲಿ ಬರೆಯಲಾಗಿದೆ.

# ದಕ್ಷಿಣ ಭರತಖಂಡದಲ್ಲಿ ತೊಗ್ಲಕ್ ಸಾಮ್ರಾಜ್ಯ ವಿಸ್ತರಣೆ

ಗಯಾಸುದ್ದೀನ್ ತೊಗ್ಲಕನು ಕ್ರಿ. ಶ. ೧೩೨೧ ರಿಂದ ೧೩೨೫ನೆ ಫೆಬ್ರುವರಿಯ ವರೆಗೆ ಆಳಿದನು. ಇವನು ಬಂಗಾಳ ದೇಶದಲ್ಲೆಲ್ಲ ನಡೆದ ದಂಗೆಯನ್ನು ಅಡಗಿಸಲು ಹೋಗಿ, ಜಯಶೀಲನಾಗಿ ಹಿಂದಿರುಗಿದಾಗ, ತನ್ನ ಮಗ ಉಲೂಘ್‌ಖಾನನ ಕುತಂತ್ರದಿಂದಲೋ ಅಥವಾ ಆಕಸ್ಮಾತ್ತಾಗಿಯೋ ಇವನು ಮಲಗಿದ್ದ ಡೇರೆಯು ಇವನ ಮೇಲೆ ಉರುಳಲು ಅಲ್ಲಿಯೆ ಮಡಿದನು. ಉಲೂಘಖಾನನು ಮಹಮ್ಮದ್‌ಖಾನ್ ತೊಗ್ಲಕ್ ಎಂಬ ಅಭಿದಾನದಿಂದ ಪಟ್ಟವನ್ನೇರಿದನು.

ತಂದೆಯ ಕಾಲದಲ್ಲಿ ಮಹಮ್ಮದ್‌ಖಾನ್ ತೊಗ್ಲಕನು ದಕ್ಷಿಣದಲ್ಲಿ ಅಧಿಕಾರಿಯಾಗಿದ್ದಾಗ, ಓರಗಲ್ಲು ರಾಜನ ಮೇಲೆ ದಂಡೆತ್ತಿ ಹೋಗಿ ಸಂಪೂರ್ಣವಾಗಿ ಸೋತು ದೇವಗಿರಿಗೆ ಹಿಂತಿರುಗಿದನು. ಅಲ್ಲಿ ನಾಲ್ಕಾರು ತಿಂಗಳು ತಂಗಿದ್ದು ದಿಲ್ಲಿಯಿಂದ ಸೈನ್ಯವನ್ನು ತರಿಸಿಕೊಂಡು ಕ್ರಿ.ಶ. ೧೩೨೩ ರಲ್ಲಿ ಓರಗಲ್ಲನ್ನು ಮುತ್ತಿ ಸೋಲಿಸಿ, ಅರಸನನ್ನೂ ಅವನ ಐಶ್ವರ್ಯವನ್ನೂ ದಿಲ್ಲಿಗೆ ಕಳುಹಿಸಿದನು. ಓರಗಲ್ಲಿಗೆ ಸುಲ್ತಾನಪುರವೆಂದು ಹೆಸರಿಟ್ಟನು. ಅನಂತರ ಮಹಮ್ಮದಖಾನ್ ತೊಗ್ಲಕನು ಒರಿಸ್ಸಾದ ರಾಜಧಾನಿಯಾದ ಜಾಜನಗರಕ್ಕೆ ಮುತ್ತಿಗೆ ಹಾಕಿ ಸೋಲಿಸಿ ೪೦ ಆನೆಗಳನ್ನು ಹಿಡಿದುಕೊಂಡು ಹಿಂತಿರುಗಿದನು.

ಈ ಸುಲ್ತಾನನ ಕಾಲದಲ್ಲಿಯೇ ಮಧುರೆಯು ಮುಸಲ್ಮಾನರ ಆಧಿಪತ್ಯಕ್ಕೆ ಒಳಪಟ್ಟಿತು. ಜಲಾಲುದ್ದೀನ ಎಂಬವನು ಅಲ್ಲಿಯ ಮೊದಲನೆಯ ಪ್ರಾಂತ್ಯಾಧಿಕಾರಿಯಾದನು. ದೇವಗಿರಿಯು ದೌಲತಾಬಾದ್ ಎಂಬ ಹೆಸರಿನಿಂದ ದಕ್ಷಿಣದೇಶದ ರಾಜಧಾನಿಯಾಯಿತು. ದಿಲ್ಲಿಯಿಂದ ಮಧುರೆಯವರೆಗೂ ಅಲ್ಲಲ್ಲಿ ಮುಸಲ್ಮಾನ ರಾಜ್ಯದ ಷಹರುಗಳು (cantonment) ಏರ್ಪಟ್ಟವು. ತಿರುಚನಾಪಳ್ಳಿಯ ಬಳಿ ಕನ್ನಾನೂರು ಎಂಬುದು ಇಂತಹ ಒಂದು ಷಹರಾಗಿತ್ತು. ಮಧುರೆಯಿಂದ ದಿಲ್ಲಿಯವರೆಗೂ ಹೋಗುವ ಮಾರ್ಗದಲ್ಲಿ ಇಂತಹ ಷಹರುಗಳು ಎಲ್ಲೆಲ್ಲಿ

ದ್ದವೆಂಬುದು ತಿಳಿದಿಲ್ಲವಾದರೂ, ಬಳ್ಳಾರಿ ಜಿಲ್ಲೆಯಲ್ಲಿರುವ ಚಿಪ್ಪಗಿರಿ ಎಂಬಲ್ಲಿ ಒಂದು ಷಹರು ಇದ್ದಂತೆ ನಾಗಸಂಗಯ್ಯನ ಗ್ರಂಥದಿಂದ ತಿಳಿದು ಬರುತ್ತದೆ.

## ಮಹಮ್ಮದೀಯರ ದಾಳಿಗಳ ಪರಿಣಾಮ

ಮಹಮ್ಮದೀಯರು ಕ್ರಿ. ಶ. ೧೨೯೪ರಿಂದ ದಕ್ಷಿಣಕ್ಕೆ ನುಗ್ಗಿ ಒಂದು ಒಂದರ ಮೇಲೊಂದು ದಾಳಿ ನಡೆಸಿದರು. ಆದರ ಫಲವಾಗಿ ದೇವಗಿರಿ (೧೨೯೪-೧೩೧೮), ಓರಗಲ್ಲು (೧೩೦೯-೨೩), ದೋರಸಮುದ್ರ (೧೩೧೦) ಗಳು ಅವರ ವಶವಾದವು. ಅರಸುಗುವರನು ದಿಲ್ಲಿಗೆ ಕರೆದೊಯ್ಯಲ್ಪಟ್ಟು ಮೂರು ವರ್ಷಗಳ ನಂತರ ಹಿಂತಿರುಗಿ ಬಂದನು. ಮುಮ್ಮಡಿ ಬಲ್ಲಾಳ ರಾಯನು ತನ್ನ ದೇಶದಲ್ಲಿ ನಾನಾ ಕಡೆ ಬೀಡು ಬಿಡುತ್ತ ಅಲೆದಾಡುತ್ತಿದ್ದು, ೧೩೪೨ರಲ್ಲಿ ಮೋಸದಿಂದ ಯುದ್ಧಭೂಮಿಯಲ್ಲಿಯೇ ಕೊಲೆ ಮಾಡಲ್ಪಟ್ಟನು. ಮಧುರೆಯೂ ಮುಸಲ್ಮಾನರ ವಶವಾಗಿ ಅಲ್ಲಿ ಪ್ರಾಂತೀಯಾಧಿಕಾರಿ ನೇಮಕವಾದನು. ಒಟ್ಟಿನಲ್ಲಿ ದಕ್ಷಿಣ ಭರತಖಂಡವೆಲ್ಲ ಮುಸಲ್ಮಾನರ ವಶವಾಯಿತು.

**ಬಡಗಣ ಭೂಮಿಗವಧಿ ಹಿಮಗಿರಿ ಮೂರು ।**
**ಕಡೆಯ ಭೂಮಿಗೆ ಮುಂನೀರು ॥**
**ಧಡಿ ಮೇರೆಯೆನಿಸುವ ರಾಜ್ಯವನಾಳುತ ।**
**ಪೊಡವಿಪ ಸುರತಾಣನಿರಲೂ ॥** *

ದಂಡಯಾತ್ರೆಗೆ ಬಂದ ಸೇನಾಪತಿಗಳು ಹಿಂದೂ ಅರಸರು ಮುಸಲ್ಮಾನರಾಗಬೇಕೆಂದೂ ಇಲ್ಲದಿದ್ದರೆ ತಮ್ಮ ಸರ್ವಸ್ವವನ್ನೂ ಒಪ್ಪಿಸಿ ಜಿಸಿಯಾ ತೆರಿಗೆಯನ್ನು ಕೊಡಬೇಕೆಂದೂ ಅಥವಾ ಕತ್ತಿಯ ಮೊನೆಗೆ ಕುತ್ತಿಗೆಯನ್ನೀಯಬೇಕೆಂದೂ ಬಲಾತ್ಕರಿಸುತ್ತಿದ್ದರು. § ಹಿಂದೂಗಳ ಆಸ್ತಿಪಾಸ್ತಿ, ಐಶ್ವರ್ಯವನ್ನು ಎಲ್ಲ ವಿಧದಿಂದಲೂ ಕಸಿದುಕೊಳ್ಳುವಂತೆ

---

* **ನಂಜುಂಡನ ಪರದಾರ ಸೋದರರಾಮನ ಕಥೆ.** At page 42 M. A. R 1929.

§ South India & Her Mahamadan Invaders page 127.

ಏರ್ಪಾಡು ಮಾಡಿಯೂ ಅವರನ್ನು ನಿರಾಯುಧರನ್ನಾಗಿ ಮಾಡಿಯೂ, ಬಲಹೀನರನ್ನಾಗಿ ಮಾಡಿದರು. ಹಿಂದೂಗಳು ತಲೆಯೆತ್ತದಂತೆ ನೋಡಿಕೊಳ್ಳಲು ಕಾನೂನುಗಳು ಏರ್ಪಟ್ಟವು; ಭೂಮಿಯ ಉತ್ಪನ್ನದ ೧/೬ಕ್ಕೆ ಬದಲಾಗಿ ಅರ್ಧ ಭಾಗವನ್ನು ಹುಲುಸು ಬೆಳೆಗಾಲದಲ್ಲಿಯೂ, ಕ್ಷಾಮ ಕಾಲದಲ್ಲಿಯೂ ಒಂದೇ ಸಮನಾಗಿ ವಸೂಲುಮಾಡುತ್ತಿದ್ದರು. ಆ ಕಾಲದಲ್ಲಿ ಯಾವ ಹಿಂದೂವೂ ಗಣ್ಯನಾಗಿರಲು ಸಾಧ್ಯವಿರಲಿಲ್ಲ. ಇವರಲ್ಲಿ ಚಿನ್ನ, ಬೆಳ್ಳಿ ಮುಂತಾದ ಬೆಲೆಬಾಳುವ ವಸ್ತುಗಳಿರುವುದು ಸಾಧ್ಯವಿರಲಿಲ್ಲ. ಅವಿಧೇಯತೆ, ದರ್ಪಗಳನ್ನು ಸೂಚಿಸುವ ಯಾವುದನ್ನೂ ಧರಿಸಕೂಡದಾಗಿತ್ತು. ಸುಲಿಗೆಗಾಗಿ ಹೊಡೆತದ ಪೆಟ್ಟುಗಳೂ, ಸೆರೆಮನೆಯ ವಾಸವೂ, ಸರಪಳಿಯ ಬಂಧನಗಳೂ ಸರ್ವಸಾಮಾನ್ಯವಾದ ಶಿಕ್ಷೆಗಳಾಗಿದ್ದವು. ಕ್ರಿ. ಶ ೧೩೧೮ರಲ್ಲಿ ಹರಪಾಲನಂತಹ ಗಣ್ಯರಾಜನನ್ನು ಬದುಕಿರುವಾಗಲೇ ಚರ್ಮ ಸುಲಿಸಿ ಬೇಯಿಸಿದರು. ಹಿಂದೂ ನಾಗರಿಕತೆಯು ಬುಡಮೇಲಾಯಿತು. ಈ ತರಹದ ಕೃತ್ಯಗಳಿಂದ ಹಿಂದೂಗಳು ತಲ್ಲಣಿಸಿ ಹೋದರು.

ಒಬ್ಬ ಚರಿತ್ರೆಕಾರರು ಕೆಳಗೆ ಕಂಡಂತೆ ವಿವರಿಸಿರುವರು:—ಮುಸಲ್ಮಾನರ ಈ ದಾಳಿಗಳಿಂದ ದಕ್ಷಿಣಭಾರತವು ಹೆರವರ ಪಾಲಾಯಿತು; ಸ್ವರಾಜ್ಯಗಳು ನೆಲಸಮವಾದವು; ರಾಜರು ರಾಜ್ಯಭ್ರಷ್ಟರಾದರು; ಹಿಂದೂ ಜನಾಂಗವೂ, ಹಿಂದೂ ಸಂಸ್ಕೃತಿಯೂ ತತ್ತರಿಸಿ ಕಂಗೆಟ್ಟು ಕಕ್ಕಾಬಿಕ್ಕಿಯಾದವು; ಸ್ವಧರ್ಮವು ಸಂಕಟಕ್ಕೆ ಸಿಲುಕಿತು; ಅನಾದಿಯಿಂದಲೂ ಪೂಜೆಗೊಳ್ಳುತ್ತ ಬಂದ ದೇವಾಲಯಗಳು ಉಧ್ವಸ್ತವಾದವು. ಪವಿತ್ರ ಸ್ಥಳಗಳು ಅಪವಿತ್ರವಾದವು. ವೈಭವವು ಹಾಳಾಯಿತು. ನೂರಾರು ವರ್ಷಗಳಿಂದ ಕಟ್ಟಿ ನಿಲ್ಲಿಸಿದ ನಾಗರಿಕತೆಯು ನಾಮಾವಶೇಷವಾಗುವ ದುರ್ಧರ ಸಮಯವು ಒದಗಿತು.*

ಮುಸಲ್ಮಾನರು ಹಿಂದೂಗಳ ಮೇಲೆ ಮಾಡಿದ ಅಪಚಾರ ವಿಷಯಗಳಲ್ಲಿ ಕೆಲವನ್ನು ಕೆಳಗೆ ಕೊಟ್ಟಿದೆ.

---

* ಶ್ರೀಮಾನ್ ದೇಸಾಯಿ ಪಾಂಡುರಂಗರಾಯರ ವಿಜಯನಗರ ಸಾಮ್ರಾಜ್ಯ ಪುಟ ೮.

ದೇವಾಲಯಗಳನ್ನು ಕೆಡಸಿದರು
ದೇವರ ಕಿತ್ತು ಧರಣಿಯ |
ದೇವರ ಸತ್ಕರ್ಮವ ಕೆಡಸಿದರು ಧ |
ರಾವಳಿಯೊಳು ದಾನವರು ॥ *

ನ ಕಥಾಕಟುಘೂತ್ಕೃತಾದ್ವ್ಯಥಾಮೇ |
ಹೃದಿ ಜೀರ್ಣೋಪಲನೇಷು ಘೂಕಲೋಕಾತ್ |
ಪರಿಶೀಲತ ಸಾದಸೀತವಾಗ್ಜ್ಞೋ
ಯವನಾನಾಂ ಭವನೇಯಥಾ ಶಾಕೇಭ್ಯಃ ‡

ಈ ದುರ್ಭರ ಪರಾಭವದಿಂದ ಎಚ್ಚತ್ತು ಹೋರಾಡಲು ಮೊದಲು ನಡುಕಟ್ಟಿದವರು ಕನ್ನಡಿಗರು. ಈ ಪ್ರಯತ್ನದ ಕೀರ್ತಿಯು ಕನ್ನಡ ವೀರನಾದ ಕುಮಾರರಾಮನಿಗೆ ಹೇಗೆ ಸಲ್ಲುತ್ತದೆ ಎಂಬುದೇ ಈ ಕಥೆಯ ವಿಷಯ.

## ಪೂವಾಲಿಕುಲದ ಅರಸರು

### ಮುಮ್ಮಡಿಸಿಂಗ

ಕನ್ನಡನಾಡಿನ ಪೂರ್ವಭಾಗದಲ್ಲಿ ಮುಮ್ಮಡಿಸಿಂಗನೆಂಬ ನಾಯಕನು ನೂರಾರು ಕಿರಾತರನ್ನು ಆಳುತ್ತ ಒಂದು ಸಣ್ಣ ರಾಜ್ಯಕ್ಕೆ ಒಡೆಯನಾಗಿದ್ದನು.[೧] ಇವನು ಪೂವಾಲಿಕುಲದ ಕಾಮಗೇತಿ ವಂಶಕ್ಕೆ ಸೇರಿದವನು. ಮೊದಲು ರಾಜ್ಯಸ್ಥಾಪನೆ ಮಾಡಿದವನು ವೀರ ಕಸ್ತೂರಿ ನಾಯಕನೆಂಬ ವೀರ. ಅನಂತರ ಇಬ್ಬರು ರಾಜರು ಆಳಿದರು. ನಾಲ್ಕನೆಯವನೇ ಮುಮ್ಮಡಿಸಿಂಗ. ಇವನು ರಾಜನಾಗಿ ಎರಡು ಪಟ್ಟವನ್ನು ಆಳಿದನು.[೨] ಕುರುಗೋಡು, ಕಣೆಯಕಲ್ಲುನಾಡುಗಳು ಇವನ ರಾಜ್ಯ

* ನಂಜುಂಡನ ಪರದಾರಸೋದರ ರಾಮನ ಕಥೆ ಪುಟ ೫೯ ಪದ್ಯ ೨೬
M. A. R. 1929 at page 40 footnote (1)

‡ ಗಂಗಾದೇವಿಯ ವೀರಕಂಪಣರಾಯಚರಿತಂ (೮-೧೨)

೧ ನಾಗಸಂಗಯ್ಯನ ಸಾಂಗತ್ಯ ಸಂಧಿ ೧

೨ ಮಹಲಿಂಗಸ್ವಾಮಿಯ 'ಬಾಲಕುಮಾರ ರಾಮನ ಸಾಂಗತ್ಯ' ಸಂಧಿ ೧ ಪದಗಳು ೩೭ರಿಂದ ೩೯. ಒಂದು ಪಟ್ಟ ಎಂದರೆ ೧೨ ವರ್ಷ ಎಂದು ರೂಢಿಯಲ್ಲಿದೆ.

ದಲ್ಲಿದ್ದವು. ದೊರೆವಾಡಿ, ಸಿರಿಗೊಳಲು (ಸಿರೇಕೊಳ), ಮುದವಡಿ (ಮುರಡಿ) ಮುಂತಾದವು ಇವನ ರಾಜ್ಯದ ಮುಖ್ಯ ದುರ್ಗಗಳಾಗಿದ್ದವು. ಈ ರಾಜ್ಯ ಬಳ್ಳಾರಿ ಜಿಲ್ಲೆಯ ಕೆಲಭಾಗವನ್ನೂ, ಚಿತ್ರದುರ್ಗ ಜಿಲ್ಲೆಯ ಉತ್ತರಭಾಗವಾದ ಮೊಳಕಾಲ್ಮುರು, ಜಗಳೂರು, ದಾವಣಗೆರೆ, ಹರಿಹರ ತಾಲ್ಲೂಕುಗಳ ಕೆಲಭಾಗವನ್ನೂ ಒಳಕೊಂಡಿತ್ತು.

ಉತ್ತರದಲ್ಲಿದ್ದ ಸೇವುಣರೂ, ದಕ್ಷಿಣದಲ್ಲಿದ್ದ ಹೊಯಿಸಳರೂ ಆಗಾಗ ಇವನ ರಾಜ್ಯದ ಮೇಲೆ ನುಗ್ಗಿ ಕಾದಾಡುತ್ತಿದ್ದರು. ಈ ಕಾಳಗಗಳಲ್ಲೆಲ್ಲ ಮುಮ್ಮಡಿಸಿಂಗನಿಗೇ ಜಯವಾಗಿದ್ದಂತೆ ತೋರುವುದರಿಂದ ಇವನು ಮಹಾವೀರನಾಗಿದ್ದನೆಂದು ಹೇಳಬಹುದು. ಸೇವುಣ ಚಕ್ರವರ್ತಿಯಾದ ವೀರರಾಮದೇವನ ಆಳ್ವಿಕೆಯ ೧೩ನೆಯ ಸಂವತ್ಸರ (ಕ್ರಿ. ಶ. ೧೨೮೦) ದಲ್ಲಿ ಮಹಾಪ್ರಧಾನ ಚೌಡರಸನು ಮುಮ್ಮಡಿಸಿಂಗಯ್ಯನಾಯ್ಕನ ಮೇಲೆ 'ಕುರುಗೋಡುನಾಡಿನ ದೊರೆವಾಡಿಗೆ ನಡದು ಕಾದಿ ಹಲವಾರು ಕುದುರೆಯಂ ಕೊಂದು ಶಿವಲೋಕ ಪ್ರಾಪ್ತಿಯಾದನು.' ೧ ಕ್ರಿ. ಶ. ೧೨೮೧ನೆಯ ವಿಷುಸಂವತ್ಸರದಲ್ಲಿ ಮುಮ್ಮಡಿಸಿಂಗಯ್ಯನಾಯಕನು ವೇತಂಡಕಲ್ಲು ಮುಂದೆ ಸಂಗಯ್ಯನಾಯಕನೊಡನೆ ಕಾದಿದನು. ೨ ಕೋಟೆಯುಕಲ್ಲು ನೆಲೆವೀಡಿನಲ್ಲಿ ರಾಜ್ಯವಾಳುತ್ತಿದ್ದ ಈ ಕಾತಿಯ ಸಂಗಯ್ಯನಾಯಕನು ಕಣೆಯಕಲ್ಲು ನಾಡೊಳಗಿನ ಸಿರಿಗೊಳಲು (ಮೊಳಕಾಲ್ಮುರು ತಾಲ್ಲೂಕಿನಲ್ಲಿರುವ ಸಿರೇಕೊಳ) ಮುಂತಾದ ಕೋಟೆಗಳನ್ನು 'ಇರಿಯಲು' ಹೋದಾಗ ಇವನ ಕಡೆಯ ಭೀಮಯ್ಯನಾಯಕನು ಮಡಿದನು. ೩ ಇವೆರಡೂ ಒಂದೇ ಕಾಳಗದ ಮಾತು. ಆದ್ದರಿಂದ ಕಣೆಯಕಲ್ಲುನಾಡು ಮುಮ್ಮಡಿಸಿಂಗನಿಗೆ ಸೇರಿದ್ದು ಎಂದು ವ್ಯಕ್ತವಾಗುವುದು. ಶಕ ೧೨೦೪ ವಿಷುಸಂವತ್ಸರದ ಮಾರ್ಗಶಿರ

---

೧ ಚನ್ನಗಿರಿ ೨೪ ಹಿರೇಕೋಗಿಲೂರು ವೀರಗಲ್ಲು. ಕುರುಗೋಡು ಮತ್ತು ದೊರೆವಾಡಿ ಕೋಟೆಗಳನ್ನು ಇಮ್ಮಡಿ ವೀರಬಲ್ಲಾಳನು ಕ್ರಿ. ಶ. ೧೨೫೦ಕ್ಕಿಂತ ಮುಂಚೆಯೇ ಬೇರೆ ಕೋಟೆಗಳೊಡನೆ ವಶಮಾಡಿಕೊಂಡಿದ್ದನೆಂದು ತಿಳಿದುಬರುವುದು. ಚನ್ನರಾಯ ಪಟ್ಟಣ ೧೬೯.

೨ ಹೊಳಲ್ಕೆರೆ ೩೭ ಲೋಕದೊಳಲು ವೀರಕಲ್ಲು.

೩ ಹೊಳಲ್ಕೆರೆ ೪೧ ನುತ್ತಿಗಟ್ಟದ ವೀರಕಲ್ಲು.

ಮಾಸದಲ್ಲಿ (ಕ್ರಿ. ಶ. ೧೨೮೨) ಮುಮ್ಮಡಿಸಿಂಗಯ್ಯನಾಯಕನು ಬೆಮ್ಮತ್ತ ನೂರುಕಲ್ಲಿಗೆ ಅಂದರೆ ಈಗಿನ ಚಿತ್ರದುರ್ಗದ ಮೇಲೆ ದಂಡೆತ್ತಿ ಬಂದಾಗ ಹಿರಿಯೂರು ತಾಲ್ಲೂಕು ಚಳ್ಳಕೆರೆ ಎಂಬ ಗ್ರಾಮದ ತಿಪ್ಪಯ್ಯನಾಯಕನು ಯುದ್ಧದಲ್ಲಿ ಮಡಿದನು.[೧] ವೀರರಾಮದೇವನ ವಿಜಯರಾಜ್ಯೋದಯದ ೧೪ನೆಯ ಚಿತ್ರಭಾನು ಸಂವತ್ಸರದಲ್ಲಿ (ಕ್ರಿ. ಶ. ೧೨೮೨ ಅಥವಾ ೧೨೮೩) ಕೊಂಕಣದೇಶವನ್ನಾಳುತ್ತಿದ್ದ ಕನ್ನರದೇವನು ಮುಮ್ಮಡಿಸಿಂಗಯ್ಯ ನಾಯ್ಕನ ಮೇಲೆ ದೊರೆವಾಡಿಗೆ ನಡೆದು ಬಂದು ಮುತ್ತಿಗೆಹಾಕಿದಾಗ ಕನ್ನರದೇವನ ಪಕ್ಷದ ಮಹಾಪ್ರಧಾನ ವಣದೇವರಸನು ಕಾದು ಹಲ ವಾಳು ಕುದುರೆಗಳನ್ನು ಕೊಂದು ತಾನು ಜಿನಲೋಕವನ್ನು ಸೇರಿದನು [೨]

ಈ ಕಾಳಗಗಳೆಲ್ಲ ಕ್ರಿ. ಶ. ೧೨೮೦ರಿಂದ ಮೂರು ನಾಲ್ಕು ಸಂವತ್ಸರ ಗಳೊಳಗೆ ನಡೆದವು. ಮುಮ್ಮಡಿಸಿಂಗನು ಈ ಕಾಳಗಗಳು ನಡೆದ ನಂತರ ಎಷ್ಟು ವರ್ಷ ಜೀವಿಸಿದ್ದನೆಂಬುದಕ್ಕೆ ಆಧಾರ ದೊರೆತಿಲ್ಲ. ಕ್ರಿ. ಶ. ೧೩೦೦ ಕ್ಕಿಂತ ಮುಂಚೆ ಮುಮ್ಮಡಿಸಿಂಗನು ಮಡಿದಿರಬೇಕು ಎಂದು ಹರಿಹರದ ಒಂದು ಶಾಸನದಿಂದ ತಿಳಿಯುತ್ತದೆ.[೩] ಇವನಿಗೆ ಮಂಚಲೆ ಎಂಬ ರಾಣಿ, ಕಂಪಿಲರಾಯನೆಂಬ ಮಗ ಇದ್ದರು. ಖಂಡೆಯರಾಯನೆಂಬ ಇನ್ನೊಬ್ಬ ಮಗನೂ ಇದ್ದನು. ಇವನು ಇನ್ನೊಬ್ಬ ರಾಣಿಯ ಮಗನಾಗಿರಬಹುದು. ಇವನ ಕಾಲದಲ್ಲಿ ಮಂತ್ರಿಯಾಗಿದ್ದವನು ಬೈಚಪ್ಪ.

## ಖಂಡೆಯರಾಯ

ಮುಮ್ಮಡಿಸಿಂಗನ ಮಗ ಖಂಡೆಯರಾಯನು ವೀರರಾಮಚಂದ್ರ ವಿಜಯರಾಜ್ಯೋದಯದ ೩೨ನೆಯ ಶಾರ್ವರಿಸಂವತ್ಸರದಲ್ಲಿ (೧೩೦೦ A. D.) ಹರಿಹರವನ್ನು ದತ್ತಿಯಾಗಿ ಬ್ರಾಹ್ಮಣರಿಗೆ ಕೊಟ್ಟನು. ಪೂರ್ವ

---

೧ ಹಿರಿಯೂರು ತಾಲ್ಲೂಕು ಚಳ್ಳಕೆರೆ ಗ್ರಾಮದ ವೀರಕಲ್ಲು.

೨ M. A. R. 1935 Inscription No. 39.

೩ ದಾವಣಗೆರೆ ೨೬.

ದಲ್ಲಿಯೇ ಹರಿಹರವು ಬ್ರಾಹ್ಮಣರಿಗೆ ದಾನವಾಗಿತ್ತು. ಕೃಷ್ಣಕಂಧಾರನು ಜೀರ್ಣೋದ್ಧಾರ ಮಾಡಿ ಬ್ರಾಹ್ಮಣರಿಗೆ ಕೊಟ್ಟನು. ಪುನಃ ಖಂಡೆಯ ರಾಯನೂ ಇದನ್ನು ಧಾರೆಯಾಗಿ ಕೊಟ್ಟನು. ಕೃಷ್ಣಕಂಧಾರನು ದೇವ ಗಿರಿಯ ಸೇವ್ಣರಿಗೆ ಆಶ್ರಿತನಾದ ಮಂಡಲೇಶ್ವರನಾಗಿ ಕೊಂಕಣದೇಶಾಧಿ ಪತಿಯಾಗಿದ್ದನು. ಖಂಡೆಯರಾಯನು ಉಚ್ಚಂಗಿನಾಡಿನ ಮಂಡಲೇಶ್ವರ ನಾಗಿ ದೇವಗಿರಿಯ ರಾಮಚಂದ್ರನ ಆಶ್ರಿತನಾಗಿದ್ದಂತೆ ಕಾಣುತ್ತದೆ. ಇವನ ವಿಷಯವಾಗಿ ಹೆಚ್ಚಿಗೆ ಸಂಗತಿ ತಿಳಿದುಬಂದಿಲ್ಲ.

## ಕಂಪಿಲರಾಯ

ಮುಮ್ಮಡಿಸಿಂಗನ ರಾಣಿ ಮಂಚಲೆಯ ಹೊಟ್ಟೆಯಲ್ಲಿ ಕಂಪಿಲ ದೇವರ ವರಪ್ರಸಾದದಿಂದ ಹುಟ್ಟಿದವನೇ ಕಂಪಿಲ. ಇವನು ಎಳೆತನದಲ್ಲೇ ತಂದೆಯನ್ನು ಕಳೆದುಕೊಂಡು ತಾಯಿಯ ಪೋಷಣೆಯಲ್ಲಿದ್ದನು. ಆಗ ರಾಜ್ಯದಲ್ಲಿ ಕ್ಷಾಮಡಾಮರಗಳು ಪ್ರಾಪ್ತವಾಗಲು ವಲಸೆಹೊರಟು ಕೆಲವು ಕಾಲ ಜಟ್ಟಂಗಿ ಗಿರಿಯ ಬಳಿ ನೆಲಸಿದನು. ಅಲ್ಲಿರುವಾಗ ಕಂಪಿಲ ರಾಯನಿಗೆ ಕಾಟಮ್ಮನೆಂಬ ಹೆಂಡತಿಯ ಗರ್ಭದಲ್ಲಿ ಕಾಟನೆಂಬ ಮಗನು ಜಟ್ಟಂಗಿ ರಾಮದೇವರ ವರಪ್ರಸಾದದಿಂದ ಜನಿಸಿದನು.[೧] ಅಂದಿನಿಂದ ಜಟ್ಟಂಗಿ ರಾಮದೇವರು ಇವರ ಮನೆಯ ದೇವರಾದನು. ಅಲ್ಲಿಂದ ವಲಸೆ ಹೊರಟು ಮಾರ್ಗದಲ್ಲಿ ಲೋಹಗಿರಿಯ ಕುಮಾರಸ್ವಾಮಿಯನ್ನು ಪೂಜೆ ಮಾಡಿ ಮುಂದಕ್ಕೆ ನಡೆದು ಹೊಸಮಲೆ ಎಂಬ ಅರಣ್ಯಮಧ್ಯದಲ್ಲಿ ಒಂದು

೧ ಮಹಲಿಂಗಸ್ವಾಮಿಯು ಕಾಟನ ವಿಷಯದಲ್ಲಿ ಬೇರೆ ವಿಧವಾಗಿ ಹೇಳಿರುವನು. ಒಂದು ಗೊಲ್ಲರ ಗುಂಪಿನ ಯಜಮಾನನ ಹೆಂಡತಿ ಮೂಲಾನಕ್ಷತ್ರದಲ್ಲಿ ಒಂದು ಮಗು ವನ್ನು ಹಡೆದಳು. ತಂದೆತಾಯಿಗಳಿಗೆ ಮರಣವೆಂದು ತಿಳಿದು ಆ ಮಗುವನ್ನು ಅರಣ್ಯ ಮಧ್ಯದಲ್ಲಿದ್ದ 'ಬಿಲ್ಲುಕಾಟನಲಿಂಗ' ಎಂಬ ಗುಡಿಯ ಬಳಿ ಮಲಗಿಸಿ ಹೋದರು. ಆ ಅರಣ್ಯದಲ್ಲಿ ಸಂಚರಿಸುತ್ತಿದ್ದ ಕಂಪಿಲರಾಯನಿಗೆ ಮಗುವು ಕಾಣಿಸಲು ಮನೆಗೆ ತಂದನು. ಮಕ್ಕಳಿಲ್ಲದ ಹರಿಯಾಲದೇವಿಯು ಈ ಮಗುವನ್ನು ರಕ್ಷಿಸಿದಳು. ಕೆಲವು ಕಾಲದ ಮೇಲೆ ಕುಮಾರರಾಮನು ಜನಿಸಿದನು. ಬಾಲಕುಮಾರರಾಮನ ಸಾಂಗತ್ಯ ಸಂಧಿ ೧ ಪದ್ಯಗಳು ೫೭-೧೧೩.

ದುರ್ಗವನ್ನು ಕಟ್ಟಿಕೊಂಡು ಹೊಸಮಲೆಪಟ್ಟಣ ಎಂದು ಹೆಸರಿಟ್ಟು ವಾಸಿಸುತ್ತಿದ್ದನು. ಅನಂತರ ಪಟ್ಟಾಭಿಷಿಕ್ತನಾಗಿ ಗುತ್ತಿಯ ಅರಸನಾದ ಜಗದಪ್ಪರಾಯನಿಗೆ ಆಶ್ರಿತನಾಗಿ ಕಪ್ಪವನ್ನು ಕೊಡುತ್ತ ರಾಜ್ಯಭಾರ ಮಾಡುತ್ತಿದ್ದನು. ೧

ಕಂಪಿಲರಾಯನಿಗೆ ಹರಿಯಾಲದೇವಿ ಎಂಬ ಪಟ್ಟದ ರಾಣಿಯೂ ೨ ರತ್ನಾಜಿ ಎಂಬ ಮೋಹದ ಕಿರಿಯ ರಾಣಿಯೂ ೩ ಇದ್ದರು. ಇವರಲ್ಲದೆ ಕನ್ನಾಜಿ, ಹಂಪಾಜಿ, ಸಿಂಗಾಜಿ ಮತ್ತು ಸಿರಾಮಣಿ ಎಂಬ ರಾಣಿಯರು ಇದ್ದರು. ಹರಿಯಾಲದೇವಿಗೆ ಮಾರಮ್ಮ, ಕುಮಾರರಾಮ ಮತ್ತು ಸಿಂಗಮ್ಮ ಎಂಬ ಮಕ್ಕಳಾದರು. ಕಾಟಣ್ಣ, ಅಣ್ಣಾಭೈರವ, ಲಿಂಗಣ್ಣ ಎಂಬವರು ಬೇರೆ ಮಕ್ಕಳು; ಮುಸಲ್ಮಾನರು ಕಂಪಿಲರಾಯನ ೧೧ ಜನ ಮಕ್ಕಳನ್ನು ಕೈಸೆರೆಹಿಡಿದುಕೊಂಡು ಹೋದರು.೪ ಇವರಲ್ಲಿ ಕುಮಾರ ರಾಮ, ಕಾಟಣ್ಣ ಇಬ್ಬರು ರಾಮಲಕ್ಷ್ಮಣರಂತೆ ಅನ್ಯೋನ್ಯ ಪ್ರೀತಿಯಿಂದ ಇದ್ದರು. ತಂದೆಯ ಕಾಲದ ಹಿರಿಯನಾದ ಬೈಚಪ್ಪನೇ ಮುಖ್ಯ ಮಂತ್ರಿಯಾಗಿದ್ದನು. ಮಾವ ಮಲ್ಲಿಕರಾಜ, ಭಾವ ಭೈರವ ಎಂಬವರು ಇತರ ಮಂತ್ರಿಗಳು. ಭಂಡಾರಿ ಬುಕ್ಕ, ಹರಿಹರ ಇವರು ಭಾಂಡಾರದ ಅಧಿಕಾರಿಗಳು. ಭಾವ ಸಂಗಮನು ಕಂಪಿಲರಾಯನ ಮೋಹದ ಅಳಿಯ.

ಕಂಪಿಲರಾಯನು ಪ್ರವರ್ಧಮಾನನಾದಮೇಲೆ ದೇವಗಿರಿಯ ಸೇವುಣರ ಆಶ್ರಿತನಾಗಿಯೂ, ಕೆಲವು ವೇಳೆ ಅವರ ದಂಡನಾಯಕನಾಗಿಯೂ, ಸೇವುಣರ ವೈರಿಗಳಾದ ಹೊಯಿಸಳರ ಮೇಲೆ ದಂಡೆತ್ತಿ ಬಂದನು. ಶಾ. ಶಕ ೧೨೨೫ರಲ್ಲಿ (ಕ್ರಿ. ಶ. ೧೩೦೩) ಕಂಪಿಲರಾಯನು

---

೧ ಪರನಾರಿಯರಿಗೆ ಸೋದರನೆಂಬಂತ ಕಥೆ ಸಂಧಿ ೧.

೨ ಹರಿಯಾಲದೇವಿಯು ಗುಜರಾತುದೇಶದಿಂದ ರಾಜ್ಯಚ್ಯುತನಾಗಿ ಬಂದಿದ್ದ ಚಾರಾಮರಾಯ ಎಂಬ ರಾಜನ ಮಗಳು.

೩ ರತ್ನಾಜಿಯು ಡೊಂಬರವಳೆಂದೂ ಅವಳ ಆಟ ನೋಡಿ ಕಂಪಿಲರಾಯನು ಮೋಹಿಸಿದನೆಂದೂ ಮಹಲಿಂಗ ಕವಿಯು ಹೇಳಿರುವನು.

೪ Elliot and Dowson Vol. III P. 614 15.

ಹೊಯಿಸಳ ವೀರಬಲ್ಲಾಳದೇವರಸನ ರಾಜ್ಯಾಭ್ಯುದಯದಲ್ಲಿ ಹೊಳಲ್ಕೆರೆಗೆ ಮುತ್ತಿಗೆ ಹಾಕಿದನು. ಬೆಮ್ಮತ್ತನೂರು ನಗರದ ಮಂಡಲೇಶ್ವರನೂ, ವೀರಬಲ್ಲಾಳರಾಯನ ವೈದ್ಯನೂ ಆದ ಸೋಮಯ್ಯದಣ್ಣಾಯಕನೂ[೧] ಅವನ ಹಡಪದ ಸೋಯಣ್ಣನೂ[೨] ಈ ಕಾಳಗದಲ್ಲಿ ಮಡಿದರು. ಇದೇ ಕಾಳಗದಲ್ಲಿ ಬಸವಪ್ಪನೂ,[೩] ಸಸಿಗಾವುಂಡ, ಸಿದ್ಧನಾಯಕ ಮೊದಲಾದವರೂ[೪] ಮಡಿದರು. ಕ್ರಿ. ಶ. ೧೩೦೮ರ ವರೆಗೆ ಕಂಪಿಲ ರಾಯನು ಹೊಯಿಸಳ ರಾಜ್ಯದ ಮೇಲೆ ಎರಡು ಮೂರು ಬಾರಿ ದಂಡೆತ್ತಿ ಬಂದನು.[೫]

## ಕುಮಾರರಾಮ

ಕಂಪಿಲರಾಯನ ಪಟ್ಟದ ರಾಣಿಯಾದ ಹರಿಯಾಲದೇವಿಗೆ ಕೆಲವು ವರ್ಷ ಪುತ್ರಸಂತಾನವಾಗಲಿಲ್ಲ. ರಾಣಿಯು ಮನೆಯ ದೇವರಾದ ಜಟ್ಟಂಗಿ ರಾಮದೇವರಿಗೆ ಹರಕೆ ಮಾಡಿಕೊಳ್ಳಲು ಆ ದೇವರ ವರಪ್ರಸಾದ ದಿಂದ ಗಂಡು ಸಂತಾನವಾಯಿತು. ಆ ದೇವರ ಹೆಸರನ್ನೇ ಇಟ್ಟು ರಾಮ ನಾಥ ಎಂದು ನಾಮಕರಣ ಮಾಡಿದರು. ಆದರೆ ಪ್ರೀತಿಯಿಂದ ಕುಮಾರ ರಾಮ ಎಂದು ಕರೆಯುತ್ತಿದ್ದುದರಿಂದ ಆ ಹೆಸರೇ ರೂಢಿಯಾಯಿತು. ಚತುರ ನಾದ ರಾಮನಾಥನು ವಿದ್ಯಾವಿನಯಸಂಪನ್ನನಾಗಿ ಅಂಗಸಾಧನೆಗಳನ್ನು ಅಭ್ಯಾಸಮಾಡಿ, ಗಜತುರಗದೇರಾಟದಲ್ಲಿಯೂ ಕತ್ತಿಯ ವರಸೆ, ಬಾಣ ಪ್ರಯೋಗ ಮೊದಲಾದ ವೀರ ವಿದ್ಯೆಯಲ್ಲಿಯೂ ನಿಪುಣನಾದನು. ಇವನ ಮಲತಾಯಿ ರತ್ನಾಜಿ ಅತಿಶಯ ರೂಪಲಾವಣ್ಯವತಿ. ಅವಳ ಮನಸ್ಸು ಉನ್ನತವಲ್ಲ. ತನ್ನ ಮಗನಿಗೆ ಅವಳಿಂದ ಕೆಡುಕಾದೀತೆಂದು ಹರಿಯಾಲ

---

೧ M. A R. 1913 Para 85.
೨ M. A R. 1912 Para 93
೩ ಹೊಳಲ್ಕೆರೆ ೧೦೬.
೪ ಹೊಳಲ್ಕೆರೆ ೧೦೭.
೫ Mysore Gazetteer New Edition Vol II Part III

ದೇವಿ ಚಿಂತಿಸಿದಳು. ರಾಮನು ತಾಯಿಯ ಇಂಗಿತವರಿತು 'ಪರನಾರಿಯರಿಗೆ ಸಹೋದರನೆಂಬ' ಬಿರುದಿನ ರತ್ನದ ತೊಡವನ್ನು ಮಾಡಿಸಿ, ಧರಿಸಿ ತಾಯಿಯ ಚಿಂತೆಯನ್ನು ಹೋಗಲಾಡಿಸಿದನು.

ಪ್ರವರ್ಧಮಾನನಾದಮೇಲೆ ಕುಮಾರರಾಮನು ಬೇಟೆಗೆ ಹೋಗಿದ್ದಾಗ ಒಂದು ದಿನ, ಕುಮ್ಮಟದುರ್ಗವೆಂಬ ಹಾಳುಕೋಟೆಯನ್ನು ನೋಡಿ ಅದು ರಾಜಧಾನಿಗೆ ಯೋಗ್ಯ ಸ್ಥಳವೆಂದು ತಂದೆಗೆ ತಿಳಿಸಿದನು. ಮಗನ ಅಭಿಪ್ರಾಯದಂತೆ ರಾಯನು ಕೋಟೆಯ ರಚನೆಯಲ್ಲಿ ನಿಪುಣನಾದ, ತನ್ನ ಮುಖ್ಯ ಮಂತ್ರಿ ಬೈಚಪ್ಪನಿಂದ ಹೊಸ ಕುಮ್ಮಟದುರ್ಗವನ್ನು ಕಟ್ಟಿಸಿದನು. ಕುಮಾರರಾಮನು ಶುಭಮುಹೂರ್ತದಲ್ಲಿ ಕೋಟೆಯನ್ನು ಪ್ರವೇಶಮಾಡಿ ಅಲ್ಲಿ ನೆಲೆಸಿದನು. ನಾನಾ ದೇಶದ ವೀರರನ್ನು ಆಹ್ವಾನಿಸಿ, ಕಟ್ಟಾಳುಗಳಾದ ಬೇಡರ ಪಡೆಯೊಂದನ್ನು ಕಟ್ಟಿ, ಅವರೊಡನೆ ದಂಡೆತ್ತಿ ಹೋಗಿ ಸುತ್ತಣ ರಾಜ್ಯವನ್ನು ಒತ್ತಿ ಹಾನಗಲ್ಲು, ಬಾದಾಮಿ, ಮೋನಾದಿ ಮೊದಲಾದ ಕೋಟೆಗಳನ್ನು ವಶಪಡಿಸಿಕೊಂಡನು. ಇವನ ಉಪಟಳವನ್ನು ಹೊಯಿಸಳರೂ, ಗುತ್ತಿಯ ಅರಸರೂ ಸಹಿಸಲಾರದಾದರು.

ಮುಸಲ್ಮಾನರ ದಾಳಿಯಿಂದ ಚೇತರಿಸಿಕೊಂಡಿದ್ದ ಮುಮ್ಮಡಿ ವೀರಬಲ್ಲಾಳರಾಯನು ಕಂಪಿಲದೇವರಾಯನ ಮೇಲೆ ಶಕ ೧೨೪೨ನೆಯ ರೌದ್ರಿ ಸಂವತ್ಸರದ ಚೈತ್ರ ಬಹುಳ ೧ ಶನಿವಾರ (1320 A. D.) ದೊರೆವಾಡಿಗೆ ಎತ್ತಿ ನಡೆದು, ಬಳಹ ಎಂಬಲ್ಲಿ ಬೀಡು ಬಿಟ್ಟಿರಲು, ಕಂಪಿಲದೇವನು ತನ್ನ ಸಾವರಣೆ ಸಹಿತ ನಡೆದು ಬಂದು ಉಭಯ ದಳ ಸಮ್ಮುಖವಾಗಿ ಮೋಹರಿಸಿದಲ್ಲಿ (ಕಾಳಗವಾಡಲು), ಕಂಪಿಲದೇವನ ಮನೆಯ ಅಗ್ಗಳೆಯ ರಾವುತ ಕಕ್ಕಲದೇವನು ಬಲ್ಲಾಳರಾಯನ ಕಡೆಯ ಕೂರಕನನ್ನು ತಿವಿಯಲು ಕೂರಕನು ಸಮರಾಂಗಣದಲ್ಲಿ ಬಿದ್ದು ಸಗ್ಗಕೇರಿದನು.[೧] ಕಂಪಿಲದೇವನಿಗೆ ಜಯವಾಯಿತು.

ಓರಗಲ್ಲು ಅರಸನಾದ ಪ್ರತಾಪರುದ್ರರಾಯನ ಮಗನಾದ ಎಪ್ಪಟಿರಾಜನ[೨] ಬಳಿಯಲ್ಲಿ ಒಂದು ಲಕ್ಷ ವರಹ ಬೆಲೆಯ ಬೊಲ್ಲನೆಂಬ

---

೧ ನಗರ ೧೯. ೨ ಪ್ರತಾಪರುದ್ರರಾಯನಿಗೆ ಎಪ್ಪಟಿರಾಜನೆಂಬ ಮಗನಿದ್ದನೆಂಬ ಸಂಗತಿಯು ಚರಿತ್ರೆಯಿಂದ ವ್ಯಕ್ತವಾಗುವದಿಲ್ಲ. ಕೃಷ್ಣನೆಂಬ ಮಗನು ಇದ್ದನು.

ಹೆಸರಾಗ ಕುದುರೆ ಇತ್ತು. ಒಂದು ಸಲ ಕಂಪಿಲರಾಯನು ಕುಮಾರ ರಾಮನನ್ನು ಮೂದಲಿಸಿ 'ನೀನು ಧೀರನಾದರೆ ಎಪ್ಪಟಿರಾಜನನ್ನು ಗೆದ್ದು ಬೊಲ್ಲನನ್ನು ಹಿಡಿದು ತರುವುದು' ಎಂದು ತಿಳಿಸಿದನು. ಅದರಂತೆ ಕುಮಾರರಾಮನು ಓರಗಲ್ಲಿಗೆ ಹೋಗಿ ಎಪ್ಪಟಿರಾಜನನ್ನು ಸೋಲಿಸಿ ಬೊಲ್ಲನನ್ನು ಏರಿ ಹಿಂತಿರುಗಿದನು. ಓರಗಲ್ಲಿನ ದಳವಾಯಿಯಾಗಿದ್ದ ಪಟ್ಟಣದ ಶೆಟ್ಟಿ ಲಿಂಗಣ್ಣನೆಂಬ ವೀರನು ಪ್ರತಾಪರುದ್ರನ ರಾಜ್ಯವನ್ನು ತ್ಯಜಿಸಿ, ಕುಮಾರರಾಮನ ಶೌರ್ಯಕ್ಕೆ ಮೆಚ್ಚಿ ಅವನನ್ನು ಆಶ್ರಯಿಸಿ ಕುಮ್ಮಟದುರ್ಗಕ್ಕೆ ಬಂದನು. ಬೊಲ್ಲನನ್ನು ಏರಿ ಬಂದ ಮಗನನ್ನು ಕಂಡು ಕಂಪಿಲರಾಯನು ಹಿರಿಹಿರಿ ಹಿಗ್ಗಿದನು.

ಸುಲ್ತಾನನಿಗೆ ಸರ್ವಾಂಗಸುಂದರಳೂ, ವಿವಾಹ ಯೋಗ್ಯಳೂ ಆದ ಬಾಬಮ್ಮನೆಂಬ ಪ್ರೇಮದ ಕುವರಿ ಇದ್ದಳು. ಈ ರಾಜಕುಮಾರಿ ತನ್ನ ತಂದೆಯೊಡನೆಯೇ ಇರುತ್ತಿದ್ದು ಕುಮಾರರಾಮನ ಶೌರ್ಯವನ್ನೂ ಸೌಂದರ್ಯವನ್ನೂ ಕೇಳಿ, ಅವನಲ್ಲಿಯೇ ಅನುರಕ್ತಳಾಗಿ ರಾಮನನ್ನಲ್ಲದೆ ಬೇರೊಬ್ಬನನ್ನು ವರಿಸುವುದಿಲ್ಲವೆಂದು ಪಂಥಮಾಡಿದಳು. ಇದನ್ನು ತಿಳಿದು ಸುಲ್ತಾನನು ಉಪಾಯದಿಂದಲೂ, ಉದಾರವಾದ ಬಳುವಳಿಗಳನ್ನು ಕೊಡುವುದಾಗಿ ಹೇಳುವುದರಿಂದಲೂ ಕುಮಾರರಾಮನನ್ನು ತನ್ನ ಆಸ್ಥಾನಕ್ಕೆ ಕರೆಯಿಸಲು ಮಾಡಿದ ಪ್ರಯತ್ನಗಳೆಲ್ಲ ವಿಫಲವಾದವು. ದಂಡೋಪಾಯಕ್ಕೆ ಹೆದರಿ ಕಂಪಿಲರಾಯನು ವಿವಾಹ ಸಂಬಂಧಕ್ಕೆ ಒಪ್ಪಬಹುದೆಂದು ಯೋಚಿಸಿ ಒಂದು ಸಣ್ಣ ಸೇನೆಯನ್ನು ಕನ್ನಡನಾಡಿಗೆ ಕಳಿಸಿದನು. ಸುಲ್ತಾನನ ಪಾದುಕೆಗಳನ್ನಿಟ್ಟಿದ್ದ ಪಲ್ಲಕ್ಕಿಯೊಂದು ಈ ಸೇನೆಯ ಜೊತೆಗೆ ಇತ್ತು. ಆ ಪಾದುಕೆಗೆ ವಂದಿಸಿ ಕಾಣಿಕೆಯೊಪ್ಪಿಸಬೇಕು ಅಥವಾ ಕುಮಾರರಾಮನನ್ನು ಸುಲ್ತಾನನ ಬಳಿಗೆ ಕಳಿಸಬೇಕು ಎಂದು ಸುಲ್ತಾನನ ಅಪ್ಪಣೆಯನ್ನು ಕಂಪಿಲರಾಯನಿಗೆ ಅರುಹಲು, ಆ ಸುದ್ದಿಯನ್ನು ಕೇಳಿದ ಕುಮಾರರಾಮನು ಅವಮಾನವನ್ನು ತಾಳಲಾರದೆ ಪಲ್ಲಕ್ಕಿಯಲ್ಲಿದ್ದ ಪಾದುಕೆ ಮೆಟ್ಟಿ ಸುಲ್ತಾನನ ಕಡೆಯವರಿಗೆ ಅಪಮಾನ ಮಾಡಿದನು. ಈ ಸುದ್ದಿ ಸುಲ್ತಾನನಿಗೆ ತಿಳಿಯಿತು. ಕುಮಾರ

ರಾಮನನ್ನು ಹಿಡಿದು ತಂದು ಒಪ್ಪಿಸುವಂತೆ ತನ್ನ ಆಶ್ರಿತನಾದ ಗುತ್ತಿಯ ಅರಸ ಜಗದಪ್ಪರಾಯನಿಗೆ ಸುಲ್ತಾನನು ಆಜ್ಞೆ ಮಾಡಿದನು.

ಗುತ್ತಿಯ ಜಗದಪ್ಪರಾಯನು ತನ್ನ ನೆರೆಹೊರೆಯ ರಾಜರ ಸಹಾಯದಿಂದ ಒಂದು ಲಕ್ಷ ಸೈನ್ಯವನ್ನು ಕೂಡಿಸಿ ಕುಮ್ಮಟದುರ್ಗಕ್ಕೆ ಮುತ್ತಿಗೆ ಹಾಕಿ, ಸೋತು ಹಿಮ್ಮೆಟ್ಟಿದನು. ಆದರೆ ಕುಮಾರರಾಮನ ಶೌರ್ಯಕ್ಕೆ ಮೆಚ್ಚಿ ತನ್ನ ಮಗಳು ರಾಮಲಾದೇವಿಯನ್ನು ಕುಮಾರರಾಮನಿಗೆ ವಿವಾಹ ಮಾಡಿಕೊಳ್ಳಬೇಕೆಂದು ಕಂಪಿಲರಾಯನಿಗೆ ಹೇಳಿ ಕಳುಹಿಸಿದನು. ಕಂಪಿಲರಾಯನು ಸಂತೋಷದಿಂದ ಒಪ್ಪಿ ರಾಮಲಾದೇವಿಯೊಡನೆ ಕಾಮಕ್ಕ, ಸೋಮಾಯಿ, ಭೂಮಾಯಿ ಮತ್ತು ತಿಮ್ಮಕ್ಕ ಒಟ್ಟಿಗೆ ಪಂಚಕನ್ಯೆಯರನ್ನು ತಂದು, ಕುಮಾರರಾಮನಿಗೆ ಮಾಘ ಶುದ್ಧ ತೃತೀಯೆ ಗುರುವಾರ ದಿವಸ ಸೂರ್ಯೋದಯದ ೧೦ ಗಳಿಗೆಗೆ ಸಲ್ಲುವ ಅಮೃತ ಸಿದ್ಧಿಯೋಗದಲ್ಲಿ ಮಹಾ ವೈಭವದಿಂದ ಮದುವೆ ಮಾಡಿದನು. ಶತ್ರುಗಳು ಮಿತ್ರರಾದರು.

ಹುಳಿಯಾರಿನ ಸಾಮಂತಾಧಿಪತಿ ಮಾರಸಗೌಡನು ಕುಮಾರರಾಮನ ಹೆಗ್ಗಳಿಕೆಯನ್ನು ಕೇಳಿ ಹೊಟ್ಟೆಕಿಚ್ಚಿನಿಂದ ಅವನನ್ನು ಹೀಯಾಳಿಸಿ, ಸೆರೆಹಿಡಿಯುವುದಾಗಿ ಬಂಬಕೊಚ್ಚಿಕೊಂಡನು. ಬೇಹಿನವರು ಕುಮಾರರಾಮನಿಗೆ ಈ ಸುದ್ದಿಯನ್ನು ತಿಳಿಸಿದರು. ಕೂಡಲೆ ಸೇನಾ ಸಮೇತನಾಗಿ ಬೊಲ್ಲನನ್ನು ಏರಿ ಪ್ರಯಾಣ ಬೆಳೆಸಿ ಗಂಟಬಾಗಿಲು ಕೂಡಲಿಗೆ, ಕಣಜನಹಳ್ಳಿ, ಬೂದಿಯಾನಹಳ್ಳಿ ಮತ್ತು ಎಲ್ಲೋಡು ಮುಂತಾದ ಸ್ಥಳಗಳಲ್ಲಿ ಬೀಡುಬಿಟ್ಟು ಹುಳಿಯಾರಿನ ನಂದನವನದಲ್ಲಿ ಬಂದಿಳಿದನು. ಮಾರಸಗೌಡನು ಸೋತು ಒಂದು ಬಿಂದಿಗೆ ಹೊನ್ನು ಕಪ್ಪ ಕೊಟ್ಟು, ಐದು ಊರು ಒಪ್ಪಿಸಿ ತನ್ನ ಬಳಿ ಇದ್ದ ಹೊನ್ನದ ಗಿಳಿಯನ್ನು ಉಡುಗೊರೆ ಕೊಟ್ಟನು. ಈ ವೇಳೆಗೆ ವೀರಬಲ್ಲಾಳನ ಮಹಾ ಪ್ರಧಾನ ಬೇಚಿದಣ್ಣಾಯಕನೂ ಅವನ ಮಗ ಸಿಂಗಯ್ಯದಣ್ಣಾಯಕನೂ ಮಾರಸಗೌಡನ ಸಹಾಯಕ್ಕೆ ಬಂದು ಹಿಂದಿರುಗಿ ಹೋಗುತ್ತಿದ್ದ ಕುಮಾರರಾಮನನ್ನೂ ಕಂಪಿಲದೇವರಾಯನನ್ನೂ ಎದುರಿಸಿದರು.*

* ತಿಪಟೂರು ೨೪

ಹೊಯಿಸಳರಿಗೆ ಸೋಲಾಯಿತು. ಆಗ ಮಡಿದ ಬಕ್ಕಯ್ಯನಾಯ್ಕನ ಅಣ್ಣ ನಾಗನಾಯ್ಕನಿಗೆ ಶಕ ೧೨೪೭ನೆಯ ಕ್ರೋಧನ ಸಂವತ್ಸರದಲ್ಲಿ ( 1325 A. D. ) ಬೇಚಿಟಣ್ಣಾಯಕನು ನೆತ್ತರುಕೊಡಗಿಯನ್ನು ಕೊಟ್ಟನು.೧

ಗಯಾಸುದ್ದೀನನ ಆಕಸ್ಮಿಕ ಮರಣದ ತರುವಾಯ ಮುಹಮ್ಮದ್ ಬಿನ್ ತೊಗಲಖನು ಪಟ್ಟಕ್ಕೆ ಬಂದನಷ್ಟೆ. ಆಗ ಪದ್ಧತಿಯ ಪ್ರಕಾರ ಆಸ್ಥಾನದ ಸರದಾರರೆಲ್ಲರೂ ಹೊಸ ಸುಲ್ತಾನನಿಗೆ ಪ್ರಮಾಣವಚನವನ್ನು ಮಾಡಿದರು. ಇವನ ರೀತಿಗೆ ಒಡಂಬಡದ ಬಹಾಉದ್ದೀನ್ ಗುಸ್ತಾಸ್ಪ್, ಅಥವಾ ಬಾದೂರಖಾನ್ ಎಂಬ ಸರದಾರನು ಪ್ರಮಾಣವಚನಕ್ಕೆ ಒಪ್ಪಲಿಲ್ಲ. ಇವನು ಗಯಾಸುದ್ದೀನನ ಸೋದರಿಯ ಮಗ; ಧೀರನೂ, ಶೂರನೂ ಆಗಿದ್ದನು. ಕನ್ನಡನಾಡಿನಲ್ಲಿ ಗುಲ್ಬರ್ಗದ ಬಳಿಯ ಸಾಗರ ಪ್ರಾಂತಾಧಿಕಾರಿಯಾಗಿದ್ದನು.

ಸುಲ್ತಾನ ಮುಹಮ್ಮದನು ಕೋಪಗೊಂಡು೨ ಈ ಸರದಾರನನ್ನು ಹಿಡಿದು ಆಸ್ಥಾನಕ್ಕೆ ತರಲು ಸೇನೆಯನ್ನು ಕಳಿಸಿದನು. ಎರಡು ಸೇನೆಯೂ ಸಂಧಿಸಿ ಘೋರ ಕಾಳಗವಾಯಿತು. ಸುಲ್ತಾನನ ಸೇನೆಗೆ ಜಯವಾಯಿತು; ಬಾದೂರಖಾನನು ಪ್ರಾಣಭಯದಿಂದ ಕೆಲವು ಹಿತಚಿಂತಕರೊಡನೆ ಓಡಿಹೋಗಿ ದಕ್ಷಿಣದೇಶದ ರಾಜರ ಮರೆಹೊಕ್ಕನು. ಸುಲ್ತಾನನ ಕೋಪಕ್ಕೆ ಹೆದರಿ ಇವನನ್ನು ಮರೆಹಾಕಿಕೊಳ್ಳಲು ಪ್ರತಾಪರುದ್ರರಾಯ, ಮುಂಗಲಿಯ ಸಿಂಗರಾಯ, ಗುತ್ತಿಯ ಜಗದಪ್ಪರಾಯ ಮೊದಲಾದವರು ಯಾರೂ ಅರಿಯದಂತೆ ಕೊಂಚ ಹಣ ಸಹಾಯ ಮಾತ್ರ ಮಾಡಿ ಮುಂದಕ್ಕೆ ಕಳಿಸಿದರು. ಕುಮಾರರಾಮನಿಗೆ ತನ್ನ ಸ್ಥಿತಿಯನ್ನು ತಿಳಿಸಲು, ಅವನು ಸಂತೋಷವಾಗಿ 'ಮರೆಹೊಕ್ಕರ ಕಾಪಾಡದಿರುವವರ ಗಂಡ'ನೆಂಬ ಬಿರುದನ್ನು ಧರಿಸಿ ಬಾದೂರನಿಗೆ ರಕ್ಷಣೆಯಿತ್ತನು. ಕಂಪಿಲ

೧ ಹಿರಿಯೂರು ೧೬

೨ ಆಶ್ರಿತನಾಪಸ್ತಿಮುಂಗಲಿಯ ರಾಜನು ದಿಳ್ಳಿಯ ಆಸ್ಥಾನಕ್ಕೆ ಕಪ್ಪಕಾಣಿಕೆಯ ಜೊತೆಗೆ ಒಂದು ಬಿಲ್ಲನ್ನು ಕಳುಹಿಸಿದ್ದನು. ಅದನ್ನು ಉಪಯೋಗಿಸುವ ಶಕ್ತರು ಯಾರೂ ಇರಲಿಲ್ಲ.

ರಾಯನು ಮುಂದೊದಗಬಹುದಾದ ಕಷ್ಟವನ್ನರಿತಿದ್ದರೂ ತನ್ನ ಮಗನ ಧೀರತನಕ್ಕೆ ಮೆಚ್ಚಿ ತನ್ನ ಒಪ್ಪಿಗೆಯನ್ನಿತ್ತನು.

ಓಡಿಹೋದ ಬಾದೂರನನ್ನು ಎಲ್ಲಿದ್ದರೂ ಹುಡುಕಿ, ಬಂಧಿಸಿ, ಎಳೆತರಿಸಿ ಅವನ ಚರ್ಮವನ್ನು ಸುಲಿಸಿ ದಿಳ್ಳಿಪಟ್ಟಣಕ್ಕೆ ಒಲಿಯಾಗಿ ಕೊಡಬೇಕೆಂದು ತನ್ನ ಸೇನಾಪತಿಯಾದ ನೇಮಿಖಾನನಿಗೆ ಸುಲ್ತಾನನು ಅಪ್ಪಣೆ ಇತ್ತನು. ಕೂಡಲೆ ನೇಮಿಖಾನನು ಬೇಹಿನ ಚಾರರಿಂದ ಬಾದೂರಖಾನನು ಕುಮ್ಮಟದುರ್ಗದಲ್ಲಿ ಕುಮಾರರಾಮನ ಆಶ್ರಯದಲ್ಲಿರುವನೆಂದು ತಿಳಿದು, ದೊಡ್ಡ ಸೈನ್ಯದೊಡನೆ ಬಂದು ಆ ದುರ್ಗಕ್ಕೆ ಮುತ್ತಿಗೆ ಹಾಕಿದನು. ಬಾದೂರಖಾನನನ್ನು ತನಗೆ ಒಪ್ಪಿಸಿ, ಬಾಬನಮ್ಮನನ್ನು ಮದುವೆಯಾಗಿ ಸುಖವಾಗಿ ಬಾಳೆಂದು ಸಮುದೀಖಾನನೆಂಬ ಸರದಾರನ ಮೂಲಕ ಸಂಧಿ ಪ್ರಯತ್ನವೂ ನಡೆಯಿತು. ಈ ಸಂಧಾನಕ್ಕೆ ಕುಮಾರರಾಮನು ಒಪ್ಪಲಿಲ್ಲ. ಬಲವಾದ ಕಾಳಗವು ನಡೆದು, ಕಗ್ಗೊಲೆಗಳಾಗಿ, ಉಭಯ ದಳಗಳಲ್ಲಿಯೂ ಅನೇಕ ವೀರರು ಮಡಿದರು. ನೇಮಿಖಾನನು ಗುಡ್ಡಗಾಡುಗಳಲ್ಲಿ ಬೇಡರ ಸಂಗಡ ಕಾದಾಡಲಾರದೆ ಹಿಂದಿರುಗಿದನು.

ನೇಮಿಖಾನನು ಅವಮಾನ ತೀರಿಸಿಕೊಳ್ಳಲು ದಕ್ಷಿಣದೇಶದ ಎಲ್ಲ ರಾಜರ ಸಹಾಯದಿಂದ ಕುಮ್ಮಟದುರ್ಗವನ್ನು ಮುತ್ತಿ ರಾಮನನ್ನು ಸೆರೆಹಿಡಿದು ದಿಳ್ಳಿಗೆ ಕಳಿಸಬೇಕೆಂದು ಬಲ್ಲಾಳರಾಯನಿಗೆ ಕಾಗದ ಬರೆದನು. ಓರಗಲ್ಲಿನ ಪ್ರತಾಪರುದ್ರರಾಯ, ಮುಂಗಲಿಯ ಸಿಂಗರಾಯ,[೧] ಲಾಳ, ಮಾಳವ, ಮಲೆಯಾಳ, ಕೊಂಕಣದೇಶ ಮೊದಲಾದ ದೇಶಗಳ ರಾಜರೂ ಸಹಾಯಕ್ಕಾಗಿ ಸೈನ್ಯವನ್ನು ಕಳುಹಿಸಿದರು. ಚಿಪ್ಪಗಿರಿಯ[೨] ಮೊಗಲ

---

೧ ಸಿಂಗರಾಯ ಇವನು ವೆಂಕಟಗಿರಿ ಜಮೀನುದಾರರ ಪೂರ್ವಿಕನು. ಯರ್ರಪಾಚನಿಗೆ ಸಿಂಗ, ಪೆನ್ನ ಮತ್ತು ಡಾಚ ಎಂಬ ಮೂರು ಜನ ಮಕ್ಕಳಿದ್ದರು. ಇವರು ಕ್ರಿ. ಶ, ೧೩೨೩ ರಲ್ಲಿ ಮುಸಲ್ಮಾನರಿಂದ ಓರಗಲ್ಲು ನಗರವು ದಾಳಿಮಾಡಲ್ಪಟ್ಟಾಗ ಅಲ್ಲಿ ಇದ್ದರು. (ವೇಲುಗೋಟಿ ವಾರಿ ವಂಶಾವಳಿ by Dr. Venkataramanayya A. I. M. S. XXX 475)

೨ ಚಿಪ್ಪಗಿರಿ ಬಳ್ಳಾರಿ ಜಿಲ್ಲೆಯಲ್ಲಿ ಆಲೂರು ತಾಲೂಕಿನಲ್ಲಿದೆ. ಆಲೂರಿನಿಂದ ಆಗ್ನೇಯಕ್ಕೆ ಗುಂತಕಲ್ಲು ರಸ್ತೆಯಲ್ಲಿ ಹದಿಮೂರು ಮೈಲು ದೂರದಲ್ಲಿದೆ.

ನೆಂಬ ರಾಜ್ಯಾಧಿಕಾರಿಯು ಎಪ್ಪತ್ತು ಸಾವಿರ ಕುದುರೆಗಳೊಡನೆ ಬಲ್ಲಾಳನ ಸಹಾಯಕ್ಕೆ ಬಂದನು.

ಎಲ್ಲರೂ ಒಂದೆಡೆ ಸೇರಿದರು. ಕುಮ್ಮಟದುರ್ಗಕ್ಕೆ ಮೂರನೆಯ ದಿನವೇ ಪ್ರಯಾಣಹೊರಟು, ಕುಮ್ಮಟದುರ್ಗಕ್ಕೆ ದಾಳಿಯಿಟ್ಟು, ಕುಮಾರರಾಮನನ್ನು ಕೋಳುಹಿಡಿಯಬೇಕೆಂದು ಮೊಗಲ ವಜೀರನು ಹೇಳಿದನು. ರುದ್ರರಾಯನು ಆ ರೀತಿ ಆಗದು; ನೇಮಖಾನನೇ ತನ್ನ ಬಲವಾದ ಸೈನ್ಯದಿಂದ ಕುಮ್ಮಟದುರ್ಗದ ಕಲ್ಲಿನಲ್ಲಿ ಸಿಕ್ಕಿಕೊಂಡು ನಗುಪಾಟಾಗಿ ಓಡಿಹೋದನು ಎಂದು ಉತ್ತರಪತ್ತನು. ಕಂಪಿಲರಾಯನ ಸೀಮೆಯ ಒಂದು ದೊಡ್ಡ ಕೋಟೆಯನ್ನು ನಾವು ಮುತ್ತಿಕೊಂಡರೆ ಕುಮಾರರಾಮನು ಅಲ್ಲಿಗೆ ತಾನಾಗಿಯೇ ಬರುವನು. ನಾವು ಅವನನ್ನು ಮುತ್ತಿಕೊಂಡು, ಅವನ ಸೈನ್ಯವನ್ನು ತುಂಡುತುಂಡಾಗಿ ಖಂಡಿಸಿ ರಾಮನನ್ನು ಕೈಸೆರೆ ಹಿಡಿದು ದಿಳ್ಳಿಗೆ ಕಳಿಸೋಣ; ಅನಂತರ ಕುಮ್ಮಟದುರ್ಗವು ನಮ್ಮ ಕೈಗೆ ಸುಲಭವಾಗಿ ಸಿಗುವುದು ಎಂದು ನುಡಿಯಲು ಈ ಸಲಹೆಯನ್ನು ಎಲ್ಲರೂ ಒಪ್ಪಿದರು. ಕಂಪಿಲದೇವರಾಯನ ಸರ್ವಸ್ವವನ್ನು ಅಪಹರಿಸಲು ದಿಗ್ವಿಜಯ ಪ್ರಯಾಣಭೇರಿಯನ್ನು ಹೊಡಿಸಿ ಶುಭಮುಹೂರ್ತದಲ್ಲಿ ಹೊರಟರು. ಸಿರಗುಪ್ಪೆ* ಗೈದಿ ಬೀಡು ಬಿಟ್ಟರು. ಆ ವಾರ್ತೆಯನ್ನು ಕಂಪಿಲರಾಯನು ಕೇಳಿ ತನ್ನ ಮಗ ಕುಮಾರರಾಮ, ಬಾದೂರಖಾನ, ಅಣ್ಣಾ ಕಾಟಣ್ಣಾ, ಚಾರಾಮರಾಯನ ಮಕ್ಕಳು ಮುಂತಾದವರೊಡನೆ ೭೦೦೦೦ ಕುದುರೆ, ೭೦೦೦೦ ಕಾಲಾಳು ಮತ್ತು ಆನೆಯ ಹಿಂಡುಗಳೊಂದಿಗೆ ಬಂದಿಳಿದನು. ಬಾದೂರನು ಶತ್ರು

---

ಈ ಗ್ರಾಮದಲ್ಲಿರುವ ಬಸದಿಗಳಿಂದಲೂ, ತೀರ್ಥಂಕರರ ವಿಗ್ರಹಗಳಿಂದಲೂ ಇದು ಒಂದು ಕಾಲದಲ್ಲಿ ಜೈನರ ಮುಖ್ಯಸ್ಥಳವಾಗಿತ್ತೆಂದು ತಿಳಿಯಬರುವುದು. ಬಿಜ್ಜಳನು ತನ್ನ ರಾಣೀವಾಸದವರನ್ನು ಈ ಕೋಟೆಯಲ್ಲಿಟ್ಟಿದ್ದನಂತೆ (Bellary District Gazetteer at page 210) ಮುಸಲ್ಮಾನರು ದಕ್ಷಿಣದೇಶಕ್ಕೆ ಪ್ರವೇಶಿಸಿದ ಮೇಲೆ ಕೆಲವು ಕಾಲ ಅವರ ರಾಜ್ಯವಾಗಿದ್ದಂತೆ ಕಾಣುತ್ತದೆ. ಪ್ರಸಕ್ತ ಕಾಲದಲ್ಲಿ ಮೊಗಲನೆಂಬ ಸರದಾರನು ಈ ರಾಜ್ಯಾಧಿಕಾರಿಯಾಗಿದ್ದನು ಎಂದು ನಾಗಸಂಗಯ್ಯನ ಗ್ರಂಥದಿಂದ ತಿಳಿದುಬರುವುದು.

* ಸಿರಗುಪ್ಪೆ ಬಳ್ಳಾರಿ ಜಿಲ್ಲೆಯಲ್ಲಿ ತುಂಗಭದ್ರಾ ನದಿಯ ಬಲಭಾಗದಲ್ಲಿದೆ.

ಗಳನ್ನು ಎದುರಿಸಿದನು. ಬಲ್ಲಾಳನ ಸೇನಾನಿ ಬೇಚಿಪಣ್ಣಾಯಕನು ಸರ್ವರೂ ಭಲಾ ಎನ್ನುವಂತೆ ಧುರದಲ್ಲಿ ಹೊಕ್ಕು ಇರಿದು ಒಕ್ಕಲಿಕ್ಕಿ ಕಾದಿದನು. ಅವನ ಮೈದುನ ಸಕ್ಕಿಸಹಣಿ ಎಂಬ ವೀರನು ಬಲ್ಲಾಳ ಭೂಪಾಲನಿಗೆ ಭಾಷೆಕೊಟ್ಟು ಕಾದಿದನು.[೧] ಭಾರಿ ಕಾಳಗ ನಡೆದು ಬಾದೂರಖಾನನಿಗೆ ಗಾಯವಾಯಿತು. ಶತ್ರುಗಳ ಕಡೆಯ ಬಿಸಮಿಲ್ಲಾ ಖಾನನೂ, ಮೊಗಲಖಾನನೂ ಮಡಿದರು. ಬೇಚಿದಣ್ಣಾಯಕನೂ ಮಡಿದಂತೆ ಕಾಣುತ್ತದೆ. ರುದ್ರರಾಯನು ಗಾಯಗೊಂಡು ಹಿಂತಿರುಗಲು ಸಿಂಗರಾಯನು ಅವನನ್ನು ಹಿಂಬಾಲಿಸಿದನು. ತುರುಕರು ಓಡಿದರು. ಬೇಚಿನಾಯಕನು ಮಡಿಯಲು ಬಲ್ಲಾಳರಾಯನು ಹೆದರಿ ಹಿಂದಿರುಗಿದನು. ಕುಮಾರರಾಮನು ಅವನನ್ನು ಹಿಂಬಾಲಿಸಿ ಹಾನಗಲ್ಲಿನ ವರೆಗೂ ಒಂದು ಬೀಡುಬಿಟ್ಟನು. ಬಿಸಿಲಹಳ್ಳಿಯ ಕಣಿವೆಯಲ್ಲಿ ಕಾಳಗವಾಯಿತು. ಕುಮಾರರಾಮನು ವಿಜಯಿಯಾದನು. ಕಳೆಗುಂದಿದ ಬಲ್ಲಾಳರಾಯನು ತನ್ನ ಮಂತ್ರಿ ನರಸಿಂಗರಾಯನ ಮೂಲಕ ಸಂಧಾನ ನಡೆಸಿದನು. ಸುಲ್ತಾನನು ಹಿಂದೂ ಅರಸರ ಮೇಲೆ ರಾಜಕಾರ್ಯ ಮಾಡದೇ ಬಿಡುವುದಿಲ್ಲ; ನಮ್ಮ ರಾಜ್ಯಕ್ಕೆ ನಮ್ಮೊಳಗೆ ನಾವೇಕೆ ಮತ್ಸರಪಡಬೇಕು; ಉಭಯ ರಾಯರಿಗೂ ಒಳಕೋಟಿ ಸಲ್ಲದು ಎಂದು ಮುಂತಾಗಿ ಸೋಮದಂಡಾಧಿಪನೂ, ಬೇಚಿದಣ್ಣಾಯಕನೂ ಉಭಯ ರಾಯರಿಗೂ ಪರಿಪರಿಯಾಗಿ ಬುದ್ಧಿಯನ್ನು ಹೇಳಿದರು.[೩] ಒಂದು ಬಿಂದಿಗೆ ಹೊನ್ನನ್ನೂ ಇತರ ವಸ್ತುಗಳನ್ನೂ ಬಲ್ಲಾಳರಾಯನು ಕುಮಾರರಾಮನಿಗೆ ಕೊಡುವಂತೆ ಒಪ್ಪಂದವಾಯಿತು. ಇವುಗಳೊಡನೆ ಒಂದು ಮುತ್ತಿನ ತುರಾಯಿಯೂ

೧ M. A. R. 1923 Inscription 121

೨ M. A. R. 1929 at page 41 ಬಿಸಿಲಹಳ್ಳಿಯು ದಾವಣಗೆರೆ ತಾಲೂಕಿನಲ್ಲಿದೆ ( ದಾವಣಗೆರೆ ೩೪ at line 44 )

೩ ಸುರತ್ರಾಣ ದಂಡುಂಟೊಳಕೋಟಿ ಸಲ್ಲದೆಂ । ದಿರದೆ ಮಾತಾಡಿ ಮಂತ್ರಿಗಳು ॥
ನರಪತಿಗಳ ತಿಳುಪಿದರಂದು ನಾನಾ । ಪರಿಯೊಳೊರೆದು ಬುದ್ಧಿಯನು ॥
ಸುರಿತ್ರಾಣನ ರಾಜಕಾರ್ಯ ತಪ್ಪದು ನಮ್ಮ । ಧರಣಿಗದೇಕೆ ನಮ್ಮೊಳಗೆ ॥
ಹಿರಿದು ಮತ್ಸರವೆಂದು ಮಂತ್ರಿಗಳಂದಾ । ನರಪತಿಗಳ ತಿಳುಪಿದರು ॥
Vide M. A. R. 1929 at page 41

ಉಡುಗೊರೆಯಾಗಿ ಕೊಡಲ್ಪಟ್ಟಿತು. ರಾಮಯ್ಯನು ಹಿಂದಿರುಗಿದನು. ಕುಮಾರರಾಮನ ಕಡೆ ಈ ಕಾಳಗಗಳಲ್ಲಿ ಬಾದೂರಖಾನನಿಗೂ ಊರುಗೊಲೆಯರಸನಿಗೂ ಬಹಳ ಗಾಯವಾಯಿತು. ಭಾವಸಂಗಮದೇವನಿಗೂ, ದೇವಿಶೆಟ್ಟಿಯ ಲಿಂಗನಿಗೂ, ದ್ಯಾವನಿಗೂ ಹುಸಿಗಾಯಗಳಾದವು. ಚಟ್ಟಂಗಿ ರಾಮೇಶನ ದರ್ಶನ ಪಡೆದು ಎಲ್ಲರೂ ಹಿಂತಿರುಗಿ ಊರನ್ನು ವೈಭವದಿಂದ ಸೇರಿದರು.

ಕುಮಾರರಾಮನನ್ನು ಎದುರಿಸುವವರೇ ಭರತಖಂಡದಲ್ಲಿ ಇಲ್ಲದಾಯಿತು. ದಿಲ್ಲೀಶ್ವರನೂ ನೆರೆಯ ಅರಸರೂ ಎದುರಿಸಿ ಸೋತು ಹೋದರು. ಕಂಪಿಲರಾಯನು ನಿಶ್ಚಿಂತೆಯಿಂದಿದ್ದನು.

ವಸಂತಕಾಲ ಬಂದಿತು. ರಾಯನು ಬಾದೂರಖಾನನ್ನು ಕರೆದುಕೊಂಡು ಬೇಟೆಯಾಡಲು ಹೋದನು. ಕುಮಾರರಾಮನು ತನ್ನ ಅನುಯಾಯಿಗಳಾದ ಹಂಪರಾಜ, ಕಂಪರಾಜ, ಸಂಪಿಗೆರೆಯ ಸಿಂಗರಾಜ, ಹಡಪದ ಬಲ್ಲುಗ, ಕಡುಪ್ರಿಯ ಗಂಗಯ್ಯ, ಕಾಟಣ್ಣ, ಭಾವಸಂಗಮ, ಕಾಸಲು ಕಾಟಣ್ಣ, ದೇವಿಶೆಟ್ಟಿಯ ಲಿಂಗಣ್ಣ ಮುಂತಾದವರನ್ನು ಕರೆದುಕೊಂಡು ಊರಿನಲ್ಲಿದ್ದ ಹರಿಗೋಲುಗಳನ್ನೆಲ್ಲ ತರಿಸಿ ಹಂಪೆಯ ಹೊಳೆಗೆ ಬಂದು ನೀರಾಟವಾಡಿದನು. ಅನಂತರ ಹಂಪೆಯ ವಿರೂಪಾಕ್ಷನ ಗುಡಿಗೆ ಹೋಗಿ ದೇವರ ದರ್ಶನವನ್ನು ಪಡೆದು ಕುಮ್ಮಟನಗರಕ್ಕೆ ಹಿಂತಿರುಗಿದನು.

ಮುಮ್ಮಡಿಸಿಂಗನ ಕಾಲದ ಹೆಸರಾದ ಮುತ್ತಿನ ಚೆಂಡು ಹರಿಯಮ್ಮನ ಬಳಿಯಿತ್ತು. ತಾಯಿಯಿಂದ ಆ ಚಂಡನ್ನು ತರುವಂತೆ ಕಾಟಣ್ಣನು ಕುಮಾರರಾಮನಿಗೆ ಸೂಚಿಸಿದನು. ತಾಯಿಯು ಚೆಂಡನ್ನು ಕೊಡಲು ಒಪ್ಪಲಿಲ್ಲ. ಸುತ್ತಲೂ ರಾಮನ ಮೇಲೆ ಶತ್ರುಗಳು ಹೊಂಚು ಹಾಕುತ್ತಿದ್ದಾರೆ; ಚೆಂಡಾಟದಲ್ಲಿ ರಾಮನಿಗೆ ಕೈಕಾಲು ನೊಂದರೆ, ವೈರಿಗಳು ಅದನ್ನರಿತು ಮೇಲೆ ಬೀಳದಿರುವರೆ? ಚೆಂಡಾಟದಲ್ಲಿ ಧೀರನಾದ ರಾಮಯ್ಯನ ಮುದ್ದುಮುಖ ನೋಡಿ ಪರಸತಿಯರು ಮೋಹಿಸದಿರುವರೆ? ಇದರಿಂದ ರಾಮಯ್ಯನಿಗೆ ಹಾನಿಯುಂಟು; ಆದ್ದರಿಂದ ಈಗ ಆಟ ಬೇಡ ಎಂದು ಹರಿಯಮಾಲದೇವಿ ತನ್ನ ಮಗುವಿಗೆ ಪರಿಪರಿಯಾಗಿ ಬುದ್ಧಿಹೇಳಿ

ದಳು. ರಾಮನು ಚೆಂಡು ಕೊಡಲೇಬೇಕೆಂದು ಹಟಮಾಡಿದನು. ಕೊನೆಗೆ ತಾಯಿ ಮಗನಿಗೆ ಚೆಂಡನ್ನು ಕೊಡಲೇಬೇಕಾಯಿತು. ರತ್ನಾಜಿಯ ಅರಮನೆಯ ಬಯಲಿನಲ್ಲಿ ಆಟ ಮೊದಲಾಯಿತು.

ಒಂದು ಕಡೆ ರಾಮಯ್ಯನೂ, ಇನ್ನೊಂದು ಕಡೆ ಕಾಟಣ್ಣನೂ ಹಿರಿಯ ಗಡಿಗಳಾದರು. ಚಿನ್ನದ ಲಗ್ಗೆ ಪಳು, ಬೆಳ್ಳಿಯ ಲಗ್ಗೆ ಪಳು ಹೂಡಿ ಆಟವನ್ನಾಡಿದರು. ಆಟದ ಬೊಬ್ಬೆಯಬ್ಬರಗಳನ್ನು ಕೇಳಿ ರತ್ನಾಜಿ ಆಟವನ್ನು ನೋಡಲು ಮೇಲುಪ್ಪರಿಗೆಗೆ ಬಂದಳು. ಅವಳ ಸಂಗಾತಿ ಸಂಗಿಯು ರತ್ನಾಜಿಗೆ ಆಟಗಾರರ ದಿಟ್ಟತನವನ್ನು ವಿವರಿಸುತ್ತ ಅವನನ್ನು ತೋರಿಸುತ್ತಿದ್ದಳು. ರತ್ನಾಜಿ ಕುಮಾರರಾಮನ ರೂಪವನ್ನು ಕಂಡು ಬೆರಗಾಗಿ ಮನಸೋತಳು. ಆಟವಾಡುತ್ತಿದ್ದಾಗ ಚೆಂಡು ಪುಟನೆಗೆದು ರತ್ನಾಜಿಯ ಅಂತಃಪುರದಲ್ಲಿ ಬಂದು ಬಿದ್ದಿತು. ಹಕ್ಕಿ ಒಲೆಯಲ್ಲಿ ತಾನಾಗಿ ಬಂದು ಬಿದ್ದಂತಾಯಿತು. ರತ್ನಾಜಿಗೂ ಅದೇ ಬೇಕಾಗಿತ್ತು. ಚೆಂಡನ್ನು ತೆಗೆದಿಟ್ಟಳು. ಅದನ್ನು ತರಲು ಮೊದಲು ಕಾಟಣ್ಣನನ್ನು, ಅನಂತರ ಹಳಬನಾದ ಬಲ್ಲುಗನನ್ನು ಕುಮಾರರಾಮನು ಕಳುಹಿಸಿದನು. ಚೆಂಡು ಸಿಗಲಿಲ್ಲ. ಕುಮಾರರಾಮನೇ ಬಂದು ಕೇಳಬೇಕಾಯಿತು. ಮಗನೆಂಬುದನ್ನು ಮರೆತು ರತ್ನಾಜಿ ಅವನನ್ನು ದುಸ್ಸಂಗಕ್ಕೆ ಕರೆದಳು. ಪರದಾರಸೋದರನಾದ ಕುಮಾರರಾಮನ ಹಿತವಚನಗಳು ರತ್ನಾಜಿಗೆ ವಿಷವಾದವು. ರಾಮನು ಸಹಿಸಲಾರದೆ ಹಿಮ್ಮೆಟ್ಟಿದನು. ತನ್ನ ಗುಟ್ಟು ರಟ್ಟಾಗಿ ಕಂಪಿಲರಾಯನು ಏನು ಮಾಡುವನೋ ಎಂದು ಹೆದರಿ ರತ್ನಾಜಿಯು ಕುಮಾರರಾಮನನ್ನು ಕೊಲ್ಲಿಸುವ ಉಪಾಯವನ್ನು ಮಾಡಿದಳು. ರತ್ನಾಜಿಯ ಮೋಹಕ್ಕೆ ಪರವಶವಾಗಿದ್ದ ಕಂಪಿಲರಾಯನು ಮಗನೆಂದೂ ಯೋಚಿಸದೆ, ಅವನನ್ನು ಕೊಂದು ಗುರುತು ತಂದು ತೋರಿಸುವಂತೆ ಬೈಚಪ್ಪನಿಗೆ ಭಂಡಾರಿ ಬುಕ್ಕಣ್ಣನ ಮೂಲಕ ಹೇಳಿಕಳಿಸಿದನು. ಚಾಣಾಕ್ಷನಾದ ಮಂತ್ರಿಯು ನಿಜಸಂಗತಿಯನ್ನು ವಿಚಾರಿಸಿ, ರಾಮನಲ್ಲಿ ತಪ್ಪಿಲ್ಲವೆಂದು ಮನಗಂಡು, ಅವನನ್ನು ನೆಲಮಾಳಿಗೆಯಲ್ಲಿ ಬಚ್ಚಿಟ್ಟು ಕುಮಾರರಾಮನನ್ನೇ ಹೋಲುತ್ತಿದ್ದ ಕಳ್ಳ ಭಂಟರಾಮನೆಂಬುವನ ತಲೆಯನ್ನು ತಂದು ರಾಜನಿಗೆ ತೋರಿಸಿದನು; ರತ್ನಾಜಿಯು ಕುಮಾರರಾಮನು

ಮಡಿದನೆಂದು ನಂಬಿದಳು. ಈ ಸುದ್ದಿ ಭರತಖಂಡದಲ್ಲೆಲ್ಲ ಹರಡಿತು. ದೆಹಲಿಯ ಸುಲ್ತಾನನಿಗೂ ಬೇಹಿನವರಿಂದ ತಿಳಿಯಿತು

ನೇಮಿಖಾನನು ಬೇಹಿನವರಿಂದ ರಾಮನು ಮಡಿದನೆಂಬ ಸುದ್ದಿಯನ್ನು ತಿಳಿದುಕೊಂಡು ಕುಮ್ಮಟದುರ್ಗಕ್ಕೆ ಪುನಃ ಮುತ್ತಿಗೆ ಹಾಕಿದನು. ನಿಸ್ಸಹಾಯನಾದ ಕಂಪಿಲರಾಯನು ಪಟ್ಟಣವನ್ನು ಉಳಿಸುವ ಉಪಾಯವನ್ನು ಮಾಡುವಂತೆ ಬೈಚಪ್ಪನನ್ನು ಪರಿಪರಿಯಾಗಿ ಪ್ರಾರ್ಥಿಸಿದನು. ಸಮಯವನ್ನೇ ನಿರೀಕ್ಷಿಸುತ್ತಿದ್ದ ಮಂತ್ರಿಯು ಬಚ್ಚಿಟ್ಟಿದ್ದ ಕುಮಾರರಾಮನನ್ನೂ, ಅವನ ಸ್ನೇಹಿತರನ್ನೂ ನೆಲಮಾಳಿಗೆಯಿಂದ ಕರೆದು ತರಲು, ಕುಮಾರರಾಮನು ಮಹಾ ಸಾಹಸದಿಂದ ಕಾದಾಡಿ ನೇಮಿಯನ್ನು ಸೋಲಿಸಿ ಓಡಿಸಿದನು. ಕುಮಾರರಾಮನು ಜಯಶೀಲನಾಗಿ ಪಟ್ಟಣಕ್ಕೆ ಹಿಂದಿರುಗಲು ನಿಜಸಂಗತಿಯನ್ನು ತಿಳಿದು ರತ್ನಾಜಿಯು ಆತ್ಮಹತ್ಯ ಮಾಡಿಕೊಂಡಳು. ಕಂಪಿಲರಾಯನು ಮಗನನ್ನು ಕಂಡು ಸಂತೋಷದಿಂದ ಉಬ್ಬಿದನು.

ಮುಂದೆ ಕಂಪಿಲರಾಯನು ತನ್ನ ಮಗನಿಗೆ ಪಟ್ಟಾಭಿಷೇಕ ಮಾಡಿದನು. ರಾಮನು ದೇಶದೇಶಗಳಿಂದ ಜನರನ್ನು ಕರೆಯಿಸಿ, ಸೌಕರ್ಯಗಳನ್ನು ಕಲ್ಪಿಸಿ, ತನ್ನ ಸೀಮೆಯಲ್ಲಿ ನೆಲೆಸುವಂತೆ ಮಾಡಿದನು. ಸಾಮಂತರು ಕಪ್ಪಕಾಣಿಕೆಯನ್ನು ತಂದೊಪ್ಪಿಸಿದರು. ರಾಜ್ಯವು ಸುಖವಾಗಿತ್ತು. ಇಕ್ಕೇರಿಯ ಒಕ್ಕಲುಗೌಡರು, ಕಲ್ಯಾಣ ಕಲ್ಬುರ್ಗಿಯ ನಾಡಗೌಡರೂ, ಸಾಗರದ ಶೆಟ್ಟರೂ, ತೊರಗಲ್ಲು, ಬಾದಾಮಿ ಸೀಮೆಯ ಗೌಡರೂ, ಸೀರ್ಯದ ಸೀಮೆಯ ನಾಡಗೌಡರೂ, ಬಸವಾಪಟ್ಟಣದ ಕುಮಾರ ರಾಜನೂ, ಆದವಾನಿ ಸೀಮೆಯ ರೆಡ್ಡಿಯವರೂ ಕಾಣಿಕೆಯನ್ನು ತಂದೊಪ್ಪಿಸಿದರು. ಗುತ್ತಿಯ ಜಗದಪ್ಪರಾಯನು ಪಟ್ಟದ ಉಡುಗೊರೆಯನ್ನು ಕಳಿಸಿದನು. ಕುಮಾರರಾಮನು ಬಂದವರಿಗೆಲ್ಲ ಉಡುಗೊರೆಗಳನ್ನು ಕೊಟ್ಟು ಮರ್ಯಾದಿಸಿದನು. ತನ್ನ ದೇಶದಲ್ಲೆಲ್ಲ ಸಂಚಾರಮಾಡಿ ಕೆರೆ, ಕೊಳ, ಛತ್ರ ಮೊದಲಾದವುಗಳನ್ನು ಕಟ್ಟಿಸಿದನು. ರಾಜ್ಯ ಬಹಳ ಸಂತೋಷವಾಗಿತ್ತು.

ಎರಡು ವೇಳೆ ಆದ ಅಪಜಯಗಳಿಂದ ಮುಹಮ್ಮದ್ ಬಿನ್ ತೊಗ್ಲಖ

ನಿಗೆ ತುಂಬಾ ಖೇದವುಂಟಾಯಿತು. ಬಾಬವ್ವನಾದರೋ ರಾಮನ ಹೊರತು ಬೇರೆ ಯಾರನ್ನೂ ವಿವಾಹವಾಗುವದಿಲ್ಲವೆಂದು ಸ್ಥಿರಸಂಕಲ್ಪ ಮಾಡಿದ್ದಳು; ಇದರಿಂದ ಸುಲ್ತಾನನ ಚಿಂತೆಯು ಇನ್ನೂ ಹೆಚ್ಚಿತು. ಈ ವೇಳೆಯಲ್ಲಿ ಅವನ ಆಸ್ಥಾನದ ಕಾವಲುಗಾರಳಾಗಿದ್ದ ಕೊಂಕಣ ದೇಶದ ಮಾದಿಗರವನ ಮಗಳಾದ ಮಾತಂಗಿ* ಎಂಬ ಕನ್ಯೆಯು ರಾಮನನ್ನು ಹಿಡಿದು ತರುವುದಾಗಿ ವೀಳೆಯವನ್ನು ಹಿಡಿದಳು. ಸುಲ್ತಾನನು ದೊಡ್ಡ ದಂಡಿನೊಡನೆ ಮಾತಂಗಿಯನ್ನು ಕನ್ನಡನಾಡಿನ ದಂಡಯಾತ್ರೆಗಾಗಿ ಕಳುಹಿಸಿದನು. ನೇಮಿಯ ಸೈನ್ಯವು ಕುಮ್ಮಟದುರ್ಗವನ್ನು ೩ನೆಯ ಬಾರಿ ಮುತ್ತಿತು; ದೊಡ್ಡ ಕಾಳಗವಾಯಿತು. ಮಾತಂಗಿಯು ಅಪಜಯ ಹೊಂದಿದಳು.

**ಕನ್ನಡನಾಡಿನ ಜೋಹರು :**—ಕುಮಾರರಾಮನ ಆಶ್ರಿತರು ಕೆಲವರು ಪಿತೂರಿಮಾಡಿ ಮಾತಂಗಿಗೆ ಸಹಾಯ ಮಾಡುವದಾಗಿ ಭರವಸೆ ಕೊಟ್ಟಿದ್ದರಿಂದ ಮಾತಂಗಿಯು ಹಿಂದಿರುಗಿ ಬಂದು ಅನಾಯಾಸವಾಗಿ ಕೋಟೆಯೊಳಗೆ ಹೊಕ್ಕಳು. ಕುಮಾರರಾಮನು ಉದಯಕಾಲಕ್ಕೆ ಏಳುವ ಮುನ್ನವೇ ಅವನ ಕಡೆಯ ವೀರಾದಿವೀರರೆಲ್ಲರೂ ವೀರಸ್ವರ್ಗವನ್ನೈದಿದ್ದರು. ಕುಮಾರರಾಮನು ತನ್ನ ಮಾತಾಪಿತೃಗಳನ್ನು ಸುರಕ್ಷಿತವಾದ ಹೊಸದುರ್ಗದ ಕೋಟೆಯಲ್ಲಿಟ್ಟನು. ಬಾದೂರನನ್ನು ಐದುನೂರು ರಾವುತರೊಂದಿಗೆ ನೆರೆಯ ರಾಜ್ಯಕ್ಕೆ ಕಳುಹಿಸಿದನು. ತಾನು ಏಕಾಂಗಿಯಾಗಿ ಯುದ್ಧಮಾಡುತ್ತ ಕೈಗೆ ಸಿಕ್ಕಿದ ಮಾತಂಗಿಯನ್ನು ಕೊಲ್ಲದೆ ಬಿಟ್ಟನು. ಆದರೆ ಕೃತಘ್ನಳಾದ ಮಾತಂಗಿಯು ಗುರಿಯಿಟ್ಟು ಬಿಟ್ಟ ಬಾಣವು ರಾಮನ ಎದೆಯನ್ನು ನಾಟಿತು. ಕುಮಾರರಾಮನ ಮಡದಿಯರು ಹಳದಿ ಸೀರೆಯನ್ನುಟ್ಟು ಶೃಂಗಾರಮಾಡಿಕೊಂಡು ರಾಮನ ಕೀರ್ತಿಯನ್ನು ಹಾಡುತ್ತ ನಗುತ್ತ ಅಗ್ನಿಕುಂಡದಲ್ಲಿ ಧುಮುಕಿದರು. ಇತರ ಮಾನಿನಿಯರೆಲ್ಲ ಕಿಚ್ಚಿನೊಳಕ್ಕೆ ಹಾರಿದರು. ಕಡುಗಲಿ ಕಾಟಣ್ಣನ

---

* ಖುಸ್ರುವಿನ ಕಾಲದಲ್ಲಿ ದಿಳ್ಳಿಯ ಆಸ್ಥಾನದಲ್ಲಿ ಕೊಂಕಣದೇಶದ ಮಾದಿಗರ ಪ್ರಾಬಲ್ಯವು ಹೆಚ್ಚಾಗಿದ್ದಂತೆ ಚರಿತ್ರೆಯಿಂದ ತಿಳಿದುಬರುತ್ತದೆ.

ಅರಸಿಯು, ತನ್ನ ಪತಿಗೆ ನಮಸ್ಕರಿಸಿ, ತನ್ನ ತಲೆಯನ್ನು ಅವನ ಮುಂದೆ ಬಾಗಿಸಿದಳು. ಕಾಟಣ್ಣನು ಕತ್ತಿಯನ್ನು ಝಳಪಿಸುತ್ತ ತನ್ನರಸಿಯ ಉರದ ಮೇಲೆ ಇರಿದನು. ಹೆಣ್ಣುಮಕ್ಕಳದೆಲ್ಲ ಸಮಾಪ್ತಿಯಾದ ಮೇಲೆ ಮನಸ್ಸನ್ನು ನಿಶ್ಚಿಂತೆಮಾಡಿಕೊಂಡು ರಾಮನ ಬಳಿಗೆ ಬಂದು ಎಲ್ಲ ಸಂಗತಿಯನ್ನು ಅರುಹಿದನು. ಕಾಟಣ್ಣನ ಧ್ವನಿ ಕೇಳಿ ಮುಚ್ಚಿದ್ದ ಕಣ್ಣನ್ನು ರಾಮನು ತೆರೆದನು; ತುರುಕರು ರಾಮನು ಇನ್ನೂ ಬದುಕಿರುವುದನ್ನು ಕಂಡು ಹೆದರಿ ಓಡಿದರು. ಕಾಟಣ್ಣನೂ ಶತ್ರುಗಳನ್ನು ಕಡಿಯುತ್ತ ರಣದಲ್ಲಿ ಮಡಿದನು. ಇದನ್ನು ನೋಡಿ ರಾಮನು ಕಣ್ಣು ಮುಚ್ಚಿದನು; ಪುನಃ ತೆರೆಯಲೇ ಇಲ್ಲ.

ಇಬ್ನ್ ಬಟೂಟ ಮತ್ತು ನ್ಯೂನಿಜನ ಹೇಳಿಕೆ:—ಭರತ ಖಂಡಕ್ಕೆ ಪ್ರವಾಸಿಗಳಾಗಿ ಬಂದಿದ್ದ ಆಲ್ಜೀರಿಯಾದೇಶದ ಇಬ್ನ್ ಬಟೂಟನೂ, ಪೋರ್ಚುಗಲ್ ದೇಶದ ನ್ಯೂನಿಜನೂ ಬರೆದಿರುವ ಇತಿಹಾಸ ಭಾಗವನ್ನು ಗಮನಿಸುವುದು ಸೂಕ್ತವಾಗಿದೆ. ಇಬ್ನ್ ಬಟೂಟನು ಹೇಳಿರುವುದೇನೆಂದರೆ, ಮುಹಮ್ಮದ್ ಬಿನ್ ತೊಗ್ಲಖನ ಸೈನಿಕರು ಕಂಪಿಲರಾಯನ ರಾಜ್ಯವನ್ನು ಮುತ್ತಿದರು. ಕಾಫರರಾಜನು ತನಗೆ ಒದಗುವ ಕಷ್ಟವನ್ನು ಅರಿತುಕೊಂಡನು. ತನ್ನ ಧಾನ್ಯದ ಕಣಜವು ಬರಿದಾಗಿತ್ತು. ತನ್ನನ್ನೂ ಬಾದೂರನನ್ನೂ ಪ್ರಾಣ ಸಹಿತ ಸೆರೆಹಿಡಿದು ಕೊಂಡು ಹೋಗುವರೆಂಬ ಹೆದರಿಕೆಯಿತ್ತು. ಆದ್ದರಿಂದ 'ನೀನು ನೆರೆಯ ರಾಜನ ಬಳಿಗೆ ಹೋಗು; ಅವನು ನಿನ್ನನ್ನು ರಕ್ಷಿಸುವನು' ಎಂದು ಬಾದೂರಖಾನನಿಗೆ ಹೇಳಿ ಅವನ ಜೊತೆಗೆ ದಾರಿ ತೋರಿಸಲು ಒಬ್ಬನನ್ನು ಕೊಟ್ಟು ಕಳಿಸಿದನು.

ಅನಂತರ ಒಂದು ಅಗ್ನಿಕುಂಡವನ್ನು ಮಾಡಿ ಹೊತ್ತಿಸಿದರು. ದುರ್ಗದ ಪ್ರತಿಯೊಬ್ಬ ಮಾನಿನಿಯೂ ಗಂಧವನ್ನು ಧರಿಸಿ, ಕಂಪಿಲರಾಯ ನಿಗೆ ಅಡ್ಡಬಿದ್ದು, ನಮಸ್ಕಾರಮಾಡಿ ಅಗ್ನಿಕುಂಡದಲ್ಲಿ ಧುಮುಕಿ ಆಹುತಿ ಯಾದಳು. ರಾಯನ ಕಡೆಯ ಮನ್ನೆಯರೂ ಮತ್ತು ಮಂತ್ರಿಗಳ ಹೆಂಡಂದಿರೂ ಮತ್ತು ಇತರ ಮಾನಿನಿಯರೂ, ಅವರನ್ನೇ ಅನುಕರಿಸಿದರು.

ತನ್ನ ಸರದಿ ಬರಲು ರಾಯನು ಗಂಧವನ್ನು ಹಚ್ಚಿಕೊಂಡು ಎದೆಯ

ಉಕ್ಕಿನ ಕವಚದ ವಿನಹ ಉಳಿದ ಉಡುಪನ್ನೂ, ಆಯುಧಗಳನ್ನೂ ಧರಿಸಿದನು. ಇವನಂತೆಯೇ ಇಷ್ಟವಿದ್ದವರೆಲ್ಲ ಸಿದ್ಧರಾದರು. ಸುಲ್ತಾನನ ಸೈನ್ಯದ ಮೇಲೆ ನುಗ್ಗಿಹೋಗಿ ಪ್ರಾಣಾಂತ್ಯದವರೆಗೂ ಹೊಡೆದಾಡಿ ಮಡಿದರು. ಪಟ್ಟಣವು ಶತ್ರುಗಳ ವಶವಾಯಿತು. ಉಳಿದ ಪಟ್ಟಣವಾಸಿಗಳು ಸೆರೆಯಾದರು. ರಾಯನ ಹನ್ನೊಂದು ಜನ ಮಕ್ಕಳೂ ಸೆರೆಹಿಡಿಯಲ್ಪಟ್ಟು ಸುಲ್ತಾನನ ಬಳಿಗೆ ಕರೆದೊಯ್ಯಲ್ಪಟ್ಟಾಗ ಅವರನ್ನೆಲ್ಲ ಅವನು ಮುಸಲ್ಮಾನರನ್ನಾಗಿ ಮಾಡಿದನು.

ನ್ಯೂನಿಜನು ಹೇಳಿರುವುದನ್ನು ನೋಡೋಣ: ರಾಜನು ಒಂದು ಭಾಷಣವನ್ನು ಮಾಡಿದನು. 'ನಾವು ಶತ್ರುಗಳ ಮೇಲೆ ಯುದ್ಧಕ್ಕೆ ಹೋಗುವ ಮುಂಚೆ ನಮ್ಮ ಚಿಕ್ಕ ಮಕ್ಕಳ ಮತ್ತು ಹೆಂಡಂದಿರ ಮೇಲೆ ಕದನ ನಡೆಸಬೇಕಾಗಿದೆ. ನಾವು ಅವರನ್ನು ಶತ್ರು ವಶಕ್ಕೆ ಬಿಡಕೂಡದು. ಅದಕ್ಕಾಗಿಯೇ ಅವರನ್ನು ಮೊದಲು ಬಲಿದಾನ ಕೊಡಬೇಕಾಗಿದೆ ಎಂದು ಹೇಳಿದನು. ಅಷ್ಟು ಹೊತ್ತಿಗೆ ಅವರೆಲ್ಲ ಆ ಕೋಟೆಯ ವಿಸ್ತಾರವಾದ ಬಯಲಿನಲ್ಲಿ ನಿಂತಿದ್ದರು. ರಾಜನು ತನ್ನ ಕೈಕತ್ತಿಯಿಂದಲೇ ಸುಮಾರು ೫೦ ಜನ ಹೆಂಗಸರನ್ನೂ, ಕೆಲವು ಜನ ಮಕ್ಕಳನ್ನೂ ರಣದೇವತೆಗೆ ಬಲಿ ಕೊಟ್ಟನು. ಇತರರೂ ರಾಜನನ್ನು ಅನುಕರಿಸಿ ಯುದ್ಧಮಾಡಲಾರದ ಅಬಲೆಯರನ್ನೂ, ಅಶಕ್ತರನ್ನೂ ಆಹುತಿಕೊಟ್ಟರು.

ಭಯಂಕರವಾದ ಈ ಕಾರ್ಯ ಸಾಗಿದ ಮೇಲೆ ಕೋಟೆಯ ಹೆಬ್ಬಾಗಿಲು ತೆರೆಯಲ್ಪಟ್ಟಿತು. ಕೂಡಲೆ ಶತ್ರುಗಳು ಒಳನುಗ್ಗಿ ಬಂದು ಮನೆ ಮನೆ ಹೊಕ್ಕು ೬ ಜನ ಮುದುಕರ ಹೊರತು ಉಳಿದವರನ್ನೆಲ್ಲ ವೀರ ಸ್ವರ್ಗಕ್ಕೆ ಕಳುಹಿಸಿದರು.

ಇಬ್ಬನ್ ಬಟೂಟ, ನ್ಯೂನಿಜ್ ಇಬ್ಬರೂ ಹೇಳಿರುವುದನ್ನು ಗಮನಿಸಿದರೆ ಕವಿ ನಾಗಸಂಗಯ್ಯನು ಕುಮಾರರಾಮನ ಚರಿತ್ರೆಯನ್ನು ಉತ್ಪ್ರೇಕ್ಷೆಮಾಡದೆ ಯಥಾರ್ಥವಾಗಿ ರಚಿಸಿರುವನೆಂದು ವ್ಯಕ್ತವಾಗುವುದು.

ಅನಂತರ ಕುಮಾರರಾಮನು ಕೊನೆಯ ಸಲ ಜಟ್ಟಂಗಿ ರಾಮೇಶನನ್ನು ಧ್ಯಾನಿಸಿದನು. ಇವನ ಸ್ಥಿತಿಯನ್ನು ಕಂಡು ಮಾತಂಗಿಯು

ಅವನಿಗೆ ಕೊನೆಯ ಏಟನ್ನು ಕೊಡಬೇಕೆಂದು ಮುಂದುವರಿದಳು. ಮರಳಿ ಯೋಚನೆ ಮಾಡಿ, ತಾನು ರಾಮನ ಬಳಿಗೆ ಹೋಗುವುದು ಯುಕ್ತವಾದದ್ದಲ್ಲವೆಂದು ತಿಳಿದು ಕುಮಾರರಾಮನ ತಲೆಯನ್ನು ತರಲು ಭಟ್ಟರ ಮಲ್ಲ ಎಂಬವನನ್ನು ಕಳಿಸಿದಳು. ರಾಮನು ಮಲ್ಲನ ಇಚ್ಛೆಯನ್ನು ತಿಳಿದು ತನ್ನ ತಲೆಯನ್ನು ತೆಗೆದುಕೋ ಎಂದು ಹೇಳಿ ತನ್ನ ಕುತ್ತಿಗೆಯನ್ನು ತನ್ನ ಕೈ ಬಾಕುವಿನಿಂದ ಕೊಯಿದುಕೊಂಡನು. ಮಲ್ಲನು ತಂದ ತಲೆಯನ್ನು ಮಾತಂಗಿಯು ರೇಷ್ಮೆಯ ವಸ್ತ್ರದಲ್ಲಿಟ್ಟು ಕುದುರೆ ರಾವುತರೊಡನೆ ದಿಲ್ಲಿಗೆ ಕಳುಹಿಸಿದಳು. ಸುಲ್ತಾನನೂ ಬಾಚಮ್ಮನೂ ರಾಮನ ಮರಣಕ್ಕಾಗಿ ಬಹಳ ವಿಷಾದಿಸಿದರು. ಈ ತಲೆಯನ್ನು ದಿಲ್ಲಿಯಲ್ಲಿ ಒಂದು ದಿವಸ ಪ್ರದರ್ಶಿಸಿದ ಮೇಲೆ ಸುಲ್ತಾನನು ಅದನ್ನು ಕುಮ್ಮಟದುರ್ಗಕ್ಕೆ ಹಿಂದಕ್ಕೆ ಕಳುಹಿಸಿದನು. ಅದನ್ನು ಪಲ್ಲಕ್ಕಿಯಲ್ಲಿಟ್ಟು ಹರಿಹರ, ಬುಕ್ಕ ಮುಂತಾದವರ ಕಾವಲಿನಲ್ಲಿ ಕಾಶಿಗೆ ಕಳಿಸಲಾಯಿತು. ಗಂಗೆಯಲ್ಲಿ ತಲೆಯನ್ನು ತೇಲಿಬಿಡಲು, ಅದು ಲಿಂಗವಾಯಿತು.

ಯುದ್ಧದಲ್ಲಿ ಮಡಿಯದೆ ಇನ್ನೂ ಜೀವಿಸಿದ್ದ ಕಂಪಿಲರಾಯನ ಹನ್ನೊಂದು ಜನ ಮಕ್ಕಳನ್ನು ಸೆರೆಹಿಡಿದು ದಿಲ್ಲಿಗೆ ಹಿಡಿದುಕೊಂಡು ಹೋದರು. ಅಲ್ಲಿ ಅವರನ್ನು ಮುಸಲ್ಮಾನರನ್ನಾಗಿ ಮಾಡಿದರು. ಕಂಪಿಲ ರಾಯನ ಧೀರತನಕ್ಕೆ ಮೆಚ್ಚಿದ್ದ ಸುಲ್ತಾನನು ಆ ಮಕ್ಕಳನ್ನೆಲ್ಲ ಮರ್ಯಾದೆಯಿಂದ ಕಂಡನು. ಅವರಲ್ಲೊಬ್ಬನು 'ಇಬ್ನ್ ಬಟೂಟನಿಗೆ ಪರಮ ಸ್ನೇಹಿತನಾಗಿದ್ದನು.

ಕುಮಾರರಾಮನು ಬಾದೂರನನ್ನು ರಕ್ಷಿಸುವುದು ಸಾಧ್ಯವಿಲ್ಲವೆಂದು ತಿಳಿದಮೇಲೆ ೫೦೦ ರಾವುತರೊಡನೆ ಬಾದೂರನನ್ನು ಸುರಕ್ಷಿತ ಸ್ಥಳಕ್ಕೆ ಕಳುಹಿಸಿದನು. ಕುಮ್ಮಟದುರ್ಗವು ದಿಲ್ಲಿಯವರಿಗೆ ವಶವಾದ ಮೇಲೆ ಅವರು ಬಾದೂರನನ್ನು ಹುಡುಕಿ ಹಿಡಿದು ತಂದರು. ಬಾದೂರನು ಹೊಯಿಸಳ ವೀರಬಲ್ಲಾಳನ ಬಳಿ ಇದ್ದನೆಂದೂ, ಆ ರಾಜನು ಹಿಂದೆಯೇ ಮುಸಲ್ಮಾನರಿಂದ ಬಹಳ ಕಷ್ಟವನ್ನನುಭವಿಸಿದವನಾದ್ದರಿಂದ ಬಾದೂರನನ್ನು ಮುಸಲ್ಮಾನರಿಗೆ ಒಪ್ಪಿಸಿದನೆಂದು ಕೆಲವರು ಅಭಿಪ್ರಾಯಪಟ್ಟಿರುವರು.

ಬದುಕಿರುವಾಗಲೇ ಬಾದೂರನ ಚರ್ಮವನ್ನು ಸುಲಿಯುವಂತೆ ಸುಲ್ತಾನನು ಅಪ್ಪಣೆಮಾಡಿದನು. ಅವನ ಚರ್ಮವನ್ನು ಸುಲಿಯುತ್ತಿರುವಾಗಲೇ ಅವನ ಮಾಂಸವನ್ನು ಅಕ್ಕಿಯಲ್ಲಿ ಬೆರಸಿ ಬೇಯಿಸಿದರು. ಅದರಲ್ಲಿ ಸ್ವಲ್ಪ ಭಾಗವನ್ನು ಬಾದೂರನ ಹೆಂಡಿರು ಮಕ್ಕಳಿಗೆ ಕಳಿಸಿದರು. ಅವನ ಚರ್ಮದಲ್ಲಿ ಒಣಹುಲ್ಲನ್ನು ತುಂಬಿಸಿ ಬಹಾದೂರ್ ಬುರ್ಹಾನ್ ಎಂಬವನ 'ಇದೇ ತರದ ದೇಹದೊಂದಿಗೆ ಇಟ್ಟು ದೇಶದಲ್ಲೆಲ್ಲ ಮೆರವಣಿಗೆ ಮಾಡಿದರು. ರಾಜದ್ರೋಹಿಗಳಿಗೆ ಉಂಟಾಗುವ ಗತಿಯನ್ನು ತೋರಿಸುವುದೇ ಇದರ ಉದ್ದಿಶ್ಯವಾಗಿತ್ತು.

ಕುಮ್ಮಟದುರ್ಗದಲ್ಲ ಬಂದು ಬಂಡೆಗೆ ಈಗಲೂ ಬಾದೂರನ ಬಂಡೆ ಎಂಬ ಹೆಸರಿದೆ. ೧

## ಹರಿಹರ

ಸುಲ್ತಾನನು ಕುಮ್ಮಟದುರ್ಗವನ್ನು ವಶಪಡಿಸಿಕೊಂಡು ಎರಡು ವರ್ಷ ಸ್ವಾಧೀನದಲ್ಲಿಟ್ಟುಕೊಂಡಿದ್ದನು. ಉತ್ತರ ಪ್ರಾಂತ್ಯದಲ್ಲಿ ದಂಗೆಗಳು ನಡೆಯುತ್ತಿರುವವೆಂಬ ವರ್ತಮಾನವನ್ನು ಕೇಳಿ ಮಲ್ಲಿಕ್ ನಬಿ ಎಂಬ ಸರದಾರರನ್ನು ಕುಮ್ಮಟನಗರದ ಪ್ರಾಂತ್ಯಾಧಿಕಾರಿಯಾಗಿ ನೇಮಿಸಿ ಅವನ ಬಳಿ ನಾಕಾದಷ್ಟು ಸೇನೆಯನ್ನಿಟ್ಟು ಸುಲ್ತಾನನು ದಿಲ್ಲಿಗೆ ಹಿಂತಿರುಗಿದನು. ಈ ಸಮಯವನ್ನೇ ನಿರೀಕ್ಷಿಸುತ್ತ ಅವಿತುಕೊಂಡಿದ್ದ ಕುಮ್ಮಟದ ಪ್ರಜೆಗಳೂ, ನೆಪಮಾತ್ರಕ್ಕೆ ಅಧೀನತೆಯನ್ನು ಒಪ್ಪಿಕೊಂಡಿದ್ದವರೂ, ಮಲ್ಲಿಕ್‌ನಬಿಯ ಮೇಲೆ ತಿರುಗಿಬಿದ್ದರು. ತಮ್ಮ ಮೇಲೆ ಬಲಾತ್ಕಾರವಾಗಿ ಹೊರಿಸಿದ್ದ ತೆರಿಗೆಯನ್ನು ಕೊಡಲು ನಿರಾಕರಿಸಿ ಆಹಾರ ಸಾಮಗ್ರಿಗಳು ಅವನ ಬಳಿಗೆ ಹೋಗದಂತೆ ಮಾಡಿದರು. ಮಲಿಕ್ ನಬಿಯು ತನ್ನ ಸ್ಥಿತಿಯನ್ನು ಸುಲ್ತಾನನಿಗೆ ತಿಳಿಸಿದನು. ಸುಲ್ತಾನನು ತನ್ನ ಬಳಿ ಸೆರೆಯಾಗಿದ್ದ ಆರು ಜನರನ್ನು ಬಿಡಿಸಿ, ಅವರಲ್ಲಿ ರಾಜಸಂಬಂಧವಿಲ್ಲದ ಮಂತ್ರಿಯೊಬ್ಬನನ್ನು ರಾಜನನ್ನಾಗಿಯೂ, ಇನ್ನೊಬ್ಬನನ್ನು ಪ್ರಾಂತಾಧಿಕಾರಿಯ

೧ A. I. M. S. vol XX

ನ್ನಾಗಿಯೂ ನಿಯಮಿಸಿ ಕುಮ್ಮಟದುರ್ಗಕ್ಕೆ ಕಳುಹಿಸಿದನು. ಮಲ್ಲಿಕ್ ನಬಿಯು ರಾಜನಾಗಿ ನಿಯಮಿಸಲ್ಪಟ್ಟಿದ್ದ ದೇವರಾಯನಿಗೆ ರಾಜ್ಯವನ್ನೊಪ್ಪಿಸಿ ದಿಲ್ಲಿಗೆ ಹಿಂತಿರುಗಿದನು. ರಾಜ್ಯಸೂತ್ರವನ್ನು ವಹಿಸಿದವನೇ ಹರಿಹರದೇವರಾಯನೆಂದು ಪರಿಗಣಿಸಲ್ಪಟ್ಟಿದೆ. ೧

ಕುಮಾರರಾಮನಿಗೆ ಜಟ್ಟಂಗಿರಾಯನೆಂಬ ಒಬ್ಬ ಮಗನಿದ್ದನು. ಇವನು ಕುಮ್ಮಟದುರ್ಗದಲ್ಲಿ ಪರರಾಜರಿಗೆ ತಲೆಬಾಗದಂತೆ ಸ್ವತಂತ್ರದಿಂದ ರಾಜ್ಯಭಾರಮಾಡುತ್ತಿದ್ದನು ೨ ಎಂದು ತಿಳಿಯುತ್ತದೆ.

**ಕಾಲನಿರ್ಣಯ:–** ಕುಮಾರರಾಮನ ರಾಜವಂಶವು ಪ್ರಾರಂಭವಾದುದು ಯಾವಾಗ; ಚಿತ್ರನಾಯಕನು ಎಷ್ಟು ಕಾಲ ರಾಜ್ಯಭಾರಮಾಡಿದನು; ಇವನ ಅನಂತರದ ಇಬ್ಬರು ರಾಜರು ಯಾರು; ಅವರು ಎಷ್ಟು ಕಾಲ ರಾಜ್ಯಭಾರಮಾಡಿದರು ಎಂಬ ಸಂಗತಿಗಳು ತಿಳಿದು ಬಂದಿಲ್ಲ. ಮುಮ್ಮಡಿಸಿಂಗನು ಎರಡು ಪಟ್ಟದ ಕಾಲ ರಾಜ್ಯಭಾರಮಾಡಿದನು ಎಂದು ಮಹಲಿಂಗಸ್ವಾಮಿಯ ಸಾಂಗತ್ಯದಿಂದ ತಿಳಿದು ಬರುತ್ತದೆ. ಇದು ನಿರ್ದಿಷ್ಟವಾಗಿರುವುದಿಲ್ಲ. ಪಟ್ಟ ಎಂದರೆ ೧೨ ವರ್ಷ; ಆದ್ದರಿಂದಲೂ ಈ ರಾಜನ ಹೆಸರುಳ್ಳ ಕೊನೆಯ ಶಾಸನವು ೧೨೮೮ ರಲ್ಲಿ ಬರೆಯಲ್ಪಟ್ಟಿರುವದರಿಂದಲೂ ಮುಮ್ಮಡಿಸಿಂಗನು ಕ್ರಿ. ಶ ೧೨೬೦ ರಿಂದ ೧೨೮೮ ರ ವರೆಗೆ ರಾಜ್ಯವಾಳಿರಬಹುದೆಂದು ಊಹಿಸಬಹುದು.

---

೧ A forgotten Empire by Sewell

೨ ಅಂತಪ್ಪ ಪುರವನು । ಅನಂತ ಕಾಲದೊಳ್ ಪೊರೆವ । ಭೂಕಾಂತ ರಾಮೇಂದ್ರನಾತನುಜಾ ॥
ಪಂಥಾದಿಂ ಸಲಹುವೆ ಜಟ್ಟಂಗಿರಾಯನು ಧರಣಿ । ಭೂಕಾಂತರಿಗೆ ತಲೆವಾಗದಂತೆ ॥ ೨೬ ॥

ಕುಮಾರರಾಮನ ಮಗನಾದ ಜಟ್ಟಂಗಿರಾಯನಿಗೆ ಪ್ರಭುದೇವನೆಂಬ ಗುರುವು ಪೊವಾಲಿಕುಲದ ಅರಸರ ಚರಿತ್ರೆಯನ್ನು ವಿವರವಾಗಿ ಹೇಳಿದಂತೆಯೂ ಕುಮಾರರಾಮನು ನಡೆಸಿದ ಕಾಳಗಗಳು ರಾಮಾಯಣ, ಮಹಾಭಾರತ, ಜೈಮಿನಿಭಾರತದ ಕಾಳಗಗಳಿಗಿಂತ ಮಿಗಿಲಾದುದೆಂದೂ ಕವಿ ಮಹಲಿಂಗಸ್ವಾಮಿಯು ಹೇಳಿರುವನು ( ಬಾಲಕುಮಾರ ರಾಮನ ಸಾಂಗತ್ಯ ಸಂಧಿ ೧.

ಕಂಪಿಲರಾಯನು ತನ್ನ ತಂದೆಯ ಮರಣಕಾಲಕ್ಕೆ ಇನ್ನೂ ಚಿಕ್ಕವನಾಗಿದ್ದನು. ಇವನು ಕ್ರಿ. ಶ. ೧೨೮೪ ರಿಂದ ರಾಜ್ಯವಾಳಲು ಆರಂಭಿಸಿರಬಹುದು. ಕ್ರಿ. ಶ. ೧೩೦೩ ರ ವೇಳೆಗೆ ದೇವಗಿರಿಯ ಯಾದವರ ಸೇನಾನಿಯಾಗಿ ದ್ವಾರಸಮುದ್ರದ ಹೊಯಿಸಳರ ಮೇಲೆ ಕ್ರಿ. ಶ. ೧೩೦೯ ರ ವರೆಗೂ ಕೆಲವು ದಾಳಿ ನಡೆಸಿದನು. ಮುಮ್ಮಡಿ ವೀರಬಲ್ಲಾಳನು ಕಂಪಿಲರಾಯನ ದೊರೆವಾಡಿಯನ್ನು ೧೩೨೦ ರಲ್ಲಿ ಮುತ್ತಿದನು; ಅಲ್ಲಿ ಕೂರಕನು ಮಡಿದನು. ಕುಮಾರರಾಮನು ಓರಗಲ್ಲಿಗೆ ಹೋದುದು ಕ್ರಿ. ಶ. ೧೩೨೪ ರಲ್ಲಿ ಇರಬಹುದು. ಓರುಗಲ್ಲು ಅರಸನು ಉಲೂಘಖಾನನಿಂದ ಸೋಲಿಸಲ್ಪಟ್ಟು ಬಲಕುಗ್ಗಿದವನಾದ್ದರಿಂದ ಕುಮಾರರಾಮನಿಗೆ ಸೋಲಬೇಕಾಯಿತು. ನಂತರ ಸ್ವಲ್ಪಕಾಲದಲ್ಲಿಯೇ ಹುಳಿಯಾರು ವಿಜಯ ನಡೆಯಿತು. ಇದು ಕ್ರಿ. ಶ. ೧೩೨೭ ರಲ್ಲಿ ಎಂದು ಯರಬಳ್ಳಿಯ ಶಾಸನದಿಂದ ( ಹಿರಿಯೂರು ೧೬ ) ವ್ಯಕ್ತವಾಗುತ್ತದೆ.

ಮುಹಮ್ಮದ್ ಬಿನ್ ತೊಗ್ಲಖನು ಕ್ರಿ. ಶ. ೧೩೨೫ ಫೆಬ್ರುವರಿಯಲ್ಲಿ ತಂದೆಯನ್ನು ಉಪಾಯದಿಂದ ಕೊಂದನು. ಇದಾದ ೪೦ ದಿವಸದ ಮೇಲೆ ದಿಳ್ಳಿಗೆ ಹೋದನು. ಅಲ್ಲಿ ಹೊಸ ಸುಲ್ತಾನನು ಗದ್ದುಗೆಗೇರಿದಾಗ ಪ್ರಮಾಣವಚನವನ್ನು ಬಾದೂರಖಾನನು ಮಾಡಲಿಲ್ಲವಾದ್ದರಿಂದ ಆವನನ್ನು ಸೆರೆಹಿಡಿಯಲು ಪ್ರಯತ್ನಮಾಡಿದಾಗ ದೇಶಭ್ರಷ್ಟನಾಗಿ ಅಲೆದಲೆದು ಕಂಪಿಲನ ರಾಜ್ಯಕ್ಕೆ ಬಂದು ಅಲ್ಲಿ ಆಶ್ರಯಪಡೆದನು. ಆದ್ದರಿಂದ ಇದು ಕ್ರಿ. ಶ. ೧೩೨೫ ನೆಯ ಸಂವತ್ಸರದ ಅಂತ್ಯಕಾಲ ಅಥವಾ ಕ್ರಿ. ಶ. ೧೩೨೬ ನೆಯ ಸಂವತ್ಸರದ ಪ್ರಾರಂಭದಲ್ಲಿರಬಹುದು.

ಆನಂತರ ಸೇವಿುಯು ದಿಲ್ಲಿಯಿಂದ ಸೈನ್ಯಸಮೇತನಾಗಿ ಕುಮ್ಮಟದುರ್ಗಕ್ಕೆ ಬಂದು ಮುತ್ತಿದನು. ಈ ಯುದ್ಧವು ಕೊನೆಗಾಣಲು ಒಂದು ವರ್ಷಕಾಲವಾಗಿರಬೇಕು. ಇವನ ಕಾಗದದ ಪ್ರಕಾರ ಹೊಯಿಸಳ ಬಲ್ಲಾಳದೇವರಾಯನು ಅನೇಕ ರಾಜರ ಸಹಾಯದಿಂದ ಕುಮ್ಮಟರಾಜ್ಯದಮೇಲೆ ದಾಳಿ ನಡೆಯಿಸಿದನು. ಆಗ ಹೊಯಿಸಳರ ಮಹಾಪ್ರಧಾನನೂ ಕಂಪಿಲರಾಯನ ಕಡುವೈರಿಯೂ ಆದ ಬೇಚಿಯದಣ್ಣಾಯಕನು ಮಡಿದನು. ಬೇಚಿದಣ್ಣಾಯಕನ ಮರಣಾನಂತರ ಇವನ ಹೆಸರಿನಲ್ಲಿ

ಅವನ ಮಕ್ಕಳಾದ ಬಲ್ಲಪ್ಪದಣ್ಣಾಯಕ ಮತ್ತು ಸಿಂಗಯ್ಯದಣ್ಣಾಯಕರು ಚಿತ್ರದುರ್ಗದ ಬೆಟ್ಟದ ಮೇಲೆ ಶಕ ೧೨೫೦ನೆಯ ವಿಭವ ಸಂವತ್ಸರದ ಶ್ರಾವಣ ಬಹುಳ ೧೦ ಸೋಮವಾರದ ದಿನ ಬೇಚೇಶ್ವರನೆಂಬ ಲಿಂಗ ಪ್ರತಿಷ್ಠೆ ಮಾಡಿದರು. ಇದೇ ವರ್ಷ ಜ್ಯೇಷ್ಠ ಶುದ್ಧ ೧ ಮಂಗಳವಾರದ ಒಂದು ಶಾಸನದಲ್ಲಿ ಬೇಚಿದಣ್ಣಾಯಕನ ಅಪ್ಪಣೆಯಿಂದ ಎಂದಿದೆ (ಹಿರಿಯೂರು ೧೮). ಇದರಿಂದ ಬೇಚಿದಣ್ಣಾಯಕನು ಮಡಿದ ಶಿರಗುಪ್ಪಿ ಕಾಳಗವು ಶಾ. ಶಕ ೧೨೫೦ನೆಯ ವಿಭವ ಸಂವತ್ಸರದಲ್ಲಿ ಅಂದರೆ ಕ್ರಿ. ಶ. ೧೩೨೮ನೆಯ ಜೂನ ತಿಂಗಳಿಂದ ಆಗಸ್ಟ ತಿಂಗಳ ಮಧ್ಯದಲ್ಲಿ ನಡೆದಿರಬಹುದೆಂದು ನಿರ್ಧರಿಸಲು ಅವಕಾಶವಿರುತ್ತದೆ.

ಮುಂದಿನ ವಸಂತಕಾಲದಲ್ಲಿ ಅಂದರೆ ಸುಮಾರು ಕ್ರಿ. ಶ. ೧೩೨೯ನೆಯ ಮಾರ್ಚ-ಏಪ್ರಿಲ್ ತಿಂಗಳಲ್ಲಿ ಕಂಪಿಲರಾಯನು ಬೇಟೆಯಾಡಲು ಹೋದುದು. ಅನಂತರ ಆರು ತಿಂಗಳ ಕಾಲ ಕುಮಾರರಾಮನು ನೆಲಮಾಳಿಗೆಯಲ್ಲಿ ಬಚ್ಚಿಡಲ್ಪಟ್ಟಿದುದು. ನೇಮಿಯ ತನೆಯ ದಾಳಿಯು ನಡೆದಾಗ ಕುಮಾರರಾಮನು ನೆಲಮಾಳಿಗೆಯಿಂದ ಎದ್ದು ಬಂದು ನೇಮಿಯನ್ನು ಸೋಲಿಸಿದನು; ಇದು ಕ್ರಿ. ಶ. ೧೩೨೯ನೆಯ ಸಂವತ್ಸರದ ಅಂತ್ಯದಲ್ಲಿ ನಡೆದಿರಬೇಕು.

ನೇಮಿಯನ್ನು ಜಯಿಸಿದ ನಂತರ ಕುಮಾರರಾಮನಿಗೆ ಪಟ್ಟಾಭಿಷೇಕವಾಯಿತು. ರಾಮನು ಕೆಲವು ಕಾಲ ಸುಖದಿಂದ ರಾಜ್ಯಭಾರ ಮಾಡಿದನು. ದಿಲ್ಲಿಯ ಸುಲ್ತಾನನು ಕಂಪಿಲರಾಯನೊಡನೆ ನಡೆಸಿದ ಕೊನೆಯ ಕಾಳಗವು ಕ್ರಿ. ಶ. ೧೩೨೮ ಎಂದು ಕೆಲವರೂ, ಕ್ರಿ. ಶ. ೧೩೩೭-೩೮ನೆಯ ಸಂವತ್ಸರ ಎಂದು ಕೆಲವು ಚರಿತ್ರಕಾರರೂ ಅಭಿಪ್ರಾಯಪಟ್ಟಿರುತ್ತಾರೆ. ಎರಡನೆಯ ಅಭಿಪ್ರಾಯಕ್ಕೆ ಕೆಲವು ಆಧಾರಗಳಿವೆ. ದಿಲ್ಲಿಯ ಸುಲ್ತಾನನು ಕುಮ್ಮಟನಗರವನ್ನು ಕೊನೆಯ ಸಲ ಮುತ್ತುವುದರೊಳಗಾಗಿ ಕಂಪಿಲರಾಯನ ಸಂಗಡ ೧೨ ವರ್ಷಗಳ ಕಾಲ ಯುದ್ಧ ಮಾಡಿದ್ದನು ಎಂದು ನ್ಯೂನಿಜನು ಹೇಳಿರುವನು. ತೊಗ್ಲಖ್ ಸಂತತಿಯವರು ದಿಲ್ಲಿಯ ಸಿಂಹಾಸನವನ್ನೇರಿದ್ದು ಕ್ರಿ. ಶ. ೧೩೨೦ನೆಯ ಸಂವತ್ಸರದಲ್ಲಿ. ಅನಂತರ ಸ್ವಲ್ಪ ಕಾಲದ ಮೇಲೆ ಉಲೂಘಖಾನನು ದಕ್ಷಿಣದೇಶಕ್ಕೆ ಸೈನ್ಯಸಮೇತ

ಹೊರಟು ಓರಗಲ್ಲಿಗೆ ಕ್ರಿ. ಶ. ೧೩೨೭ರಲ್ಲಿ ಎರಡನೆಯ ಸಲ ಮುತ್ತಿಗೆ ಹಾಕಿದನು. ಈ ಸುಮಾರಿನಲ್ಲಿ 'ಪಾಪಾಸು ಸಂಗತಿ' ನಡೆದಿರಬಹುದು. ಅಂದರೆ ಉಲೂಘಖಾನನು ಸುಮಾರು ಕ್ರಿ. ಶ. ೧೩೨೨ರಿಂದ ಕಂಪಿಲರಾಯ ನೊಡನೆ ಕಲಹ ಪ್ರಾರಂಭಿಸಿರಬೇಕು. ಅಲ್ಲಿಂದ ೧೨ ವರ್ಷ ಎಂದರೂ ೧೩೩೩-೧೩೩೪ರಲ್ಲಿ ಕೊನೆಯ ಕಾಳಗವು ನಡೆದಿರಬಹುದೆಂದು ಹೇಳ ಬಹುದು. ಇನ್ನೊಂದು ಸಂಗತಿಯೂ ಇದನ್ನು ಸಮರ್ಥನೆ ಮಾಡುತ್ತದೆ. ಇಬ್ಬನ್ ಬಟೂಟನೆಂಬ ಅಲ್ಜೀರಿಯಾದೇಶದ ಪ್ರವಾಸಿಯು ತಾನು ನೋಡಿದ ಸಂಗತಿ ಬರೆದಿಟ್ಟಿರುವನು. ಇವನು ಮುಲ್ತಾನಿಗೆ ಬಂದಾಗ ಮುಲ್ತಾನ್ ಪ್ರಾಂತಾಧಿಕಾರಿಯಾಗಿದ್ದ ಬೆಹರಾಂ ಅಬಿಯಾ ಅಥವಾ ಖಿಸ್ಲುಖಾನನ ತಲೆಯು ಪ್ರದರ್ಶಿಸಲ್ಪಟ್ಟಿದ್ದನ್ನು ನೋಡಿದನು. ಬಾದೂರ ಖಾನನ ಮೈಚರ್ಮದಲ್ಲಿ ಹುಲ್ಲು ತುಂಬಿ ದೇಶದೇಶಗಳಲ್ಲಿ ಪ್ರದರ್ಶಿಸಿ ಮುಲ್ತಾನಕ್ಕೆ ಕಳಿಸಿದ್ದರು. ಖಿಸ್ಲುಖಾನನು ದಿಲ್ಲಿಯ ಸುಲ್ತಾನನ ಈ ದುರ್ವರ್ತನೆಗೆ ಅಸಹ್ಯಪಟ್ಟು ದಂಗೆ ಎದ್ದನು. ಅದರ ಫಲವಾಗಿ ಅವನೂ ಕೊಲ್ಲಲ್ಪಟ್ಟನು. ಅಂದರೆ ಖಿಸ್ಲುಖಾನನ ಕೊಲೆಗೆ ಸ್ವಲ್ಪ ಕಾಲ ಮುಂಚೆ ಬಾದೂರಖಾನನ ಕೊಲೆಯಾಗಿತ್ತು. ಇಬ್ಬನ್ ಬಟೂಟನು ಭರತಖಂಡಕ್ಕೆ ಕ್ರಿ. ಶ. ೧೩೩೩ರಲ್ಲಿ ಬಂದನು. ಬಾದೂರಖಾನನ ಕೊಲೆಗೆ ಮುನ್ನವೇ ಕುಮ್ಮಟ ನಗರವು ಹಾಳಾಗಿತ್ತು. ಈ ಎಲ್ಲ ಅಂಶಗಳನ್ನೂ ಪರಿಶೀಲಿಸು ವುದರಿಂದ ಕುಮ್ಮಟನಗರವು ಸುಮಾರು ಕ್ರಿ. ಶ. ೧೩೩೩-೩೪ರಲ್ಲಿ ಸೂರೆ ಯಾಯಿತೆಂದು ನಿರ್ಧಾರವಾಗಿ ಹೇಳಬಹುದು. ಇನ್ನೊಂದು ಐತಿಹ್ಯವೂ ಈ ಕಾಲವನ್ನೇ ಸೂಚಿಸುತ್ತದೆ. ಈಗ ಮೈಸೂರು ಅರಸರ ಬಳಿ ಇರುವ ರತ್ನಸಿಂಹಾಸನವು ಕಂಪಿಲರಾಯನ ಬಳಿ ೧೩ ವರ್ಷ ಇದ್ದಿತು. ಇವನು ಸಾಯುವುದಕ್ಕೆ ಮುಂಚೆ ಈ ಸಿಂಹಾಸನವನ್ನು ಪೆನುಗೊಂಡೆ ಎಂಬ ಬಲವಾದ ಕೋಟೆಯಲ್ಲಿ ಬಚ್ಚಿಟ್ಟಿದ್ದನು. ಎರಡು ವರ್ಷದ ನಂತರ ಈ ಗುಟ್ಟನ್ನರಿತಿದ್ದ ಶ್ರೀವಿದ್ಯಾರಣ್ಯರು ಸಿಂಹಾಸನವನ್ನು ತರಿಸಿ ಕ್ರಿ. ಶ. ೧೩೩೬ರಲ್ಲಿ ಹರಿಹರರಾಯನನ್ನು ಈ ಸಿಂಹಾಸನಾಧೀಶ್ವರನನ್ನಾಗಿ ಮಾಡಿ ದರು. ಎರಡು ವರ್ಷ ಕಾಲಕ್ಕಿಂತ ಮುಂಚೆ ಅಂದರೆ ಕ್ರಿ. ಶ. ೧೩೩೪ರಲ್ಲಿ ಕುಮ್ಮಟ ನಗರವು ಹಾಳಾಗಿತ್ತೆಂದು ಇದರಿಂದಲೂ ವ್ಯಕ್ತವಾಗುತ್ತದೆ.

## ಕಾಲನಿರ್ಣಯ ಪಟ್ಟಿ

| | |
|---|---|
| ಮುಮ್ಮಡಿಸಿಂಗನ ರಾಜ್ಯಭಾರ | ಕ್ರಿ. ಶ. ೧೨೬೦ರಿಂದ ೧೨೮೪ |
| ಕಂಪಿಲರಾಯನು ದೇವಗಿರಿಯರಸರ ಸೇನಾನಿಯಾಗಿ ಹೊಯ್ಸಳರೊಡನೆ ಕಾದಿದ್ದು | ೧೩೦೩ರಿಂದ ೧೩೦೯ |
| ದೊರವಾಡಿಗೆ ವೀರಬಲ್ಲಾಳನ ಮುತ್ತಿಗೆ | ೧೩೨೦ |
| ಪಾಪಾಸು ಮೆಟ್ಟಿದುದು | ೧೩೨೨ರಿಂದ ೧೩೨೩ |
| ಕುಮಾರರಾಮನ ವಿವಾಹಗಳು | ೧೩೨೩ |
| ಬೊಲ್ಲನನ್ನು ಹಿಡಿದು ತಂದುದು | ೧೩೨೪ |
| ಹುಳಿಯಾರು ವಿಜಯ | ೧೩೨೫ |
| ಬಾದೂರನು ಮೊರೆ ಬಂದದ್ದು | ೧೩೨೬ |
| ನೇಮಿಯ ೧ನೆಯ ದಾಳಿ | ೧೩೨೭ |
| ಬಲ್ಲಾಳರಾಯನ ಸೋಲು | ೧೩೨೮ |
| ನೇಮಿಯ ೨ನೆಯ ದಾಳಿ | ೧೩೨೯ |
| ನೇಮಿಯ ೩ನೆಯ ದಾಳಿ | ೧೩೩೩ರಿಂದ ೧೩೩೪ |
| ವಿಜಯನಗರ ಸಾಮ್ರಾಜ್ಯ ಸ್ಥಾಪನೆ | ೧೩೩೬ |

ಸೂಚನೆ—ಮೇಲೆ ಹೇಳಿರುವ ಕಾಲನಿರ್ಣಯವು ಕಟ್ಟಕಡೆಯ ಮಾತಲ್ಲ. ಶೋಧನೆಗಳಿಂದ ಇವು ಮಾರ್ಪಾಡಾಗಬಹುದು. ಅಲ್ಲಿಯ ವರೆಗೆ ಈ ಕಾಲನಿರ್ಣಯವು ನಿಶ್ಚಿತವಾದುದೆಂದು ತಿಳಿಯಬಹುದು.

**ಕನ್ನಡ ಸಾಹಿತ್ಯ**—ಕಂಪಿಲರಾಯನಿಗೆ ಶಿಲಾಶಾಸನಗಳಲ್ಲಿ ಕಂಪಿಲ ದೇವರಾಯ ಎಂದು ಹೇಳಿದೆ. ಕವಿಗಳು ಇವನನ್ನು ದೇವರಾಜ ಎಂದು ಸಂಬೋಧಿಸಿರುವರು. ಇವನ ಓಲಗದಲ್ಲಿ 'ಹಂಸಸಾಗರರು, ಕವಿ ಭೂಷಣರು, ಹಾಸ್ಯದಲ್ಲಿ ಪ್ರತಿಮೆಯನ್ನು ಮಾತನಾಡಿಸುವವರು' ಇದ್ದರು.[೧] ಹರಿಹರ ಕವಿಯು ತನ್ನ ಪಂಪಾ ವಿರೂಪಾಕ್ಷ ಶತಕದಲ್ಲಿ 'ದೇವರಾಯನಿಗೆ ವರವನಿತ್ತು ಸಲಹುವುದು' ಎಂದು ಹೇಳಿರುವನು.[೨]

---

೧ ಬಾಲಕುಮಾರರಾಮನ ಸಾಂಗತ್ಯ.

೨ ಕವಿಚರಿತೆ ಭಾಗ ೧ ಪುಟ ೧೬೦.

ಕವಿ ರಾಘವಾಂಕನ ಪಾಂಡಿತ್ಯಕ್ಕೆ ಪಂಪಾಪುರದ ದೇವರಾಜನು ಮೆಚ್ಚಿ ಕವಿಶರಭಭೇರುಂಡನೆಂಬ ಪೆಂಡೆಯವನ್ನು ಕೊಟ್ಟನು ಎಂದು ಸಿದ್ಧನಂಜೇಶನು ತನ್ನ ರಾಘವಾಂಕ ಕಾವ್ಯದಲ್ಲಿ ಹೇಳಿರುವನು.[೧] ಅಗ್ಘಣಿ ಹಂಪಯ್ಯನೆಂಬ ವಚನಕಾರನು 'ಹಂಸಪತಿ, ಗರುಡಪತಿ, ವೃಷಭಪತಿ, ಸರ್ವಜೀವಾಧಿಪತಿ, ದೇವರಾಯ ಮಹಾರಾಯನ ಅರಸುತನ ಹೊಸತು; ಓಲಗಕ್ಕೆ ಬಾರ,ಸಿಂಹಾಸನದಲ್ಲಿ ಕುಳ್ಳಿರ, ಸ್ತ್ರೀಲಂಪಟನಾಗಿ ಅಂತಃಪುರವ ಬಿಟ್ಟು ಹೊರವಡ, ಕಪ್ಪಕಾಣಿಕೆಯನೊಪ್ಪಿಸಿಕೊಂಬವರಿಲ್ಲ, ಗುರುವೆಂಬ ತಳವಾರನಾಜ್ಞೆ ಕೆಟ್ಟಿತ್ತು; ತೆರೆದ ಬಾಗಿಲ ಮುಚ್ಚುವರಿಲ್ಲ; ಮುಚ್ಚಿದ ಬಾಗಿಲ ತೆರವರಿಲ್ಲ; ಹಂಪೆಯ ವಿರೂಪನ ಅರಸುತನ ಕೆಟ್ಟಿತ್ತು; ಭಕ್ತರೆಂಬುವರಿನ್ನು ಬದುಕಲೀ ಬಾರದು' ಎಂಬ ವಚನವು ಹಂಪೆಯ ವಿರೂಪಾಕ್ಷನ ಪರವಾಗಿಯೂ, ಹಂಪೆಯ ರಾಜನಾದ ದೇವರಾಯನ ಪರವಾಗಿಯೂ ವ್ಯಂಗ್ಯವಾಗಿ ಕೆಲವು ವಿಷಯಗಳನ್ನು ಹೇಳುತ್ತದೆ. ಇಲ್ಲಿ ಪ್ರಸ್ತಾಪಿತನಾಗಿರುವ ದೇವರಾಯನೂ, ಸಿದ್ಧನಂಜೇಶನು ರಾಘವಾಂಕ ಕಾವ್ಯದಲ್ಲಿ ಹೇಳುವ ದೇವರಾಯನೂ, ಮೆ॥ ಬ್ರೌನ್‌ರವರು ಹೇಳಿರುವ ದೇವರಾಯನೂ ಒಬ್ಬನೇ ಆಗಿರಬೇಕು.[೨] ಆದ್ದರಿಂದ ಅಗ್ಘಣಿ ಹಂಪಯ್ಯ, ಹರಿಹರ ಮತ್ತು ರಾಘವಾಂಕರು ಕಂಪಿಲದೇವರಾಯನ ಕಾಲದಲ್ಲಿದ್ದರೆಂದು ಹೇಳಬಹುದು.

ಹರಿಹರನು ಗಿರಿಜಾಕಲ್ಯಾಣವೆಂಬ ಚಂಪೂಗ್ರಂಥವನ್ನೂ, ಶಿವಶರಣರ ರಗಳೆಗಳನ್ನೂ, ಅನೇಕ ಶತಕಗಳನ್ನೂ ಬರೆದಿರುವನು. ಬಸವದೇವ ರಗಳೆ ಎಂಬ ಗದ್ಯಪದ್ಯ ಮಿಶ್ರವಾದ ಗ್ರಂಥವೂ ಇವನಿಂದ ರಚಿತವಾಗಿದೆ. ಇವನಿಗೆ ರಗಳೆ ಕವಿಯೆಂದು ಹೆಸರು. ಇವನು ಹಾಕಿಕೊಟ್ಟ ಹೊಸ ಮಾರ್ಗವನ್ನು ಅನೇಕ ಶೈವ ಕವಿಗಳು ಅನುಸರಿಸಿರುವರು. ರಾಘವಾಂಕನು ಹರಿಹರನ ಸೋದರಳಿಯನಾಗಬೇಕೆಂದು ಅನೇಕ ಚರಿತ್ರಕಾರರು

---

೧ ಶ್ರೀಮಾನ್ ತ. ಸು. ರಾಮಸ್ವಾಮಿ ವಕೀಲರು ಚಿತ್ರದುರ್ಗ ಇವರ ಬಳಿ ಇರುವ ಕೈಬರಹದ ಸಿದ್ಧನಂಜೇಶನ ರಾಘವಾಂಕ ಕಾವ್ಯ ಸಂಧಿ ೩.

೨ ಪ್ರಬುದ್ಧ ಕರ್ಣಾಟಕ ಸಂಪುಟ ೧೯, ಸಂಚಿಕೆ ೪, ಪುಟ ೫೯. ಶ್ರೀ.ಡಿ. ಎಲ್. ನರಸಿಂಹಾಚಾರ್ಯರ ಕೆಲವು ವಚನಕಾರರು ಎಂಬ ಲೇಖನ.

ಹೇಳಿರುವರು. ಈ ಸಂಬಂಧ ನಿಜವಲ್ಲವೆಂಬುದು ಕೆಲವರ ಮತ. ಅದು ಹೇಗೂ ಇರಲಿ ರಾಘವಾಂಕನು ಹರಿಹರನಿಗೆ ಪ್ರಿಯಶಿಷ್ಯನಾಗಿದ್ದನೆಂಬುದು ನಿಶ್ಚಯವಾಗಿದೆ. ರಾಘವಾಂಕನು ಹರಿಶ್ಚಂದ್ರಕಾವ್ಯ, ಸೋಮನಾಥ ಚರಿತೆ, ಸಿದ್ಧರಾಮ ಪುರಾಣ ಮುಂತಾದ ಅನೇಕ ಗ್ರಂಥಗಳನ್ನು ಷಟ್ಪದಿಯಲ್ಲಿ ಬರೆದಿರುವನು.

**ರತ್ನಸಿಂಹಾಸನ—** ಹರಿಹರ, ಬುಕ್ಕರು ರತ್ನಸಿಂಹಾಸನವನ್ನು ಏರಿದರೆಂದು ಅನೇಕ ಶಾಸನಗಳಲ್ಲಿ ಉಕ್ತವಾಗಿದೆ. ರಾಘವಾಂಕ ಕವಿಯು ತನ್ನ ಹರಿಶ್ಚಂದ್ರಕಾವ್ಯವನ್ನು ದೇವರಾಜನ ಸಭೆಯಲ್ಲಿ ಓದಿದಾಗ, ದೇವರಾಯನು ರತ್ನಪೀಠದಲ್ಲಿ ಮಂಡಿಸಿದ್ದನು. ಮೈಸೂರ ಈಗಿನರಸರ ಬಳಿ ಇರುವ ರತ್ನಸಿಂಹಾಸನದ ಪೂರ್ವ ಚರಿತ್ರೆಯಲ್ಲಿ ಈ ರೀತಿ ಹೇಳಿದೆ: ಕಂಪಿಲರಾಯನು ೧೩ ವರ್ಷ ರತ್ನಸಿಂಹಾಸನದ ಮೇಲೆ ಕುಳಿತು ಆಳಿದ ನಂತರ ಆ ರಾಯನು ಇದನ್ನು ನೆಲಮಾಳಿಗೆಯಲ್ಲಿರಿಸಿದ್ದನು. ಎರಡುವರ್ಷಗಳನಂತರ ಶ್ರೀ. ವಿದ್ಯಾರಣ್ಯರು ಈ ಸಂಗತಿಯನ್ನು ತಿಳಿದು, ಸಿಂಹಾಸನವನ್ನು ತರಿಸಿ, ಹೊಸದಾಗಿ ರಾಜ್ಯವನ್ನು ಸ್ಥಾಪಿಸಿ ಆನೆಗೊಂದಿಯಲ್ಲಿ ಈ ರತ್ನಸಿಂಹಾಸನದ ಮೇಲೆ ಕುಳ್ಳಿರಿಸಿ ಕ್ರಿ. ಶ. ೧೩೨೬ ರಲ್ಲಿ ಪಟ್ಟಕಟ್ಟಿದರು. ವಿಜಯನಗರ ರಾಜ್ಯವು ಖಿಲವಾದ ಮೇಲೆ ಈ ಸಿಂಹಾಸನವು ಶ್ರೀರಂಗಪಟ್ಟಣಕ್ಕೆ ತರಲ್ಪಟ್ಟಿತು. ಮೈಸೂರಿನ ರಾಜಒಡೆಯರು ಶ್ರೀರಂಗಪಟ್ಟಣವನ್ನು ಕ್ರಿ. ಶ. ೧೬೧೦ ರಲ್ಲಿ ಆಕ್ರಮಿಸಿ ರತ್ನಸಿಂಹಾಸನದ ಮೇಲೆ ವಿರಾಜಿಸಿದರು. ಅಂದಿನಿಂದ ಮೈಸೂರ ರಾಜ್ಯವು ಪ್ರವರ್ಧಮಾನವಾಗಿ ರತ್ನಸಿಂಹಾಸನಾಧೀಶ್ವರರಾದ ಮೈಸೂರು ಒಡೆಯರು ಕರ್ನಾಟಕ ಸಿಂಹಾಸನಾಧೀಶ್ವರರಾದರು.

## ಕುಮ್ಮಟರಾಜ್ಯ ವಿಸ್ತಾರ

ಕುಮಾರರಾಮನ ರಾಜಧಾನಿಯಾದ ಕುಮ್ಮಟನಗರವು ಬಹು ಕಾಲಕ್ಕೆ ಮುಂಚಿನಿಂದಲೂ ಪ್ರಸಿದ್ಧವಾದ ಕೋಟೆಯಾಗಿತ್ತು. ಕ್ರಿ. ಶ. ೧೧೭೮ ರ ವೇಳೆಗೆ ಹೊಯಿಸಳ ವಿಷ್ಣುವರ್ಧನನು ಚಾಲುಕ್ಯ ಮತ್ತು ಕಾಲಚೂರ್ಯ ರಾಜ್ಯಕ್ಕೆ ಸೇರಿದ್ದ ಅನೇಕ ಕೋಟೆಗಳನ್ನು ಸ್ವಾಧೀನ

ಮಾಡಿಕೊಂಡನು. ಅವುಗಳಲ್ಲಿ ಕುಮ್ಮಟದುರ್ಗವೂ[೧] ಒಂದಾಗಿತ್ತು. ಈಚೆಗೆ ಇಮ್ಮಡಿ ಬಲ್ಲಾಳರಾಯನೂ ಈ ಕೋಟೆಯನ್ನು ಸಾಧಿಸಿದ್ದನು. ಕ್ರಮೇಣ ಅದು ಹಾಳುಬಿದ್ದಿತ್ತು. ಕುಮಾರರಾಮನು ಒಮ್ಮೆ ಬೇಟೆಗಾಗಿ ಹೋದಾಗ ಹಾಳಾಗಿದ್ದ ಕೋಟೆಯನ್ನು ಕಂಡು ರಾಜಧಾನಿಯಾಗಿರಲು ಅದು ಯೋಗ್ಯ ಸ್ಥಳವೆಂದು ಅದರ ಬಳಿಯೇ ಹೊಸದಾಗಿ ಇನ್ನೊಂದು ಕೋಟೆಯನ್ನು ನಿರ್ಮಿಸುವುದು ಸೂಕ್ತವಾದುದೆಂದು ತನ್ನ ತಂದೆಗೆ ತಿಳಿಸಿದನು. ದುರ್ಗನಿರ್ಮಾಣದಲ್ಲಿ ಹೆಸರು ಪಡೆದಿದ್ದ ಬೈಚಪನು ಹೊಸ ಕುಮ್ಮಟದುರ್ಗವನ್ನು ಕಂಪಿಲರಾಯನ ಅಪ್ಪಣೆಯಂತೆ ನಿರ್ಮಿಸಿದನು. ಮಲ್ಲೇಶನ ಗುಡಿಯ ಮುಂದೆ ಶಾಸ್ತ್ರೋಕ್ತವಾಗಿ ಕುಮ್ಮಟದುರ್ಗವು ನಿರ್ಮಿತವಾಗಿ ಶೃಂಗಾರದಿಂದ ರಂಜಿಸಿತು. ಇದು ಆಗಿನ ಕಾಲದ ಶ್ರೇಷ್ಠವಾದ ಕೋಟೆಗಳಲ್ಲಿ ಒಂದಾಗಿತ್ತೆಂದು ಪರಿಗಣಿಸಲ್ಪಟ್ಟಿತ್ತು.

ಈಗ ಕುಮ್ಮಟದುರ್ಗದ ಅವಶೇಷಗಳು ಮಾತ್ರ ಇವೆ. ಈ ನಿವೇಶನವು ತುಂಗಭದ್ರಾನದಿಯ ಉತ್ತರ ದಿಕ್ಕಿನಲ್ಲಿ ಆನೆಗೊಂದಿಯಿಂದ ಆರು ಮೈಲು ದೂರದಲ್ಲಿದೆ. ಗಿಣಗೆರೆ ರೈಲ್ವೆನಿಲ್ದಾಣದಿಂದ ನಿಜಾಮ ಪ್ರಾಂತದ ಗಂಗಾವತಿಯ ಬಳಿ ಇರುವ ಮುಕ್ಕುಂಪೆ ಎಂಬ ಸ್ಥಳಕ್ಕೆ ಮೋಟಾರಿನಲ್ಲಿ ಹೋಗಿ, ಅಲ್ಲಿಂದ ಕುಮ್ಮಟಕ್ಕೆ ಕಾಲುನಡಿಗೆಯಲ್ಲಿ ಹೋಗುವುದು ಸುಲಭವಾದ ದಾರಿ. ಹಾಳು ಕುಮ್ಮಟವು ಬಸಲೆ ಕಲ್ಲಪ್ಪನಗುಡ್ಡ, ನಿಚ್ಚಣಿಗೆಗುಡ್ಡ, ಕಿಲ್ಲೇದಗುಡ್ಡ, ಬಂಡೆಗುಡ್ಡ, ಹನುಮಂತದೇವರಗುಡ್ಡ, ಮಾದಿಗರ ಹಂಪಯ್ಯನಗುಡ್ಡ, ಕುಮಾರರಾಮನಗುಡ್ಡ ಎಂಬ ಏಳು ಗುಡ್ಡಗಳ ಮಧ್ಯದಲ್ಲಿರುವುದು. ಮುಕ್ಕುಂಪೆ ಕಣಿವೆ, ಬೆಸಕಲ್ಲು ಕಣಿವೆ, ಆನೆಗೊಂದಿ ಕಣಿವೆ, ಬಸವಾಪುರ ಅಥವಾ ಹರಳಾಪುರದ ಕಣಿವೆಗಳು ಈ ಗುಡ್ಡಗಳ ಮಧ್ಯದಲ್ಲಿರುವ ಕಿರಿದಾದ ದಾರಿಗಳಾಗಿವೆ. ಬಳೆಭಾವಿ, ಬಹದೂರನಬಂಡೆ, ಗಂಗಮ್ಮನಹಳ್ಳ, ಪಾಪಾಸುಗುಡ್ಡ, ಜೇನುಕಲ್ಲು ಎಂಬುವು ಗಮನಿಸಬೇಕಾದ ಸ್ಥಳಗಳಾಗಿವೆ. ಹೊಸ

---

೧ ನಾಗಮಂಗಲ ೭೦

ಕುಮ್ಮಟದ ಸುತ್ತಲೂ ಇರುವ ಕೋಟೆಯು ಕ್ರಿ. ಶ. ೧೨೯೪ ರಲ್ಲಿ ನಿರ್ಮಾಣವಾದ ರಾಯಚೂರು ಕೋಟೆಯಂತಿದೆ. ಈ ಕೋಟೆಯಲ್ಲಿ ತೋಪುಗಳನ್ನು ಇಡಲು ಸ್ಥಳ ಏರ್ಪಟ್ಟಿಲ್ಲವಾದುದರಿಂದ, ತೋಪುಗಳ ಉಪಯೋಗವು ಪ್ರಚಾರಕ್ಕೆ ಬರುವ ಮುನ್ನನೇ ಈ ಕೋಟೆಯು ನಿರ್ಮಾಣವಾದದ್ದೆಂಬುದರಲ್ಲಿ ಸಂದೇಹವಿಲ್ಲ. ಈ ಕೋಟೆಯಲ್ಲಿ ಈಗ ಚಿಂತಾಲು ಕಲ್ಲು, ಬೈಚಪ್ಪನಗುಡಿ, ವೀರಗಲ್ಲುಗಳು, ಕುಮಾರರಾಮನ ಪ್ರತಿಮೆ, ಹುಲಿಬಾಗಿಲು, ಕಾಟಪ್ಪನಗುಡಿ, ಜಟ್ಟಿಂಗಿರಾಮನಗುಡಿ, ಬೊಲ್ಲನ ಹೆಜ್ಜೆಯ ಗುರುತುಗಳು, ಬೊಲ್ಲನಗುಂಡು, ಬೊಲ್ಲನಕಿವಿ ಮುಂತಾದವುಗಳು, ಕುಮಾರರಾಮನ ಮತ್ತು ಅವನ ಅನುಯಾಯಿಗಳ ಸ್ಮಾರಕಗಳಾಗಿವೆ.

ಒಟ್ಟಿನಲ್ಲಿ, ಕಂಪಿಲರಾಯನು ಮೊದಲು ಕುರುಗೋಡು ಮತ್ತು ಕಣೆಯಕಲ್ಲು ನಾಡುಗಳಿಗೆ ಒಡೆಯನಾಗಿದ್ದನು. ಪ್ರವರ್ಧಮಾನನಾದ ಮೇಲೆ ಹೊಸಮಲೆದುರ್ಗವನ್ನು ಕಟ್ಟಿದನು. ಇವನ ಸಹೋದರನಾದ ಖಂಡೆಯರಾಯನು ಹರಿಹರ ಕ್ಷೇತ್ರವನ್ನು ಒಳಗೊಂಡ ಉಚ್ಚಂಗಿ ನಾಡಿಗೆ ಮಹಾಮಂಡಲಾಧಿಕಾರಿಯಾಗಿ ಕಂಪಿಲರಾಯನ ಅಧೀನನಾಗಿದ್ದನು. ಕುಮಾರರಾಮನು ಕುಮ್ಮಟನಗರವನ್ನು ನಿರ್ಮಿಸಿದನು. ಹಾನಗಲ್ಲು ಸೀಮೆಯನ್ನು ಕಟ್ಟಿದನು. ಮೋನಾದಿ ಮತ್ತು ಬಾದಾಮಿ ನಗರಗಳನ್ನು ಸ್ವಾಧೀನಮಾಡಿಕೊಂಡನು. ಕರಿಯ ಹೊಳೆಯನ್ನು ದಾಟಿ ರಾಜ್ಯವನ್ನು ವಿಸ್ತರಿಸಿದನು. ಇಕ್ಕೇರಿ, ಕಲ್ಯಾಣ, ಕಲ್ಬುರ್ಗಿ, ಸಾಗರ, ತೊರಗಲ್ಲು, ಬಾದಾಮಿ, ಸೀರ್ಯ, ಬಸವಾಪಟ್ಟಣ, ಆದವಾನಿ ಸೀಮೆಗಳ ಮೇಲೆ ಕುಮಾರರಾಮನ ಅಧಿಕಾರವು ವ್ಯಾಪಿಸಿತ್ತು.

ಈ ಚರಿತ್ರೆಯ ಮುಖ್ಯನಾಯಕನಾದ ಕುಮಾರರಾಮನು ಅತ್ಯಲ್ಪಕಾಲ ಮಾತ್ರ ರಾಜ್ಯಭಾರಮಾಡಿದನು. ಆಗ ಅವನ ತಂದೆಯಾದ ಕಂಪಿಲರಾಯನು ಜೀವಂತನಾಗಿದ್ದು ರಾಜ್ಯಕಾರ್ಯದಲ್ಲಿ ಪಾತ್ರವಹಿಸುತ್ತಿದ್ದುದರಿಂದ ಚಿಕ್ಕಪ್ರಾಯದ ಕುಮಾರರಾಮನ ಹೆಸರಿನ ಶಾಸನಗಳು ದೊರೆತಿಲ್ಲ. ಅವನ ದೇಹವು ಅಳಿಯಿತು; ಅಂಬುಗೂಡಾಗಿ ಮಡಿದು ವೀರ

ಸಗ್ಗಕೇರಿದನು. ಕೀರ್ತಿಯು ಮಾತ್ರ ಚಿರಸ್ಥಾಯಿಯಾಗಿದೆ. ಅವನನ್ನು ಸ್ಮರಿಸಿರುವ ಕೆಲವು ಸಂದರ್ಭಗಳು ಕಂಡುಬಂದಿವೆ:

'ಜಟ್ಟಿಂಗಿ ರಾಮಯ್ಯದೇವರಿಗೆ ರಾಮನಾತನಿನಾಮ. ಯನಸಿಶ ಕೊನೇರಿ ಮಗಳು ರಾಮನಾತನಿಯು ಕನಕ ಬೊಂಬೆಯನ್ನು ಸಮರ್ಪಿಸಿ ನಮನ ಮಾಡಿದಳು.' ಎಂದು ಜಟ್ಟಿಂಗಿ ರಾಮಗಿರಿಯಲ್ಲಿ ರಾಮೇಶ್ವರ ದೇವಾಲಯದ ಮಹಾದ್ವಾರದಲ್ಲಿ ಹಾಸಿರುವ ಕಲ್ಲಿನಲ್ಲಿ ಕೆತ್ತಿದೆ.[೧] ಇದರಲ್ಲಿ ಶಕವರ್ಷ ಹೇಳಿಲ್ಲ; ವಿರೋಧಿ ಎಂದು ಉಕ್ತವಾಗಿದೆ. ಕ್ರಿ. ಶ. ೧೩೪೯ನೆಯ ಸಂವತ್ಸರ ಎಂದು ಹೇಳಬಹುದು. ಕನಕಬೊಂಬೆಯನ್ನು ಸಮರ್ಪಿಸಿದವಳು ಕುಮಾರರಾಮನ ಹಿರಿಯರಾಣಿ ರಾಮಲಾದೇವಿ ಇರಬಹುದೇ ? ಕುಮಾರರಾಮನ ಎಲ್ಲ ರಾಣಿಯರು ಅಗ್ನಿಕುಂಡದಲ್ಲಿ ಬಿದ್ದು ಜೋಹರು ಆದರು ಎಂದು ಕತೆಯಲ್ಲಿ ಹೇಳಿದೆ. ಆದರೆ ಕುಮಾರರಾಮನ ಮರಣ ಕಾಲಕ್ಕೆ ಜಟ್ಟಿಂಗಿರಾಯ ಎಂಬ ಚಿಕ್ಕಮಗನು ಇದ್ದನೆಂದು ಬಾಲಕುಮಾರರಾಮನ ಸಾಂಗತ್ಯದಲ್ಲಿ ಹೇಳಿರುವುದರಿಂದ, ರಾಮಲಾದೇವಿಯು ಬಾಲಕನ ಸಂರಕ್ಷಣೆಗಾಗಿ ಬದುಕಿರಬಹುದು ಎಂದು ಹೇಳಬಹುದಾಗಿದೆ. ಶ್ರೀವೀರಭೂಪತಿ ಒಡೆಯರು ಜಟ್ಟಿಂಗಿ ರಾಮದೇವರಿಗೆ ಧರ್ಮಶಾಸನವನ್ನು ಬರೆಸಿಕೊಟ್ಟು ಅಂತ್ಯದಲ್ಲಿ 'ಶ್ರೀರಾಮನಾಥ' ಎಂದು ಕನ್ನಡದಲ್ಲಿ ತನ್ನ ಒಪ್ಪಿತವನ್ನು ಹಾಕಿರುವನು. ವಿಜಯನಗರದ ಅರಸುಗಳೆಲ್ಲ ತಮ್ಮ ಶಾಸನಗಳಲ್ಲಿ 'ಶ್ರೀವಿರೂಪಾಕ್ಷ' ಎಂದು ತಮ್ಮ ಒಪ್ಪಿತವನ್ನು ಹಾಕಿರುವರು. ಈ ವೀರಭೂಪತಿಯ ತಂದೆಯ ಹೆಸರು ಈ ಶಾಸನದಲ್ಲಿ ಹೇಳಿಲ್ಲ. ಈ ವೀರಭೂಪತಿಯು ಕುಮಾರರಾಮನ ವಂಶಜನಾಗಿರಬಹುದೇ ?[೨] ಕ್ರಿ. ಶ. ೧೩೪೨ನೆಯ ವರ್ಷದ ಒಂದು ವೀರಗಲ್ಲಿನಲ್ಲಿ 'ಕುಮಾರರಾಮನಾಥನ ಪ್ರತಾಪವಾಗಿ ಅಂಬುಗೂಡಾಗಿ ಸ್ವರ್ಗವನ್ನು ಸೂರೆಗೊಂಡುದಕೆ' ಎಂದು ಹೇಳಿದೆ.[೩] ಆದ್ದರಿಂದ ಕುಮಾರರಾಮನು ಪ್ರತಾಪಶಾಲಿಯಾಗಿ ಶತ್ರುಗಳೊಡನೆ ಕಲಿತನದಿಂದ ಕಾದಾಡುತ್ತಿದ್ದಾಗ ಬಾಣಗಳ ಪೆಟ್ಟಿನಿಂದ ವೀರಸ್ವರ್ಗವನ್ನೇರಿದನು ಎಂಬುದು ನಿಶ್ಚಿತವಾದ ಸಂಗತಿಯಾಗಿದೆ.

---

೧. ಮೊಳಕಾಲ್ಮುರು ೩೦. ೨. ಮೊಳಕಾಲ್ಮುರು ೩೧. ೩. ತೀರ್ಥಹಳ್ಳಿ ೨೩

ಹಾಳುಹಂಪೆಯ ಆನೆಯ ಲಾಯದ ಸಮೀಪದಲ್ಲಿ ಕುಮಾರರಾಮನ ಗರುಡಿಮನೆ ಎಂಬ ಪುರಾತನವಾದ ಕಟ್ಟಡ ಇದೆ.[೧] ಜಟ್ಟಂಗಿ ಗಿರಿಯ ಮೇಲೆ ಕುಮಾರರಾಮನು ಗರುಡಿಯ ಸಾಧನೆಗಳನ್ನು ಮಾಡುತ್ತಿದ್ದ ಒಂದು ಗುಹೆ ಇದೆ.[೨] ಆನೆಗೊಂದಿಯ ಸಮೀಪದಲ್ಲಿ 'ಕುಮಾರರಾಮನ ಗುಂಟೆ' ಎಂಬ ಕೊಳವೊಂದು ಇದೆ.[೩] ಕುಮಾರರಾಮನ ಹೆಸರನ್ನು ಇವು ಈಗಲೂ ನೆನಪಿಗೆ ತರುತ್ತವೆ.

ಕುಮಾರರಾಮನ ಹೆಸರು ಕೆಲವು ಗ್ರಂಥಗಳಲ್ಲಿಯೂ ಹೇಳಿದೆ. ಚೆನ್ನಬಸವಪುರಾಣದ ಕಾಲಜ್ಞಾನ ಕಾಂಡದಲ್ಲಿ :—

ಮುಂತೆ ಹೊಸಮಲೆಯಲ್ಲಿ ಕಂಪಿಲನೆನಿಪ್ಪ ಭೂ
ಕಾಂತನಿಹನವನ ಸುಕುಮಾರಕಂ ರಾಮನಾ
ಥಂ ತನಗೆ ಕುಮ್ಮಟವೆನಿಪ್ಪ ದುರ್ಗವನಿರದೆ ಕಟ್ಟಿಸುನವರ್ತಿಯಿಂದೇ॥೭೭॥
ಅಲ್ಲಿ ತಾನಿರುತೆ ಸುತ್ತಣ ಭೂಮಿಪಾಲಕರ
ನೆಲ್ಲಂ ಗೆಲ್ದು ಹೊಗಳಿಸಿಕೊಳಲದಂ ಕೇಳ್ದು ।
ದಿಳ್ಳಿಯಿಂದಿರದೆ ಲಕ್ಕದ ಮೇಲೆ ತೊಂಭತ್ತಾರು ಸಾವಿರ ಕುದುರೆ ಸಹಿತೆ ।
ಬಲ್ಲಿದ ಸುಖಾನರಾ ಕುಮ್ಮಟಕೆ ದಾಳಿಯಂ
ನಿಲ್ಲದೈತಂದು ತಾವೀರ್ವರುಂ ಕಾದಿ ಬಳಿ
ಕಲ್ಲಿಯೇ ಬಯಲಪ್ಪರಾಗಲಾ ಕುಮ್ಮಟಂ ಹಾಳಪ್ಪದೇನೆಂಬೆನು ॥ ೭೮ ॥

ಎಂದಿದೆ.[೪] ಕೆಳದಿ ನೃಪವಿಜಯದಲ್ಲಿ ಕಂಪಿಲರಾಯನ ಮಗನಾದ ಕುಮಾರ ರಾಮನ ದಂಡನ್ನು ಸುಲ್ತಾನನು ಕಾಳಗದಲ್ಲಿ ನಿರ್ಮೂಲಮಾಡಿ ಭೂಮಂಡಲವನ್ನು ಆಳಿದನು ಎಂದು ಹೇಳಿದೆ.

ಅವರೊಳ್ಕಂಪಿಲರಾಯನ
ಕುವರನೆನಿಪ್ಪ ಕುಮಾರರಾಮನ ದಂಡಂ ।

೧ Q. J. M. S. Vol XX, Page 11.

೨ M. A. R. 1930 at page 27 F. T.

೩ Q. J. M. S. Vol XX at page 13,

೪ ಧಾರವಾಡದ ವಿದ್ಯಾವರ್ಧಕ ಸಂಸ್ಥೆಯವರು ೧೯೩೪ರಲ್ಲಿ ಪ್ರಕಾಶಿಸಿರುವ ವಿರೂಪಾಕ್ಷ ಪಂಡಿತ ಕೃತ ಚೆನ್ನಬಸವಪುರಾಣ ಭಾಗ ೧ ಸಂಧಿ ೯ ಪದ್ಯಗಳು ೭೭-೭೮,

**ಬವರದೆ ಮುಳುಗಿಸಿ ಶೋಭಿಸು ।**
**ವವನೀ ಮಂಡಳವನಾಳ್ದನಾ ಸುಲತಾನಂ॥ ೧**

ಈ ಕುಮಾರರಾಮನಾಥನ ಹೆಸರನ್ನು ರಾಜಕಾಲನಿರ್ಣಯ ಮತ್ತು ಶಿವತತ್ವರತ್ನಾಕರ ಎಂಬ ಗ್ರಂಥಗಳಲ್ಲಿಯೂ ಹೇಳಿದೆ. ಯಕ್ಷಗಾನರೂಪದಲ್ಲಿ ಕುಮಾರರಾಮನ ಕತೆಯೂ ರಚಿತವಾಗಿರುವುದು.[೨]

## ಬೈಚಪ್ಪ

ಕಂಪಿಲರಾಯನ ಮಂತ್ರಿಯಾದ ಬೈಚಪ್ಪ ದಂಡನಾಯಕನು ಜಾಣನಾದ ಮಂತ್ರಿಯಾಗಿದ್ದನು. ಇವನು ಜೈನಮತದವನು. ಮಂತ್ರಿವಂಶದಲ್ಲಿಯೇ ಜನಿಸಿದವನು. ಚತುರ್ಥವಂಶ ( ವರ್ಣ ) ಮಣಿದೀಪನಾದ ಮಲ್ಲಗೌಡನಿಗೆ ಆತನ ಪ್ರಿಯೆ ಹಂಪಮಾಂಬಿಕೆಯ ಗರ್ಭದಲ್ಲಿ ಅಜ್ಜನು ಜನಿಸಿದನು. ಅಜ್ಜನ ಸತಿ ಜಿನಪೂಜಾರತೆಯಾದ ತಿಪ್ಪಮಾಂಬಿಕೆಯ ಗರ್ಭದಲ್ಲಿ ಬೈಚನು ಜನಿಸಿದನು. ಇವನು ಮಹಾ ಕೀರ್ತಿವಂತನಾಗಿ ಹನೆಯ ಮತ್ತು ನಿಡು ಎಂಬ ಕೋಟೆಗಳನ್ನು ನಿಡುಗಲ್ಲು ರಾಜರ ಅಪ್ಪಣೆಯಿಂದ ಕ್ರಿ. ಶ. ೧೨೭೮ರಲ್ಲಿ ನಿರ್ಮಿಸಿದನು.[೩] ಇವನಿಗೆ ಮಂತ್ರಿ ಬೀಚಣ, ಬೀಚಪ್ಪ, ಕುಮ್ಮಟದ ಬೀಚ ಮುಂತಾದ ಹೆಸರುಗಳಿವೆ. ಈ ಮಹಾಶಯನು ಮುಮ್ಮಡಿಸಿಂಗ, ಕಂಪಿಲರಾಯ ಮತ್ತು ಕುಮಾರರಾಮ ಈ ಮೂರು ರಾಜರ ಕಾಲದಲ್ಲಿಯೂ ಮಂತ್ರಿಯಾಗಿದ್ದನಲ್ಲದೆ, ಕುಮ್ಮಟರಾಜ್ಯವು ಅಳಿದು ಅದರ ಸ್ಥಾನದಲ್ಲಿ ಉದಯಿಸಿದ ವಿಜಯನಗರದ ಅರಸರ ಕಾಲದಲ್ಲಿಯೂ ಮಂತ್ರಿಯಾಗಿದ್ದನು.

ಹರಿಹರ ಧರಣೀಪಾಲಕನು ಪ್ರೀತಿಯಿಂದ ಬೈಚ ದಂಡೇಶನನ್ನು ನಿಜ ಸಚಿವನನ್ನಾಗಿ ಮಾಡಿಕೊಂಡನು. ಹರಿಹರನ ಅನುಜನಾದ ಬುಕ್ಕ

---

೧ ಕೆಳದಿ ನೃಪವಿಜಯ ಸಂಧಿ IX ಪದ್ಯ ೩೦.

೨ ಯಕ್ಷಗಾನ ಮಾತು ಸಹಿತ ಮೂಡಲ್ಪಾಯ ಕುಮಾರರಾಮನ ಕಥೆ ಎಂಬ ಗ್ರಂಥವು ಯಳಂದೂರು ತಾಲ್ಲೂಕು ಹಗರಮಾಂಬಳ್ಳಿಯ ನಾಗಪ್ಪಶೆಟ್ಟರಿಂದ ರಚಿಸಲ್ಪಟ್ಟು ಎಂ. ಆರ್. ವೆಂಕಟಾಚಲಶೆಟ್ಟರು ಬೆಂಗಳೂರು ಇವರಿಂದ ಪ್ರಕಟಿಸಲ್ಪಟ್ಟಿದೆ.

೩ ಮೊಳಕಾಲ್ಮುರು ೨೦.

ನೃಪಾಲನು ಅವನಿಗೆ ಗುಟ್ಟಾದ ಕಾರ್ಯವನ್ನು ವಹಿಸಿದನು.[೧] ಬೈಚಚಮೂಪನೂ ಇವನ ಸಂತತಿಯವರೂ ವಿಜಯನಗರದರಸರ ಕಾಲದಲ್ಲಿ ಅನೇಕ ಕಾಲ ಮಂತ್ರಿಗಳಾಗಿ[೨] ವಿಜಯನಗರಸಾಮ್ರಾಜ್ಯಕ್ಕೆ ಮೂಲ ಸ್ತಂಭಗಳಾಗಿದ್ದರು. ಈಗ ದೊರೆತಿರುವ ಶಾಸನಗಳ ಆಧಾರದಿಂದಲೂ, ಇತರ ಗ್ರಂಥಗಳ ಆಧಾರದಿಂದಲೂ ಈ ಮಂತ್ರಿಯ ವಂಶವೃಕ್ಷವು ಈ ಕೆಳಗೆ ಕಂಡಂತೆ ಇದೆ:

### ವಂಶವೃಕ್ಷ

ಮಲ್ಲನಗೌಡ—ಹಂಪಮಾಂಬಿಕೆ
|
ಅಜ್ಜ—ತಿಪ್ಪಮಾಂಬಿಕೆ
|
ಬೈಚಚಮೂಪ
|
ಬೈಚ

| | |
|---|---|
| ಮಂಗಪ್ಪ ದಂಡಾಧಿಪ | ಇರುಗ |
| ಬೈಚಯ್ಯದಣ್ಣಾಯಕ | ಇರುಗಪ್ಪ |
| ರಾಯಣ್ಣರಾಯ | |

### ಭಾವಸಂಗಮ

ಮುಮ್ಮಡಿ ವೀರಬಲ್ಲಾಳ ಮುಂತಾದವರ ಸಂಗಡ ನಡೆದ ಕದನದಲ್ಲಿ ಭಾವಸಂಗಮನಿಗೆ ಹಸಿಗಾಯವಾಯಿತು ಎಂದು ಮೇಲೆ ಹೇಳಿದೆಯಷ್ಟೆ. ಭಾವ ಎನ್ನುವುದರಿಂದ ಆ ಕಾಲದ ರಾಜಕುಮಾರರ ಭಾವನಾಗ

೧ ಬೇಲೂರು ೧೪.

೨ ಶಿವಮುಗ್ಗಿ ೭೧.

ಬೇಕೆಂದು ವ್ಯಕ್ತವಾಗುವುದು. ನೀರಾಟವಾಡುವಾಗ ರಾಮಯ್ಯನನ್ನು ಭಾವಸಂಗಮನು ಮುತ್ತಿದನೆಂದೂ ಭಾವನ ಮೇಲೆ ರಾಮಯ್ಯನು ಹರಿಗೋಲನ್ನು ನೂಕಿ ನೀರೆಸೆದನು ಎಂದೂ ಹೇಳಿರುವುದರಿಂದ[೧] ಈ ಭಾವಸಂಗಮನು ಕುಮಾರರಾಮನ ಭಾವನೆಂದೇ ವ್ಯಕ್ತವಾಗುವುದು. ಈ ಭಾವಸಂಗಮನೇ ವಿಜಯನಗರಸಾಮ್ರಾಜ್ಯ ಸ್ಥಾಪಕರಾದ ಹರಿಹರ ಸೋದರರ ತಂದೆಯಾದ ಸಂಗಮನಿರಬಹುದೇ ಎಂದು ಚರಿತ್ರೆಕಾರರಿಗೆ ಸಂದೇಹವುಂಟಾಗಿದೆ. ಕೆಲವು ಶಾಸನಗಳಲ್ಲಿ ಹರಿಹರ ಸೋದರರ ತಾಯಿಯ ಹೆಸರು ಮಾಲಾಂಬಿಕಾ[೨] ಎಂದೂ, ಮಾರಾಂಬಿಕಾ[೩] ಎಂದೂ ಹೇಳಲ್ಪಟ್ಟಿದೆ. ಭಾವಸಂಗಮನು ಕುಮಾರರಾಮನ ಭಾವನೂ, ಕಂಪಿಲ ರಾಯನ ಮೋಹದ ಅಳಿಯನೂ[೪] ಆಗಿದ್ದನು; ಅಂದರೆ ಕಂಪಿಲರಾಯನ ಮಗಳಾದ ಮಾರಮ್ಮನ ಗಂಡನೆಂದು ವ್ಯಕ್ತವಾಗುವದು.

ಕಂಪಿಲರಾಯನ ಆಸ್ಥಾನದಲ್ಲಿ ಉದಯಗಿರಿಯ ಸಂಗಮ ಎಂಬ ಮಾನ್ಯನಿದ್ದನು. ಹರಿಹರನ ತಮ್ಮನಾದ ಕಂಪರಾಯನು ವಿಜಯನಗರ ಸಾಮ್ರಾಜ್ಯವು ಉದಯವಾದ ಮೇಲೆ ಉದಯಗಿರಿಯ ಮಂಡಲಾಧಿಪತಿ ಯಾಗಿದ್ದು ಹರಿಹರರಾಯನಿಗಿಂತ ಮುಂಚೆಯೇ ಮರಣಹೊಂದಿದನು. ಈ ಉದಯಗಿರಿಯ ಸಂಗಮನೂ, ಭಾವಸಂಗಮನೂ ಒಬ್ಬನೆಯೋ ಅಥವಾ ಬೇರೆ ಬೇರೆಯೋ ಹೇಳಲು ಸಾಧ್ಯವಿಲ್ಲ.

## ಹರಿಹರ ಸೋದರರು

ಕಂಪಿಲರಾಯನ ಆಸ್ಥಾನದಲ್ಲಿ ಹರಿಹರ, ಬುಕ್ಕ, ಕಂಪ ಎಂಬುವ ಮಾನ್ಯರಿದ್ದರು. ಇವರೆಲ್ಲರೂ ಕಲಿತನದಿಂದ ಮುಸಲ್ಮಾನರೊಡನೆ ಕಾದಿ

---

೧ ನಾಗಸಂಗಯ್ಯ ಸಂದಿ ೧೪, ಪದ್ಯ ೧೩-೧೪.

೨ ಗುಡಿಬಂಡೆ ೪೬, ಮುಳಬಾಗಿಲು ೧೫೪, ಗೋರಿಬದನೂರು ೫೬.

೩ Mysore Gazetteer, New Edition Vol II Part III at Page 1419

೪ Q. I. M S. for October 1929 at page 8 Foot Note 10.

ದಂತೆ ತಿಳಿಯುಬರುತ್ತದೆ. ಬುಕ್ಕನು ಕಂಪಿಲರಾಯನ ಅರಮನೆಯಲ್ಲಿ ಆಪ್ತಸಚಿವನೋ ಪ್ರತೀಹಾರಿಯೋ ಆಗಿದ್ದಂತೆ ಕಾಣುತ್ತದೆ. ಕಂಪಿಲ ರಾಯನು ಕುಮಾರರಾಮನನ್ನು ಸೆರೆಹಿಡಿದು ಕೊಲ್ಲಬೇಕೆಂಬ ಗುಟ್ಟಾದ ಕಾರ್ಯವನ್ನು ಬೈಚಚಮೂಪನಿಗೆ ಬುಕ್ಕನ ಮೂಲಕ ಹೇಳಿ ಕಳುಹಿಸಿ ದನು. ಕುಮಾರರಾಮನ ತಲೆಯನ್ನು ಪಲ್ಲಕ್ಕಿಯಲ್ಲಿಟ್ಟು ಕಾಶಿಗೆ ಕಳುಹಿಸಿ ದಾಗ ಅದರ ಸಂಗಡ ಹರಿಹರ ಮತ್ತು ಬುಕ್ಕರು ಕಾವಲಾಗಿ ಹೋಗಿದ್ದರು. ಭಂಡಾರಿ ಹರಿಹರ ಬುಕ್ಕ ಎಂದು ಹೇಳಿರುವುದರಿಂದ ಇವರು ಕೋಶಾಧಿ ಕಾರಿಗಳಾಗಿದ್ದರೆಂದು ಹೇಳಬಹುದು. ರಾಜಕಾಲನಿರ್ಣಯ ಮತ್ತು ಶಿವತತ್ವರತ್ನಾಕರ ಎಂಬ ಗ್ರಂಥಗಳಲ್ಲಿ ಬರುವ ಶ್ಲೋಕಗಳೂ ಇವ ರಿಬ್ಬರೂ ರಾಮನಾಥನ ಒಳಿ ಕೋಶಪಾಲಕರಾಗಿದ್ದರೆಂಬ ಸಂಗತಿ ಯನ್ನೇ ಸಮರ್ಥಿಸುತ್ತವೆ. ಕಂಪಿಲನ ರಾಜ್ಯ ಸೂರೆಯಾದಾಗ ಸುಲ್ತಾನ ನಿಗೆ ಸೆರೆಸಿಕ್ಕವರಲ್ಲಿ ಹರಿಹರನೂ ಇದ್ದನೆಂದು ಸ್ಯೂನೀಜ್ ಹೇಳಿದ್ದಾನೆ.

## ಗುಜ್ಜಲೋಬ

ಕುಮಾರರಾಮನ ಆಸ್ಥಾನದಲ್ಲಿದ್ದ ಅನೇಕ ವೀರರು ಅನಂತರ ಬೇರೆ ಬೇರೆ ಪಾಳೆಯಗಳನ್ನು ಸ್ಥಾಪಿಸಿದಂತೆ ತಿಳಿಯುಬರುತ್ತದೆ. ಗುಜ್ಜಲೋಬನು ಹೊಸದುರ್ಗ (ಜಗಲೂರು ತಾಲ್ಲೂಕಿನಲ್ಲಿದೆ) ಎಂಬಲ್ಲಿ ಒಂದು ಪಾಳೆಯ ವನ್ನು ಸ್ಥಾಪಿಸಿದನು.

## ಪೂವಾಲಿಕುಲದರಸರ ವಂಶವೃಕ್ಷ

ವೀರಕಸ್ತೂರಿನಾಯ್ಕ
|
ಗೊತ್ತಿಲ್ಲ
|
ಗೊತ್ತಿಲ್ಲ
|
ಮುಮ್ಮಡಿಸಿಂಗ
|
ಕಂಪಿಲರಾಯ (ಹೆಂಡತಿಯರು)
೧. ಹರಿಯಾಲದೇವಿ ೨. ಕನ್ನಾಜಿ ೩. ಹಂಪಾಜಿ
೪. ಸಿಂಗಾಜಿ ೫. ಸಿರಾಮಣಿ ೬. ಕಾಟಮ್ಮ ೭. ರತ್ನಾಜಿ

ಕಂಪಿಲರಾಯನ ಮಕ್ಕಳು:

- ಅಣ್ಣ ಭೈರವ
- ಮಾರಮ್ಮ, ಪತಿ ಭಾವಸಂಗಮ
  - ಹರಿಹರ
  - ಕಂಪ
  - ಬುಕ್ಕ
  - ಮುದ್ದಪ್ಪ
  - ಮಾರಪ್ಪ
- ಕಾಟಣ್ಣ
- ರಾಮನಾಥ ಅಥವಾ ಕುಮಾರರಾಮ (ಹೆಂಡತಿಯರು)
  ೧. ರಾಮಲಾದೇವಿ ೪. ಭೂಮಾಯಿ
  ೨. ಕಾಮಕ್ಕ ೫. ತಿಮ್ಮಕ್ಕ
  ೩. ಸೋಮಾಯಿ
  - ಜಟ್ಟಂಗಿರಾಯ
- ಸಿಂಗಮ್ಮ
- ಲಿಂಗಣ್ಣ
- ಇತರ ೧೧ ಜನ ಮಕ್ಕಳು

ಗಂಡುಗಲಿ

# ಕುಮಾರರಾಮನ ಕತೆ

●

ಕನ್ನಡ ದೊರೆ ಮುಮ್ಮಡಿಸಿಂಗನು ತೀರಿಕೊಂಡಾಗ ಅವನ ಮಗ ಕಂಪಿಲದೇವನಿಗೆ ಎಳೆಪ್ರಾಯ. ರಾಣಿ ಮಂಚಲೆಯೂ ಅಷ್ಟೇ ಎಳೆಹರೆಯ. ರಾಜ್ಯದಲ್ಲಿ ಬರ ಬಿತ್ತು. ಮಂಚಲೆ ಚಿನ್ನಹಗರಿಯ ದಡದಲ್ಲಿ, ಜಟ್ಟಂಗಿ ರಾಮಗಿರಿಯ ಬಳಿ ಚಿಕ್ಕ ಮಗುವಿನೊಡನೆ ಬಂದು ನೆಲೆಸಿದಳು. ಅಲ್ಲಿಯ ಜಟ್ಟಂಗಿ ರಾಮೇಶನು ಅವರ ಮನೆದೇವರಾದನು. ಅವನ ದಯೆಯಿಂದ ಮುಂದೆ ಕಂಪಿಲರಾಯನು ಪ್ರಬುದ್ಧನಾಗಲು ಕಂಪಳ ಎದ್ದು ಲೋಹಗಿರಿಗೆ ಹೋಗಿ ಕುಮಾರಸ್ವಾಮಿಯ ಪೂಜೆಮಾಡಿ ಹೊಸಮಲೆ ಕಣಿವೆಯಲ್ಲಿ ಹಟ್ಟಿಯನ್ನು ಕಟ್ಟಿಕೊಂಡನು. ಕೆಲವು ಕಾಲದ ಮೇಲೆ ಹೊಸಮಲೆ ದುರ್ಗ ಎಂಬ ಕೋಟೆಯನ್ನು ಕಟ್ಟಿ ಪಟ್ಟಾಭಿಷಿಕ್ತನಾಗಿ ಗುತ್ತಿಯ ಜಗದಪ್ಪರಾಯನಿಗೆ ಆಶ್ರಿತನಾದನು. ಅವನ ಪಟ್ಟಮಹಿಷಿ ಹರಿಯಾಲ ದೇವಿಗೆ ಮಾರವ್ವ, ಕುಮಾರರಾಮ, ಸಿಂಗಮ್ಮ ಎಂಬ ಮಕ್ಕಳಾದರು. ಜಟ್ಟಂಗಿ ರಾಮೇಶನ ವರಪ್ರಸಾದದಿಂದ ಕುಮಾರರಾಮನು ಜನಿಸಿದನು. ಇವನು ಪ್ರವೃದ್ಧಮಾನನಾಗಿ ಗರಡಿಯ ಸಾಧನೆಯಲ್ಲಿಯೂ, ಗಜತುರಗ ದೇರಾಟದಲ್ಲಿಯೂ ಪ್ರವೀಣನಾದನು. ಕಂಪಿಲರಾಯನು ರತ್ನಾಜಿ ಎಂಬ ಬೆಡಗುಗಾತಿಯನ್ನು ಲಗ್ನವಾಗಿ ಅವಳಲ್ಲಿ ಹೆಚ್ಚು ಪ್ರೀತಿಯಿಟ್ಟಿದ್ದನು.

ಹರಿಯಾಲದೇವಿಗೆ ತನ್ನ ಮಗ ಕುಮಾರರಾಮನ ಮೇಲೆ ಚಿಕ್ಕಮ್ಮನ ಮೋಹದೃಷ್ಟಿ ಬಿದ್ದೀತೆಂಬ ಭಯ! ಅದನ್ನು ತಿಳಿದು ಕುಮಾರರಾಮನು 'ಪರದಾರ ಸೋದರ'ನೆಂಬ ಬಿರುದನ್ನು ಧರಿಸಿ ಪರಸ್ತ್ರೀಯರನ್ನು ಒಡ ಹುಟ್ಟಿದ ಅಕ್ಕತಂಗಿಯರಂತೆ ಕಾಣುವುದಾಗಿ ತಾಯಿಗೆ ವಚನಕೊಟ್ಟನು.

ಕುಮಾರರಾಮನ ಅಭಿಲಾಷೆಯಂತೆ ಕಂಪಿಲರಾಯನು ತನ್ನ ಮಂತ್ರಿಯಾದ ಬೈಚಪ್ಪನಿಂದ ಕುಮ್ಮಟದುರ್ಗವನ್ನು ಕಟ್ಟಿಸಿಕೊಟ್ಟನು. ಕುಮಾರರಾಮನು ಅಲ್ಲಿ ನೆಲೆಸಿ ಸುತ್ತಣ ರಾಯರನ್ನು ಗೆದ್ದು ಸುಖದಿಂದ ರಾಜ್ಯವನ್ನು ಪರಿಪಾಲಿಸುತ್ತಿದ್ದನು. ಇವನ ರೂಪಕ್ಕೆ ದಿಲ್ಲಿಯ ಸುಲ್ತಾನನ ಮಗಳು ಬಾಬಮ್ಮನು ಮೋಹಿಸಿ ಕುಮಾರರಾಮನನ್ನೇ ಲಗ್ನವಾಗು ವುದಾಗಿ ಹಟಹಿಡಿದಳು. ಮಗಳ ಇಚ್ಛೆಯನ್ನು ಈಡೇರಿಸಲು ಸುಲ್ತಾನನು ಮಾಡಿದ ಪ್ರಯತ್ನಗಳು ವಿಫಲವಾದವು. ರಾಮನನ್ನು ಏನಾದರೂ ಮಾಡಿ ದಿಲ್ಲಿಗೆ ಕರೆತರಲು ಸುಲ್ತಾನನು ಸಣ್ಣ ಸೈನ್ಯವನ್ನು ಕುಮ್ಮಟ ದುರ್ಗಕ್ಕೆ ಕಳುಹಿಸಿದನು. ರಾಮನು ಅವರನ್ನು ಅವಮಾನಗೊಳಿಸಿದನು. ಗುತ್ತಿದುರ್ಗದ ರಾಜನಾದ ಜಗದಪ್ಪರಾಯನು ಸುಲ್ತಾನನ ಕಡೆಯವರ ಆಜ್ಞೆಯಂತೆ ಕುಮ್ಮಟಕ್ಕೆ ಮುತ್ತಿಗೆ ಹಾಕಿ ಸೋತುಹೋಗಿ ರಾಮನ ಶೌರ್ಯವನ್ನು ಮೆಚ್ಚಿ ತನ್ನ ಮಗಳು ರಾಮಲಾದೇವಿಯನ್ನು ಅವನಿಗೆ ಕೊಟ್ಟು ವಿವಾಹಮಾಡಿದನು. ಕಂಪಿಲರಾಯನು ಪಂಚಕನ್ಯೆಯರನ್ನು ತಂದು ಕುಮಾರರಾಮನಿಗೆ ವಿವಾಹಮಾಡಿದನು.

ರಾಮನು ಓರಗಲ್ಲಿಗೆ ಹೋಗಿ ಎಪ್ಪಟಿರಾಜನ ಬಳಿ ಇದ್ದ ಒಂದು ಲಕ್ಷ ವರಹ ಬಾಳುವ ಕುದುರೆಯನ್ನು ಹಿಡಿದು ತಂದನು. ಅಲ್ಲಿಯ ದಳ ವಾಯಿ ಪಟ್ಟಣದ ಶೆಟ್ಟಿ ಲಿಂಗಣ್ಣನೆಂಬ ವೀರನು ಕುಮಾರರಾಮನ ಧೀರ ತನಕ್ಕೆ ಮೆಚ್ಚಿ ಪ್ರತಾಪರುದ್ರರಾಯನನ್ನು ತ್ಯಜಿಸಿ ರಾಮನ ಸ್ನೇಹಿತನಾಗಿ ಅವನನ್ನು ಹಿಂಬಾಲಿಸಿದನು. ಈ ಸುದ್ದಿಯನ್ನು ಕೇಳಿ ಹುಳಿಯಾರಿನ ಸಾಮಂತನಾದ ಮಾರಗೌಡನು ರಾಮನನ್ನು ಸೋಲಿಸುವೆನೆಂದು ಜಂಭ ಕೊಚ್ಚಿಕೊಳ್ಳಲು, ಕುಮಾರರಾಮನು ಹುಳಿಯಾರನ್ನು ಮುತ್ತಿ ಮಾರನ ಗೌಡನನ್ನು ಸೋಲಿಸಿ ಕಪ್ಪಕಾಣಿಕೆಯನ್ನೂ ಅವನ ಬಳಿ ಇದ್ದ ಹೊನ್ನ ಗಿಳಿಯನ್ನೂ ಪಡೆದು ಹಿಂತಿರುಗಿದನು.

ತಸವನ್ನು ಒಪ್ಪಿಕೊಂಡು, ಅವಶ್ಯವಾದಾಗ ಅವರ ಅಂಗಬಲ, ಅರ್ಥ ಬಲಗಳನ್ನು ಕೊಡುತ್ತಿದ್ದರೆ ಸಾಕಾಗಿತ್ತು. ಇವನು ೧೩೧೬ರಲ್ಲಿ ಮಡಿದನು.

ಅನಂತರ ಇವನ ಮಗನಾದ ಮುಬಾರಕನು ದಿಳ್ಳಿಯ ಪಟ್ಟವನ್ನು ಏರಿ ಐದು ವರ್ಷ ರಾಜ್ಯವಾಳಿದನು. ಇವನ ಕಾಲದಲ್ಲಿ ದೇವಗಿರಿಯ ಯಾದವರು ದಂಗೆಯೇಳಲು ಸುಲ್ತಾನನು ದೇವಗಿರಿಯನ್ನು ಮುತ್ತಿ, ರಾಜನಾದ ಹರಪಾಲನನ್ನು ಸೆರೆಹಿಡಿದು, ಬದುಕಿರುವಾಗಲೆ ಚರ್ಮ ಸುಲಿಸಿ, ತಲೆಯನ್ನು ಕೋಟೆಯ ಬಾಗಿಲಿಗೆ ಕಟ್ಟಿಸಿದನು. ದೇವಗಿರಿಯಲ್ಲಿ ತನ್ನ ಕಡೆಯ ರಾಜಪ್ರತಿನಿಧಿಯನ್ನು ನೇಮಿಸಿ ಆ ರಾಜ್ಯದಲ್ಲಿ ಅಲ್ಲಲ್ಲಿ ತನ್ನ ಕಡೆಯ ಅಮೀರರನ್ನೂ ಅವರ ಕೈಕೆಳಗೆ ದಂಡುಗಳನ್ನೂ ಇಟ್ಟು ಯಾದ ವರು ತಲೆಯೆತ್ತದಂತೆ ಮಾಡಿದನು. ದೇವಗಿರಿಯಿಂದ ಮುಬಾರಕನು ಸೇನಾಪತಿಯಾದ ಖುಸ್ರುಖಾನನನ್ನು ಓರಂಗಲ್ಲಿಗೆ ಮುತ್ತಿಗೆ ಹಾಕಲು ಕಳುಹಿಸಿದನು. ಕ್ರಿ. ಶ. ೧೩೧೮ ರಲ್ಲಿ ಪ್ರತಾಪರುದ್ರನು ಖುಸ್ರುವಿಗೆ ಸೋತು ತನ್ನ ಎಲ್ಲ ಐಶ್ವರ್ಯವನ್ನೂ ಅವನಿಗೆ ಒಪ್ಪಿಸಿ ಐದು ಜಿಲ್ಲೆ ಗಳನ್ನು ಅವನ ವಶಮಾಡಿದನು.

ಮುಬಾರಕನು ಕ್ರಿ. ಶ. ೧೩೨೦ರಲ್ಲಿ ಕೊಲೆಯಾದನು. ಖುಸ್ರುವು ದಿಳ್ಳಿಯ ಸಮ್ರಾಟನಾದನು. ಇವನು ಗುಜರಾತ ದೇಶದವನು. ಪರಯ ಜಾತಿಯವನು. ಕುಲಗೆಟ್ಟು ಖುಸ್ರುಖಾನ್ ಎಂಬ ಹೆಸರಿನಿಂದ ಅಧಿಕಾರ ವನ್ನು ಪಡೆದು ಮುಬಾರಕನಿಗೆ ಆಪ್ತನಾದನು. ಇವನು ತನ್ನ ಸ್ವಾಮಿ ಯನ್ನೇ ಕೊಲೆಮಾಡಿ ನಸ್ರುದೀನ್ ಎಂಬ ಹೆಸರಿನಿಂದ ಸುಲ್ತಾನನಾದನು. ಇವನ ಕಾಲದಲ್ಲಿ ಆಸ್ಥಾನದಲ್ಲಿ ಪರಯರ ಪ್ರಾಬಲ್ಯ ಬೆಳೆಯಿತು. ಉಚ್ಚ ಕುಲದ ಹಿಂದೂ ಸ್ತ್ರೀಯರು ಅವರ ಹಾವಳಿಗೆ ತುತ್ತಾದರು. ಖುರಾನು ಅಶುದ್ಧಮಾಡಲ್ಪಟ್ಟಿತು. ಮಸೀದಿಗಳಲ್ಲಿ ವಿಗ್ರಹಗಳು ಸ್ಥಾಪಿತವಾದವು. ಇದರಿಂದ ಹಿಂದೂಗಳೂ ಮುಸಲ್ಮಾನರೂ ಇವನನ್ನು ದ್ವೇಷಿಸತೊಡಗಿ ದರು. ನಾಲ್ಕು ತಿಂಗಳೊಳಗಾಗಿ ಗಯಾಸುದೀನ್ ತೊಗಲಕ್‌ನು ಖುಸ್ರುವನ್ನು ಸೋಲಿಸಿ ತಾನೇ ಸಿಂಹಾಸನವನ್ನೇರಿದನು.

ಳರೇ ಮುಖ್ಯ ರಾಜಮನೆತನದವರಾಗಿ ದಕ್ಷಿಣ ಭಾರತದ ಬಹುಭಾಗವನ್ನು ಆಳುತ್ತ ತೆಂಕಣ ಚಕ್ರವರ್ತಿಗಳೆಂಬ ಅಭಿದಾನದಿಂದ ಪ್ರಸಿದ್ಧರಾಗಿದ್ದರು. ಒಟ್ಟಿನಲ್ಲಿ ಕ್ರಿ. ಶ. ೧೩೦೦ನೆಯ ವರ್ಷದ ಸುಮಾರಿನಲ್ಲಿ ದಕ್ಷಿಣ ಭರತಖಂಡವನ್ನು ಒಂದು ಬಗೆಯ ನಿಶ್ಚಿಂತನವು ಆವರಿಸಿತ್ತು.

## ದಿಲ್ಲಿಯ ಸುಲ್ತಾನರೂ, ದಕ್ಷಿಣದೇಶವೂ

### ಖಿಲ್ಜೀ ಸಾಮ್ರಾಜ್ಯ ವಿಸ್ತರಣೆ

ಕ್ರಿ. ಶಕದ ೧೩ನೆಯ ಶತಮಾನದ ಅಂತ್ಯದಲ್ಲಿ ಖಿಲ್ಜೀ ಮನೆತನದ ಜಲಾಲುದ್ದೀನನು ಸುಲ್ತಾನನಾದನು. ಇವನ ಅಣ್ಣನ ಮಗ ಅಲ್ಲಾವುದ್ದೀನನು ಮಹತ್ವಾಕಾಂಕ್ಷೆಯುಳ್ಳವನು. ಅದುವರೆಗೂ ಮುಸಲ್ಮಾನರು ದಕ್ಷಿಣ ಭರತಖಂಡವನ್ನು ಪ್ರವೇಶಿಸಿರಲಿಲ್ಲ. ಅಲ್ಲಾವುದ್ದೀನನು ಅಕಸ್ಮಾತ್ತಾಗಿ ಕ್ರಿ. ಶ. ೧೨೯೪ ರಲ್ಲಿ ದೇವಗಿರಿಯನ್ನು ಮುತ್ತಿ, ಮೋಸದಿಂದ ಅಲ್ಲಿಯ ಅರಸನಾದ ರಾಮದೇವನನ್ನು ಸೋಲಿಸಿ, ಅಪಾರ ಧನವನ್ನು ದೋಚಿಕೊಂಡು ಹೋದನು. ಇವನು ದಿಲ್ಲಿಯ ಗಾದಿಯ ಮೇಲೆ ಭದ್ರವಾಗಿ ಕುಳಿತಮೇಲೆ ಅಲೆಗ್ಝಾಂಡರನಂತೆ ತಾನೂ ದಂಡಯಾತ್ರೆಮಾಡಿ ಕೀರ್ತಿವಂತನಾಗಬೇಕೆಂದು ಹಂಬಲಿಸತೊಡಗಿದನು. ಈ ಉದ್ದೇಶದಿಂದ ತನ್ನ ಕಡೆಯ ಸೇನಾನಿಗಳನ್ನು ದೊಡ್ಡ ಸೇನೆಗಳೊಡನೆ ದಾಳಿ ನಡೆಸಲು ಕಳುಹಿಸಿದನು. ಇವನ ನೆಚ್ಚಿನ ಸೇನಾನಿ ಮಲ್ಲಿಕಾಫುರನು ದೇವಗಿರಿ, ದ್ವಾರಸಮುದ್ರ, ಮಲಬಾರ್ ಮೊದಲಾದ ರಾಜರುಗಳನ್ನು ಸೋಲಿಸಿ, ರಾಮೇಶ್ವರದಲ್ಲಿ ಒಂದು ಮಸೀತಿಯನ್ನು ಕಟ್ಟಿಸಿ, ವಿಪುಲ ಐಶ್ವರ್ಯದೊಡನೆ ಹಿಂತಿರುಗಿದನು. ಇದೇ ವೇಳೆಯಲ್ಲಿ ಮಧುರೆಯಲ್ಲಿ ಅಂತಃಕಲಹ ಉಂಟಾಗಿ ಬಂಧುದ್ರೋಹಿಯೂ, ದೇಶದ್ರೋಹಿಯೂ ಆದ ಸುಂದರಪಾಂಡ್ಯನು ದಿಲ್ಲಿಯ ಸುಲ್ತಾನನ ಸಹಾಯವನ್ನು ಕೋರಲು ಕಾಫುರನು ಸಹಾಯಮಾಡಿ ತಾನೇ ಮಧುರೆಯನ್ನಾಕ್ರಮಿಸಿದನು. ಓರಗಲ್ಲಿನ ಪ್ರತಾಪರುದ್ರರಾಯನು ತುರುಕರಿಗೆ ಸೋತು ಕಪ್ಪವನ್ನು ಕೊಡಲು ಒಪ್ಪಿದನು. ಅಲ್ಲಾವುದ್ದೀನನಿಗೆ ದಕ್ಷಿಣದೇಶದ ರಾಜ್ಯಗಳನ್ನು ನಿರ್ಮೂಲಮಾಡಿ ತಾನೇ ಆಕ್ರಮಿಸಬೇಕೆಂಬ ಆಶೆಯಿರಲಿಲ್ಲ. ರಾಜರು ತನ್ನ ಒಡೆ

ಗತಿ ಏನಾಯಿತೆಂಬುದು ತಿಳಿದುಬಂದಿಲ್ಲ. ಆಗ ದಕ್ಷಿಣದಲ್ಲಿ ಪ್ರಾಬಲ್ಯಕ್ಕೆ ಬರುತ್ತಿದ್ದ ಹೊಯಿಸಳರೂ, ಉತ್ತರದಲ್ಲಿದ್ದ ದೇವಗಿರಿಯ ಸೇವುಣರೂ ಚಾಲುಕ್ಯರ ಕಳೆದುಳಿದ ರಾಜ್ಯವನ್ನು ಆಕ್ರಮಿಸಲು ಪ್ರಯತ್ನಿಸಿದರು.

ಆದ್ದರಿಂದ ಈ ಉಭಯ ರಾಜ್ಯಗಳ ಮಧ್ಯಪ್ರದೇಶವಾದ ತುಂಗಭದ್ರಾ ನದಿಯ ಇಕ್ಕೆಲದ ಭೂಪ್ರದೇಶದ ವಿಷಯದಲ್ಲಿ ಸೇವುಣರಿಗೂ ಹೊಯಿಸಳರಿಗೂ ಆಗಾಗ ಕದನಗಳು ನಡೆಯುತ್ತಲೇ ಇದ್ದವು. ಸೇವುಣರು ಮೇಲಿಂದಮೇಲೆ ದೋರಸಮುದ್ರವನ್ನು ಮುತ್ತಿ ಅಲ್ಲಿಯ ಅತುಳೈಶ್ವರ್ಯವನ್ನು ಕೊಳ್ಳೆಹೊಡೆದುಕೊಂಡು ಹೋಗುತ್ತಿದ್ದರು. ಒಂದೊಂದು ವೇಳೆ ಹೊಯಿಸಳರು ಸೇವುಣರನ್ನು ಸದೆಬಡಿದು ಓಡಿಸುತ್ತಿದ್ದರು. ಹೀಗೆ ಇವರಲ್ಲಿ ಬಹಳ ಕಾಲ ಯುದ್ಧವು ಜರುಗಿತು.

ದೇವಗಿರಿಯ ಮಹದೇವನು ಮೊದಲು ಸೋತು ಪಲಾಯನ ಮಾಡಿದರೂ, ಪುನಃ ದಂಡೆತ್ತಿಬಂದು ಹೊಯಿಸಳರನ್ನು ಸೋಲಿಸಿ ಹರಿಹರ ಸಮೀಪದ ರಾಜ್ಯಗಳನ್ನು ಆಕ್ರಮಿಸಿ ಬೇತೂರಿನಲ್ಲಿ ತಳವೂರಿದನು. ಇವನ ನಂತರ ರಾಮದೇವನು ಕ್ರಿ. ಶ. ೧೨೭೬ರಲ್ಲಿ ದ್ವಾರಸಮುದ್ರದ ಮೇಲೆ ದಂಡೆತ್ತಿ ಬಂದನು. ಆಗ ಇರುಂಗೊಳನು ಸೇವುಣರಿಗೆ ಸಹಾಯ ಮಾಡಿದನು. ಆದರೂ ಸೇವುಣರು ದುಮ್ಮಿಯಿಂದ ಹಿಂದಕ್ಕೆ ಓಡಿಸಲ್ಪಟ್ಟರು. ರಾಮದೇವನು ೧೨೭೮, ೧೨೮೦, ೧೨೮೪ ಮತ್ತು ೧೨೯೦ರಲ್ಲಿ ಪುನಃ ಪುನಃ ದಂಡೆತ್ತಿ ಬಂದನು. ಸೇವುಣರಿಗೆ ಸಹಾಯವೀಯುತ್ತಿದ್ದ ಇರುಂಗೊಳನ ಬಲವಾದ ಸಿಡುಗಲ್ಲುಕೋಟೆಯನ್ನು ಮುಮ್ಮಡಿ ನರಸಿಂಹನು ೧೨೮೫ರಲ್ಲಿ ಮುತ್ತಿ, ಶತ್ರುಗಳ ಗರ್ವಭಂಗ ಮಾಡಿದನು.

೧೩೦೩, ೧೩೦೫, ೧೩೦೭ರಲ್ಲಿ ಹೊಯಿಸಳರಿಗೂ ಸೇವುಣರಿಗೂ ಯುದ್ಧ ನಡೆದವು. ಸೇವುಣರ ಕಡೆ ಕಂಪಿಲದೇವನು ಸೇನಾಧಿಪತಿ. ಈ ಕಾಳಗದಲ್ಲಿ ಹೊಯಿಸಳ ಸೇನಾಧಿಪತಿ ಸೋಮೇದ ನಾಯಕನು ಮಡಿದನು. ತುಂಗಭದ್ರಾ ನದಿಯ ದಕ್ಷಿಣ ಭಾಗವು ಈ ಕಾಳಗಗಳ ರಣಭೂಮಿಯಾಗಿತ್ತು.

ಈ ಕದನಗಳಿಂದ ಇಬ್ಬರ ಬಲವೂ ಕುಗ್ಗಿ, ದಕ್ಷಿಣ ಭಾರತದಲ್ಲಿ ಚಕ್ರಾಧಿಪತಿಗಳಾಗಬಲ್ಲ ಶಕ್ತರು ಇಲ್ಲದಂತಾಯಿತು. ಆದರೂ ಹೊಯಿಸ

ಪೀಠಿಕೆ

## ದಕ್ಷಿಣ ದೇಶದ ರಾಜ್ಯಗಳು

ಕ್ರಿ. ಶ. ೧೩ನೆಯ ಶತಮಾನದ ಅಂತ್ಯದಲ್ಲಿ ದಕ್ಷಿಣ ಭರತಖಂಡದಲ್ಲಿ ಮುಖ್ಯವಾದ ನಾಲ್ಕು ಮನೆತನದ ಹಿಂದೂ ಅರಸರು ರಾಜ್ಯಭಾರ ಮಾಡುತ್ತಿದ್ದರು. ಉತ್ತರ ಭಾಗದಲ್ಲಿ ಸೇವುಣರೆಂಬವರು ಮಹಾ ಪರಾಕ್ರಮಿಗಳಾಗಿ ದೇವಗಿರಿಯ ರಾಜಧಾನಿಯಿಂದ ರಾಜ್ಯಭಾರಮಾಡುತ್ತಿದ್ದರು. ದ್ವಾರಸಮುದ್ರದಲ್ಲಿ ಹೊಯಿಸಳರು ತೆಂಕಣ ಚಕ್ರವರ್ತಿಗಳೆಂಬ ಹೆಸರಿನಿಂದ ರಾಜಾಧಿರಾಜರಾಗಿದ್ದರು. ಇವರಿಗೆ ಕನ್ನಡನಾಡಿನ ಬಹು ಭಾಗವು ಸೇರಿತ್ತು. ಓರಗಲ್ಲಿನಿಂದ ಕಾಕತೀಯ ಮನೆತನದವರು ಪೂರ್ವ ದಿಕ್ಕಿನ ಭಾಗವನ್ನು ಆಳುತ್ತಿದ್ದರು. ಇವರಿಗೆ ತೆಲುಗರೆಂದು ಶಾಸನಗಳಲ್ಲಿ ಹೇಳಿದೆ. ಕೇವಲ ದಕ್ಷಿಣ ಭಾಗದಲ್ಲಿ ಪಾಂಡ್ಯಮನೆತನದ ರಾಜರು ಮಧುರೆಯಲ್ಲಿ ಬಹು ಕಾಲದಿಂದಲೂ ರಾಜ್ಯಭಾರಮಾಡುತ್ತಿದ್ದರು.

ಈ ನಾಲ್ಕು ವಂಶದ ಅಧಿರಾಜರುಗಳಲ್ಲದೆ ತಿರುವನಂತಪುರ, ಕಲ್ಲಿಕೋಟೆ, ಕೊಚ್ಚಿ ಮುಂತಾದೆಡೆಗಳಲ್ಲಿ ರಾಜರು ಆಳುತ್ತಿದ್ದರು. ಇವರಲ್ಲದೆ ಅನೇಕ ಸಾಮಂತಾಧಿಪತಿಗಳೂ, ಮಂಡಲೇಶ್ವರರೂ ಅಲ್ಲಲ್ಲಿ ರಾಜ್ಯಭಾರಮಾಡುತ್ತ ಮೇಲ್ಕಂಡ ಮುಖ್ಯ ಮನೆತನದವರಲ್ಲಿ ಓರ್ವರಿಗೆ ಸಾಮಂತರಾಗಿಯೂ ಅಥವಾ ಒಂದೊಂದು ವೇಳೆ ಸ್ವತಂತ್ರವಾಗಿಯೂ ರಾಜ್ಯಭಾರಮಾಡುತ್ತಿದ್ದರು.

ಕ್ರಿ. ಶ. ೧೨ನೆಯ ಶತಮಾನದ ಮಧ್ಯಭಾಗದಲ್ಲಿ ಕನ್ನಡನಾಡಿನಲ್ಲಿ ಪ್ರಮುಖರಾಗಿದ್ದ ಚಾಲುಕ್ಯರನ್ನು ಮೂಲೆಗೊತ್ತಿ ಕಲಚೂರ್ಯರು ಕೆಲವು ವರ್ಷ ಅಂದರೆ ಕ್ರಿ. ಶ. ೧೧೫೨ರಿಂದ ೧೧೮೨ರ ವರೆಗೆ ರಾಜ್ಯಭಾರ ಮಾಡಿದರು. ಆದರೆ ಇವರ ಪ್ರಾಬಲ್ಯವು ಸಡಿಲಾಗಲು ಚಾಲುಕ್ಯರ ಕೊನೆಯ ಅರಸನಾದ ಸೋಮೇಶ್ವರನು ಪುನಃ ಚಾಲುಕ್ಯ ಚಕ್ರಾಧಿಪತ್ಯದ ಸೂತ್ರವನ್ನು ಕ್ರಿ. ಶ. ೧೧೮೨ರಲ್ಲಿ ಹಿಡಿದು ಕೆಲವು ಕಾಲ ಧಾರವಾಡ ಪ್ರಾಂತ್ಯದ ಅಣ್ಣಿಗೆರೆಯಲ್ಲಿಯೂ, ಅನಂತರ ಬಳ್ಳಾರಿಯ ಉತ್ತರಕ್ಕೆ ಇರುವ ಕುರುಗೋಡಿನಲ್ಲಿಯೂ ನಿಂತು ರಾಜ್ಯಭಾರಮಾಡಿದನು. ಇವನ

ಮುತ್ತಯ್ಯ ಮುಮ್ಮಡಿಸಿಂಗನು ಆಡಿದ ಮುತ್ತಿನ ಚಂಡು ಇರುವುದಂತೆ; ಅದನ್ನು ಆಡಲು ನನಗೆ ಆಸೆಯಾಗಿದೆ; ಅದನ್ನು ಕೊಟ್ಟು ನನ್ನನ್ನು ಕಳಿಸಮ್ಮ' ಎಂದು ರಾಮನು ತಾಯಿಯನ್ನು ಪ್ರಾರ್ಥಿಸಿದನು. ಈ ಮಾತು ಕೇಳಿದ ತಕ್ಷಣವೇ ಹರಿಯಮ್ಮನಿಗೆ ಸಿಡಿಲು ಬಡಿದಂತಾಯಿತು. 'ಮಗನೆ, ಕೆಟ್ಟೆ ಕೆಟ್ಟೆನು! ಮರೆತುಹೋಗಿದ್ದ ಚಂಡಿನ ವಿಷಯವನ್ನು ನಿನಗೆ ಯಾರು ಹೇಳಿದರು? ಇದರಿಂದ ನಿನ್ನ ಜೀವಕ್ಕೆ ಹಾನಿಯುಂಟಾಗುವುದು! ಅಯ್ಯೋ! ಏನು ಮಾಡಲಿ? ಯಾವ ದೇವರನ್ನು ಮೊರೆಹೊಗಲಿ?' ಎಂದು ಹಲುಬುವ ತಾಯಿಯನ್ನು ಕಂಡು, ರಾಮನು, 'ಮುತ್ತಯ್ಯ ಮುಮ್ಮಡಿಸಿಂಗನಾಡಿದ ಚಂಡು; ಶ್ರೀಕೃಷ್ಣನಾಡಿದ ಚಂಡು; ಅಭಿಮನ್ಯುವಾಡಿದ ಚಂಡು; ಇಂತಹ ಚಂಡನ್ನು ಕೊಡಮ್ಮ' ಎಂದು ಪುನಃ ಪ್ರಾರ್ಥಿಸಿದನು. 'ಈ ಚಂಡನ್ನು ಆಡಿ ಮುಮ್ಮಡಿಸಿಂಗನು ಕೆಟ್ಟನು; ಇದರ ಆಟವು ನಿನಗೆ ಬೇಡ; ಈ ಚಂಡು ಕೈತಪ್ಪಿ ಕುಮ್ಮಟದಲ್ಲಿರುವ ಚಂದ್ರಮುಖಿಯರ ಕೈಗೆ ಸಿಕ್ಕಿಬಿದ್ದರೆ ನಿನಗೆ ಅಪಕೀರ್ತಿ ಒದಗುವುದು; ಇಂದು ಚಂಡಿನಾಟವು ಬೇಡ; ಇಂದು ನಿನ್ನ ತಂದೆಯು ಊರಿನಲ್ಲಿಲ್ಲ. ಇನ್ನೊಂದು ದಿನ ನಿನಗೆ ಅದನ್ನು ಕೊಡುವೆನು' ಎಂದು ತಾಯಿ ಸಮಾಧಾನ ಹೇಳಿದಳು. 'ಪರಸತಿಯರು ತಂಗಿ ಸಿಂಗಮ್ಮನೋಪಾದಿಯಲ್ಲಿರುವರು; ಅವರನ್ನು ಅಕ್ಕ ಮಾರಮ್ಮನಂತೆ ಕಾಣುವೆನು. ನನ್ನ ಐವರು ಸತಿಯರು ಹೊರತಾಗಿ ಉಳಿದವರನ್ನು ನನ್ನ ಸಹೋದರಿಯರ ಸಮಾನವಾಗಿ ಪರಿಗಣಿಸುತ್ತೇನೆ. ಆದ್ದರಿಂದ ಸಂದೇಹ ಪಡದೆ ಚಂಡನ್ನು ಕೊಡಮ್ಮ' ಎಂದು ವಿನಯದಿಂದ ಬಿನ್ನವಿಸಿಕೊಂಡನು. 'ಮಗು ರಾಮು, ಖಂಡಿತವಾಗಿಯೂ ಇಂದು ಚಂಡನ್ನಾಡಬೇಡವಯ್ಯ; ನಿನ್ನನ್ನು ಕಂಡ ಪರಸತಿಯರು ಮನೆಯ ಕೆಲಸವನ್ನು ಬಿಟ್ಟುಬಿಡುವರು. ತಮ್ಮ ಮಕ್ಕಳಿಗೆ ಮೊಲೆಹಾಲನ್ನು ಉಣಿಸರು. ತಮ್ಮ ಪುರುಷರನ್ನು ಸೇರರು' ಎಂದು ಮಗನಿಗೆ ಮತ್ತೊಮ್ಮೆ ಹೇಳಿದಳು. 'ಪರಸತಿಯರು ನನ್ನ ಹಿರಿಯ ಅಕ್ಕ ಮಾರಮ್ಮನ ಸಮಾನರು; ಅಲ್ಲದೆ ಗುರುವಿನ ಸತಿಯರ ಸಮಾನರು. ಆದ್ದರಿಂದ ಆ ಪ್ರೀತಿಯ ಚಂಡನ್ನು ಕೊಡಮ್ಮಾ' ಎಂದು ಮತ್ತೂ ಕೇಳಿದನು. ಹರಿಯಮ್ಮನು ರಾಮನ

ಸಂಗಡ ಬಂದಿದ್ದ ಹಿರಿಯರನ್ನು ಕುರಿತು ರಾಮನಿಗೆ ತಕ್ಕ ಬುದ್ಧಿಯನ್ನು ಹೇಳುವಂತೆ ತಿಳಿಸಿದಳು. 'ನಾವು ರಾಮನಿಗೆ ಪರಿಪರಿಯಾಗಿ ಹೇಳಿದೆವು; ಆದರೆ ಕೇಳಲಿಲ್ಲ. ಅವನು ನಮ್ಮ ದೊರೆ; ಹೆಚ್ಚಾಗಿ ಹೇಳಲು ಅಂಜುವೆವು' ಎಂದು ಅವರು ನುಡಿದರು.

'ಕೃತಯುಗದಲ್ಲಿ ಮಾಯಾಗನೆಯಿಂದ ಕಾರ್ತವೀರ್ಯನು ಹತನಾದನು; ಯತಿಯ ಶಾಪದಿಂದ ಪತಿಯ ಶಿರವು ಹೋಯಿತು; ಮಕ್ಕಳ ಬಿಲ್ಲನ್ನು ಮುರಿಯಿಸಿತು; ದ್ರೌಪದಿಯು ವನವಾಸವನ್ನು ಹೊಂದಿದಳು; ಕೀಚಕನು ಕೊಲ್ಲಲ್ಪಟ್ಟನು; ಅದೇ ವಿಧಿಯು ಈಗ ಚಂಡಾಗಿ ಮುಮ್ಮಡಿ ಸಿಂಗನನ್ನು ಸೇರಿತು. ಇದು ಆಟವಾಡುವ ಚಂಡಲ್ಲ; ಇಟ್ಟು ಪೂಜಿಸುವ ಚಂಡು. ಆದ್ದರಿಂದ ಈ ಚಂಡಾಟವು ಬೇಡ' ಎಂದು ಪರಿಪರಿಯಾಗಿ ಹರಿಯಾಲದೇವಿಯು ಹೇಳಲು, ಅದನ್ನು ಕೇಳದೆ ರಾಮನು 'ವಿಧಿಯಿಂದ ಎಲ್ಲರೂ ಕೆಟ್ಟರು; ಶನಿಯು ಎಲ್ಲಿದ್ದರೂ ಬೆನ್ನು ಬಿಡುವುದಿಲ್ಲ; ಚಂಡನ್ನು ಕೊಟ್ಟಹೊರತು ಹೋಗುವುದಿಲ್ಲ' ಎಂದು ಹಟಮಾಡಿದನು. 'ಓರಂಗಲ್ಲು ಪ್ರತಾಪರುದ್ರ, ಹುಳಿಯಾರು ಮಾಗೊಂಡ, ಬಲ್ಲಾಳರಾಯ ಮೊದಲಾದವರನ್ನು ಗೆದ್ದೆಯಾದುದರಿಂದ ಅವರು ನಿನ್ನ ಮೇಲೆ ರಾಜಕಾರ್ಯ ನಡೆಸಲು ಹೊಂಚುತ್ತಿರುವರು. ಮರೆಹೊಕ್ಕ ಬಾದೂರನನ್ನು ಕೊಂಡು ಹೋಗದ ಹೊರತು ಆ ರಾಜಕಾರ್ಯವು ತಪ್ಪದು. ಚಂಡಾಟವಾಡಿ ಕೈಕಾಲು ನೊಂದರೆ ಅವರು ದಂಡೆತ್ತಿ ಬಾರದೆ ಇರುವರೆ? ಆದ್ದರಿಂದ ಚಂಡಾಟವು ಬೇಡ' ಎಂದು ಬುದ್ಧಿವಾದ ಹೇಳಲು, ರಾಮನ ಮುದ್ದು ಮುಖವು ಬಾಡಿ ಕಣ್ಣೀರು ತೊಟ್ಟಿಕ್ಕಿತು. ಅದನ್ನು ಕಂಡು ಹರಿಯಮ್ಮನು ಮಗನನ್ನು ಸಂತೈಸಿದಳು. 'ನಿನ್ನ ಸೊಸೆಯರು ಐವರು ಹೊರತಾಗಿ ಉಳಿದವರು ನಿನ್ನ ಸಮಾನ'ರೆಂದು ತಾಯಿಗೆ ಹೇಳಿ ಪನ್ನಗಧರನ ಆಣೆಮಾಡಲು ಹರಿಯಾಲದೇವಿಯು 'ನಿನ್ನ ಇಷ್ಟ' ಎಂದು ಹೇಳಿ ಕುರಿಕೋಳಿಗಳನ್ನು ಬಲಿಕೊಟ್ಟು ಚಂಡನ್ನು ತೆಗೆಯಿಸಿಕೊಂಡು ಹೋಗುವಂತೆ ತಿಳಿಸಿದಳು.

ಮುತ್ತಿನ ಚಂಡನ್ನು ತಾಯಿಯ ಅಪ್ಪಣೆಯಿಂದ ಪಡೆದು, ಅಂದಣವನ್ನು ಏರಿ ರಾಮನು ಪಟ್ಟಣದ ಬೀದಿಯಲ್ಲಿ ಬರುವಾಗ ಭಟ್ಟರು ಉಗ್ಗಡಿ

ಸುತ್ತಿರಲು, ಈಶ್ವರನನ್ನು ಧ್ಯಾನಮಾಡುತ್ತಿದ್ದನು. ಬೀದಿಯಲ್ಲಿ ಬರುತ್ತಿದ್ದ ಮನ್ಮಥಸಮರೂಪನಾದ ರಾಮುನನ್ನು ನೋಡಬೇಕೆಂದು ಹೆಂಗಸರು ಮಕ್ಕಳನ್ನೆತ್ತಿಕೊಂಡು ಬೀದಿಯ ಇಕ್ಕೆಲಗಳಲ್ಲಿಯೂ ನಿಂತಿದ್ದರು. ಅವರನ್ನು ನೋಡಿ ಹೆತ್ತ ತಾಯನ್ನು ನೋಡಿ ಸಂತೋಷಪಡುವಂತೆ ರಾಮನು ಮನಸ್ಸಿನಲ್ಲಿಯೇ ಹಿಗ್ಗಿದನು. ಮಂಡಲೇಶ್ವರನಾದ ಆವನು ಈ ರೀತಿ ಸಂತೋಷದಿಂದ ಚಂಡನ್ನು ತೆಗೆದುಕೊಂಡು ಚಂಡವಿಕ್ರಮ ಕಾಟಣ್ಣನು ಇದ್ದೆಡೆಗೆ ಬಂದು ಚಂಡನ್ನೊಪ್ಪಿಸಿದನು. ಅಲ್ಲಿಗೆ ಎಕ್ಕಟಿಗರೆಲ್ಲ ಬಂದು ಸೇರಿದರು. ಬೊಮ್ಮ ಕುಂಬಾರ, ಸೋಮ, ವಿರೂಪನೆಲಗೇತಿ ಕಾಮ, ಭಟ್ಟರ ಭೀಮ, ಒಕ್ಕಲಿಗರ ಮುದ್ದ, ಅಕ್ಕಸಾಲೆಯ ಚಿಕ್ಕ, ಮೀನಿಗರ ಬೊಮ್ಮ, ಎಮ್ಮೆಯ ಚಿತ್ತ, ಎರಬೋತುಗ ಗಂಗ, ಬೂಟಗ ಬೊಮ್ಮ, ಮಿಡಿಗೇಸಿ ಸಲ್ಲ, ಆವಳಿ ಹನುಮ ಮುಂತಾದ ಕಟ್ಟಾಳುಗಳು ಬಂದು ಸೇರಿದರು. ಅರಸುಮಕ್ಕಳು, ಹಂಪರಾಜ, ಕಂಪರಾಜರೂ, ಬಿರುದಿನ ಮನ್ನೆಯರೂ, ಮಾಸ್ತಲ ಮಾಚನೂ, ಮುಂಡಗುಡ್ಡ ಓಬನೂ, ಕೋಟೆಗಾರ ದೇವನೂ, ಬುಕ್ಕನೂ, ಪಾಲನೂ, ಹೊಳಕೆಯ ಕೆಂಚನು, ರಕ್ಕಸ ಚಿನುಮಾರನೂ ಮುಂತಾದ ಕತ್ತಿಯ ವೀರರು ಬಂದು ಸೇರಿದರು. ಬಾದೂರಖಾನ, ಬಸವರಾಜಯ್ಯ, ಮಣಿಯದ ಮಲ್ಲ, ಹಳದಿಯ ತಿಪ್ಪ, ಪಾರಿಯ ಮಲ್ಲ ಮುಂತಾದವರನ್ನೂ ರಾಮನು ಚಂಡಾಟಕ್ಕೆ ಕರೆಸಿದನು. ಒಂದು ಕಡೆ ಕಾಟಣ್ಣನೂ, ಇನ್ನೊಂದು ಕಡೆ ರಾಮನೂ ಹಿರಿಯ ಗಡಿಗಳಾದರು. ಹೊನ್ನುವೊಳೆಯ ಕರಾರಿ ಎಕ್ಕಟಿಗರೂ, ತೆಲುಗು ಮಾನ್ಯೆಯರ ಮಕ್ಕಳೂ, ಊರಿನಲ್ಲಿದ್ದ ರಾಜಪುತ್ರರೂ ಮುಂತಾದವರನ್ನು ಕಾಟಣ್ಣನಿಗೆ ಹಂಚಿಕೊಟ್ಟನು. ಉಡುಗರೆ ತೆಗೆದುಕೊಳ್ಳುವ ಎಕ್ಕಟಿಗರನ್ನು ತನ್ನ ಕಡೆ ತೆಗೆದುಕೊಂಡನು. ಹೀಗೆ ಭಿನ್ನವಿಲ್ಲದೆ ಉಭಯ ಗಡಿಗಳನ್ನು ಸಮನಾಗಿ ಹಂಚಿಕೊಂಡು, ರಾಮನ ಚಿಕ್ಕಮ್ಮ ರತ್ನಾಜಿಯ ಹೊನ್ನಉಪ್ಪರಿಗೆಯ ಅರಮನೆ ಬಯಲೇ ಆಟವಾಡಲು ಅನುಕೂಲವೆಂದು ನಿರ್ಧರಿಸಿದರು. ಚಿನ್ನದ ಏಳು ಲಗ್ಗೆ, ಬೆಳ್ಳಿಯ ಏಳು ಲಗ್ಗೆ ಹೂಡಿ ಆಟವನ್ನಾಡಲು ಅನುವಾದರು.

ರಾಮನಾಡುವ ಚಂಡಾಟವನ್ನು ನೋಡಲು ಆ ಬಯಲಿಗೆ ಊರಿನ

ಬೆಲೆವೆಣ್ಣುಗಳೆಲ್ಲ ಮೂಲೋಕದ ವಿಟರನ್ನು ಮೋಹಗೊಳಿಸುವಂತೆ ಸಿಂಗರಿಸಿಕೊಂಡು ಬಂದು ಕುಳಿತರು. ಪಂಥಮಾಡುವ ವಿಟರ ಎದೆಗೆ ಲಾಳಸರದ ಬೊಂಬೆಯಂತೆ ಕಳಕಳಿಸುವ ಕಾಂತಿಯ ಹಂಪಾಜಿಯೂ, ಸುರತದ ಸುಗ್ಗಿಯನ್ನಿತ್ತು ಸರಿರಾತ್ರಿಗೆ ಹಿಡಿಹೊನ್ನು ತೆಗೆದುಕೊಳ್ಳುವ ಹೊಳೆಹೊನ್ನೂರಿನ ರಾಮಾಜಿಯೂ, ಮಂದಹಾಸ ಮುಖಕಾಂತಿಯ ಗುರುಮಕೊಂಡದ ಸೋಮಿಯೂ, ಹೊಲಬು ತಪ್ಪಿದ ಹುಲ್ಲೆಗಳಂತೆ ಹಂಬಲಿಸುತ್ತ ಚಂಡಾಟ ನೋಡಬಂದರು. ಇಕ್ಕೇರಿಯ ದುರ್ಗಿಯು ಬಾಲ ವೆಣ್ಣುಗಳ ಕೈಪಿಡಿದು ಬಾಳೆಯ ಸುಳಿಯಂತೆ ಬಳಕುತ್ತ ಬಂದಳು. ಹೊಳೆವ ಹೊಂಬಣ್ಣದ ಸೀರೆಯನ್ನುಟ್ಟು ಪಾಳೆಯದ ಪಾಪಾಜಿಯೂ, ಹಳೆಯಬೀದಿಯ ಹಂಪಾಜಿಯೂ, ಬಾಣಾವರದ ಭದ್ರಿಯೂ, ಪಟ್ಟಾವಳಿಯ ಸೀರೆಯನ್ನುಟ್ಟು ಆಭರಣ ತೊಟ್ಟು ಶೃಂಗಾರ ಮಾಡಿಕೊಂಡ ಕೊಟ್ಟೂರು ಕಾಮಾಜಿಯೂ ಬಂದರು. ಬಾದಾಮಿಯ ಬಸವಿಯೂ,ಗಂಧ ಕಸ್ತೂರಿತಿಲಕವನ್ನಿಟ್ಟ ಕುಂದಿರ್ಪಿಯ ಕೊಂಡಾಜಿಯೂ, ಮಲ್ಲಿಗೆ, ಜಾಜಿ, ಸಂಪಿಗೆ ಹೂಮುಡಿದ ಬೇಲೂರ ಬಿಸಕಾಜಿಯೂ, ಆದವಾನಿಯ ನಾಗಾಜಿಯೂ ರಾಮನನ್ನು ನೋಡಲು ಹೊನ್ನಿನ ಹಾವುಗೆ ಮೆಟ್ಟಿಕೊಂಡು ಬರುತ್ತಿರುವ ಚೆನ್ನೆಯರೊಡನೆ ಕುಂಭಕೋಣದ ಈರಿಯೂ ಬಂದಳು. ಚೆನ್ನಪಟ್ಟಣದ ಚೆನ್ನಾಜಿಯು ಸಾಸುವೆಬಣ್ಣದ ಸೀರೆಯುಟ್ಟು ವಿಟರನ್ನು ಮೋಸಗೊಳಿಸುತ್ತಲೂ, ಚಂದ್ರಗಿರಿಯ ಚೆನ್ನೆಯೂ ಚಂದ್ರಗಾವಿಸೀರೆಯನ್ನುಟ್ಟು ತನ್ನ ಬಿನಪು ಬಿಯ್ಯಾರಗಳಿಂದ ವಿಟರ ಮನಸ್ಸನ್ನು ಕಾಲ್ಗೆಡಿಸುತ್ತಲೂ, ಹಸರುಕುಪ್ಪುಸ ತೊಟ್ಟು ಕಸ್ತೂರಿ ತಿಲಕವಿಟ್ಟು, ಹೊಸಪೇಟೆಯ ಜಂಬಲಿಂಗಿಯೂ, ಬಂಗಾರ ಬಣ್ಣದ ಸೀರೆಯುಟ್ಟು ಮುಖದಲ್ಲಿ ಹೊಸಮುತ್ತಿನ ಬಟ್ಟನಿಟ್ಟು ಮದನನ ಮಸೆದ ಅಂಬಿನ ಮೊನೆಯಂತೆ ರಾಮನ ಚಂಡಾಟವನ್ನು ನೋಡಲು ಬಂದರು. ಈ ರೀತಿಯಲ್ಲಿ ನಾನಾ ವೇಷಭೂಷಣಗಳಿಂದ ಅಲಂಕೃತರಾದ ಸೂಳೆಯರು, ಯಾವನೋಂಪಿಯ ನೋಂತು ರಾಮನನ್ನು ಅವನ ತಾಯಿಯು ಪಡೆದಳೋ ಎಂದು ಕೊಂಡಾಡುತ್ತ ತಮ್ಮತಮ್ಮಲ್ಲಿಯೇ ಮಾತನಾಡುತ್ತ ಚಂಡಾಟವನ್ನು ನೋಡುತ್ತಿದ್ದರು.

ಅವನು ಎಂದೆಂದಿಗೂ ನಿನ್ನ ಮಗನಲ್ಲ; ದ್ರೋಹಿ; ಅವನನ್ನು ಕಡಿದು ಅವನ ತಲೆಯನ್ನು ತಂದು ನನಗೆ ತೋರಿಸದಿದ್ದರೆ, ನಿನ್ನ ಮುಂದೆ ವಿಷ ಪಾನಮಾಡಿ ಸಾಯುವೆನು' ಎನಲು, ಕಂಪಿಲರಾಯನು ಮನನೊಂದು ರೇಗಿ ಭಂಡಾರಿ ಬುಕ್ಕಣ್ಣನೊಡನೆ ಬೈಚಪ್ಪನಿಗೆ ಹೇಳಿ ಕಳುಹಿಸಿದನು.

ಬುಕ್ಕಣ್ಣನು ಒಂದು ಬೈಚಪ್ಪನಿಗೆ ರಾಯನಪ್ಪಣೆಯನ್ನು ತಿಳಿಸಲು, ಮಂತ್ರಿಯು ರಾಯನರಮನೆಗೆ ಹೋಗಿ ಪ್ರಭುವನ್ನು ಕಾಣಿಸಿಕೊಂಡನು. ಕಂಪಿಲರಾಯನು ತನ್ನ ಹಿರಿಯ ಹೆಂಡತಿಯ ಮಗ ರಾಮನು ಪಾಪಕ್ಕೆ ಅಂಜದೆ ಮಾಡಿದ ಹಗರಣದ ವಿವರವನ್ನು ತಿಳಿಸಿದನು. ಅದಕ್ಕೆ ಬೈಚಪ್ಪನು 'ಕುಮಾರರಾಮನು ಇಂತಹ ಕುಹಕ ವಿದ್ಯೆಯನ್ನು ಮನಸ್ಸಿನಲ್ಲಿಯೂ ಎಣಿಸಲಾರನು' ಎಂದು ಒತ್ತಿ ಹೇಳಲು, ರಾಯನು 'ನೀನು ನನ್ನ ತಂದೆಯ ಕಾಲದ ಹಿರಿಯನು; ನೀನೇ ಅಂತಃಪುರಕ್ಕೆ ಒಂದು ಅಲ್ಲಿ ನಡೆದಿರುವ ವಿದ್ಯಮಾನವನ್ನು ಪರಿಶೀಲಿಸಿ ನಿಜಸ್ಥಿತಿಯನ್ನು ತಿಳಿದುಕೊ' ಎಂದು ಹೇಳಿ 'ರಾಮನ ತಲೆಯನ್ನು ನೀನು ತರದೇ ಹೋದರೆ ನೀನೇ ಈ ಅಕಾರ್ಯವನ್ನು ರಾಮನಿಂದ ಮಾಡಿಸಿರುವಂತೆ ಭಾವಿಸುವೆನು' ಎಂದಾಡಿದ ನುಡಿಯನ್ನು ಕೇಳಿ, ಬೈಚಪ್ಪನು ಮನಸ್ಸಿನಲ್ಲಿ ನೊಂದುಕೊಂಡನು. 'ಒಡೆಯನ ಮಾತನ್ನು ನಾನು ಮೀರುವವನಲ್ಲ. ಆದರೆ ಹೊಸಮಲೆ ಮತ್ತು ಕುಮ್ಮಟದುರ್ಗವನ್ನು ಹಾಳುಮಾಡದಿರಲು ರಾಮನನ್ನು ಉಳುಹಬೇಕಲ್ಲವೇ' ಎಂದು ಸಲಹೆಯನ್ನೀಯಲು, ಕಂಪಿಲರಾಯನು ಅದಕ್ಕೆ ಮನಗೊಡದೆ, ರಾಮನನ್ನು ಕೊಲ್ಲಲೇಬೇಕು ನನ್ನ ಮೇಲಾಣೆ ಎಂದು ಕೋಪದಿಂದ ನುಡಿದ ಮಾತನ್ನು ಲಾಲಿಸಿ, ಮಂತ್ರಿಯು ರಾಮನನ್ನು ಉಪಾಯದಿಂದ ಹಿಡಿಯಬೇಕೆಂದು ತನ್ನರಮನೆಗೆ ಹೋದನು.

ಪ್ರಧಾನಿಗಳರಸನಾದ ಬೈಚಪ್ಪನು ತನ್ನರಮನೆಯಲ್ಲಿ ಕುಳಿತು ದೀರ್ಘಾಲೋಚನೆ ಮಾಡಿದನು. ಚೆಲುವ ಚೆನ್ನಿಗರಾಮನಳಿದರೆ ಆ ಸುದ್ದಿ ದಿಲ್ಲಿಗೆ ತಲುಪುವದು; ಕೂಡಲೇ ತುರುಕರ ದಂಡು ಮಾರ್ಬಲ ಸಹಿತ ಬಂದು ಕುಮ್ಮಟದುರ್ಗವನ್ನು ಮುತ್ತಿದರೆ ರಾಮನಲ್ಲದೆ ಅವರೊಡನೆ ಕಾದುವ ವೀರರು ಯಾರೂ ಇಲ್ಲ. ಆದ್ದರಿಂದ ಕಟ್ಟಾಳು ರಾಮನನ್ನು ಬಚ್ಚಿಟ್ಟು ಸಲಹುವೆನು; ಕುಮ್ಮಟದುರ್ಗವನ್ನುಳಿಸುವೆನು. ಕಂಪಿಲ

ರಾಯನಿಗೆ ವಿಪತ್ತು ಬಂದಾಗಲೇ ರಾಮನನ್ನು ತೋರಿಸುವೆನು ಎಂದು ಉಪಾಯವನ್ನು ಯೋಚಿಸಿದನು.

ಬೈಚಪ್ಪ ಮಂತ್ರಿಯು ಆಲೋಚನೆಯನ್ನು ಮಾಡಿ ಕಂಪಿಲರಾಯನ ಬಳಿಗೆ ಬಂದು ಹೆಂಗಸರ ಮಾತಿನಿಂದ ಕುಮಾರರಾಮನನ್ನು ಕೊಲ್ಲುವುದು ಉಚಿತವಲ್ಲನೆಂದು ತಿಳಿಸಿದನು. ಮಂತ್ರಿಯ ಮಾತು ರಾಯನಿಗೆ ರುಚಿಸಲಿಲ್ಲ. ರಾಮನನ್ನು ಕೊಲ್ಲಬೇಕೆಂದು ಮಂತ್ರಿಗೆ ವೀಳೆಯವನ್ನು ಕೊಟ್ಟು ಕೊಲ್ಲದಿದ್ದರೆ ಮಂತ್ರಿಯನ್ನೇ ಕಲ್ಲುಗಾಣಕ್ಕೆ ಹಾಕಿಸುವುದಾಗಿ ತಿಳಿಸಿ ಗುಪ್ತವಾದ ಗುರುತನ್ನು ಮಂತ್ರಿಗೆ ಕೊಟ್ಟು ಕಳುಹಿಸಿದನು.

ಮಂತ್ರಿಯು ಏಕಾಂಗವೀರ ರಾಮನ ಮನೆಗೆ ಬಂದು ಏಕಾಂತದಲ್ಲಿ ಬಿನ್ನೈಸಿದನು. ರತ್ನಾಜಿಯಿಂದ ನಿನಗೆ ಅಪಕೀರ್ತಿ ಬಂದಿರುವುದು. ನಿನ್ನನ್ನು ಕೊಲ್ಲಬೇಕೆಂದೂ, ಕೊಲ್ಲದಿದ್ದರೆ ತನ್ನನ್ನು ಕಲ್ಲುಗಾಣಕ್ಕೆ ಹಾಕಿಸುವೆನೆಂದೂ ರಾಯನು ಮಾಡಿದ ಆಜ್ಞೆಯ ವಿವರವನ್ನು ತಿಳಿಸಿದನು. ವಿವರವನ್ನು ರಾಮನು ಕೇಳಿ ನಡೆದ ವೃತ್ತಾಂತವನ್ನು ಮಂತ್ರಿಗೆ ಅರುಹಿದನು. 'ಮಂತ್ರಿ ಬೈಚಪ್ಪನಾಯಕರೇ, ನಾನು ಪರಿವಾರ ಸಹಿತ ಮುತ್ತಿನ ಚಂಡನಾಡುತ್ತಿರುವಾಗ ಚಂಡು ಚಿಕ್ಕಮ್ಮನ ಮನೆಯಲ್ಲಿ ಬಿದ್ದಿತು. ಅದನ್ನು ತರಲು ಹೋದಾಗ ಚಿಕ್ಕಮ್ಮನು ನನ್ನ ಮುಂದಲೆಯನ್ನು ಹಿಡಿದು, ತೆಕ್ಕೆಯನ್ನು ಹಾಕಿಕೊಂಡು ದುಷ್ಕಾರ್ಯಕ್ಕೆ ನನ್ನನ್ನು ಬಲಾತ್ಕರಿಸಿದಳು. ಮುಕ್ಕಣ್ಣ ಜಟ್ಟಂಗಿ ರಾಮೇಶ್ವರನಾಣೆ ನಾನು ಚಿಕ್ಕಮ್ಮನಿಗೆ ಎರಡನ್ನು ಎಣಿಸಿದವನಲ್ಲ. ನಿನಗೆ ಅನುಮಾನ ಬೇಡ! ಹಿರಿಯರ ಮಾತು ಪ್ರಾಧಾನ್ಯವಾದುದು, ಅದೇ ಸಿದ್ಧಾಂತ. ನಾನು ತಪ್ಪು ಮಾಡಿದವನೆಂದು ನಿನಗೆ ತೋರಿದರೆ ನನ್ನನ್ನು ಕೊಲ್ಲುವುದು ನಿನಗೆ ಯುಕ್ತ' ಎಂದು ಹೇಳಿ ಕಠಾರಿಯನ್ನು ತಂದು ಮಂತ್ರಿಗೆ ಒಪ್ಪಿಸಿದನು. 'ತಪ್ಪು ಇದ್ದರೆ ನಿನ್ನನ್ನು ಖಂಡಿತವಾಗಿಯೂ ಕೊಲ್ಲುವೆನು; ನೀನು ಪರಸತಿಗೆ ಒಪ್ಪುವವನಲ್ಲ ಎಂಬ ದೃಢವಾದ ನಂಬಿಕೆ ನನಗೆ ಇದೆ' ಎಂದು ಹೇಳಿ, ರಾಯನ ಮನೆತನಕ್ಕೆ ಎಂದಿಗೂ ಅಪಾಯ ಉಂಟಾಗಲಾರದೆಂದು ತಿಳಿಸಿ, ರಾಮನನ್ನು ಅಪ್ಪಿಕೊಂಡನು.

ದೇವ ಜಟ್ಟಂಗಿ ರಾಮನ ಗುಡಿಯ ಬಳಿಯಲ್ಲಿಯೇ ರಾಮನನ್ನು

ಬಚ್ಚಿಡುವುದಾಗಿ ನಿರ್ಧರಿಸಿದನು. ಉಪ್ಪಾರ ಶಿಂಗಯ್ಯನನ್ನು ಕರೆಸಿ, ರಾತ್ರಿಯಲ್ಲಿಯೇ ಒಬ್ಬರಿಗೂ ತಿಳಿಯದಂತೆ ನೆಲಮಾಳಿಗೆಯ ಮನೆಯನ್ನು ನಿರ್ಮಿಸುವಂತೆ ನಿಯಮಿಸಿದನು. ಶಿಂಗಯ್ಯನು ತಕ್ಷಣವೇ ಮುನ್ನೂರು ಹಾರೆ ಗುದ್ದಲಿ ಪಲಿಕೆಗಳೊಡನೆ ಹೋಗಿ ನೆಲಮಾಳಿಗೆಯನ್ನು ನಿರ್ಮಿಸಿದನು. ಬೈಚಪ್ಪನು ಆ ಗುಪ್ತವಾದ ಮನೆಯನ್ನು ನೋಡಿ ತೃಪ್ತನಾಗಿ ಉಡುಗೊರೆಯನ್ನು ಕೊಟ್ಟು ಕಳುಹಿಸಿ, ಅದರಲ್ಲಿ ಏಳು ತಿಂಗಳಿಗೆ ಸಾಕಾಗುವಷ್ಟು ಅಕ್ಕಿ, ಕಡಲೆ, ಗೋದಿ, ಬೇಳೆ, ಬೆಲ್ಲ, ದೀಪದೆಣ್ಣೆ, ಉಪ್ಪು, ಮೆಣಸು, ಅಡಿಕೆ, ಎಲೆ, ಸುಣ್ಣ ಮೊದಲಾದ ಸಾಮಾನುಗಳನ್ನು ಅಲ್ಲಿ ತಂದಿರಿಸಿದನು. ದೇವಿಶೆಟ್ಟಿಯ ಲಿಂಗ, ಕೊಳ್ಳಿಯ ನಾಗಣ್ಣ, ಭಾವಸಂಗಮ, ಗುಜ್ಜಲ, ಓಬ, ಕೋಟೆಗಾರ ದೇವ, ಮಾದಿಗ ಹಂಪ, ಪವಳಕಾರ ಹನುಮ, ಲಿಂಗ, ಕಾಟಣ್ಣ, ಮಲ್ಲನಾಯಕ, ಮುಮ್ಮಡಿಸಿಂಗ ಮೊದಲಾದ ಹನ್ನೆರಡು ಮನ್ನೆಯರನ್ನು ಅಲ್ಲಿ ಮಡಗಿದನು. ಈ ರೀತಿ ರಾಮನನ್ನು ಬಚ್ಚಿಟ್ಟು ಬೈಚಪ್ಪನು ಮನಸ್ಸಿನಲ್ಲಿಯೇ ನೊಂದು ಹಿಂತಿರುಗಿ ಕಳ್ಳ ಬಂಟ ರಾಮನಿದ್ದ ಸ್ಥಳಕ್ಕೆ ಬಂದನು.

ಕಳ್ಳ ಬಂಟ ರಾಮನನ್ನು ಕುರಿತು 'ನಿನ್ನನ್ನು ರಾಜನ ದೃಷ್ಟಿಗೆ ಬೀಳದಂತೆ ಅನೇಕ ದಿವಸಗಳಿಂದ ಕಾಪಾಡಿದೆನು. ಇಂದು ನನ್ನ ಆಳಿಗಾಲವು ಬಂದಿದೆ. ಕಂಪಿಲರಾಯನು ನನ್ನನ್ನು ಉಳಿಸುವುದಿಲ್ಲ. ರಾಯನು ಬೇಟೆಯ ಕಾಲದಲ್ಲಿ ನನ್ನ ಮೇಲೆ ಕೋಪವನ್ನು ಮಾಡಿದನು' ಎಂದು ಉಪಾಯದಿಂದ ಬೈಚಪ್ಪನು ನುಡಿಯಲು ಅದಕ್ಕೆ ತನ್ನ ಪ್ರಾಣವನ್ನಾದರೂ ಕೊಡಲು ಸಿದ್ಧವಾಗಿರುವುದಾಗಿಯೂ, ನಿಜಸಂಗತಿಯನ್ನು ತಿಳಿಸಬೇಕು ಎಂದೂ ಕಳ್ಳಬಂಟ ರಾಮನು ಪ್ರಾರ್ಥಿಸಿದನು. ಮನ್ಮಥರೂಪನಾದ ರಾಮನನ್ನು ಕೊಲ್ಲಲಾರದೆ ನಿನ್ನೆಡೆಗೆ ಬಂದಿರುವೆನು ಎನಲು, ಹಿಂದೆ ನನ್ನ ಪ್ರಾಣವನ್ನು ನೀನು ಕಾಪಾಡಿದೆ ಇಂದು ನನ್ನ ಪ್ರಾಣವನ್ನು ಕೊಡಲು ಸಿದ್ಧನಿರುವೆನು' ಎಂದು ಕಳ್ಳ ರಾಮನು ನುಡಿಯುತ್ತ ಮೀಸೆಯನ್ನು ಒತ್ತಿ, ಭವಾರಿಯನ್ನು ತಿದ್ದಿ, ಕಸ್ತೂರಿತಿಲಕವನ್ನಿಟ್ಟು, ಮುತ್ತಿನ ಖಡುಕನಿಟ್ಟು, ವೀರ ಜಡೆಯನ್ನು ಹೆಣೆದುಕೊಂಡು ಬರಲು ಪ್ರತ್ಯಕ್ಷ ಕುಮಾರ ರಾಮನೆಂಬಂತೆ ತೋರಿದನು. ಕಳ್ಳಬಂಟ ರಾಮನು ತನ್ನಿಷ್ಟ ದೈವವನ್ನು

ನೆನೆದು ಮರಣಕ್ಕೆ ಸಿದ್ಧನಾದನು. ಸುರಗಿಯಿಂದ ತಲೆಯನ್ನು ಕಡಿಯಲು ತಲೆಯು ಕೆಳಗೆ ಬಿದ್ದಿತು. ಪ್ರಾಣದಾಸೆ ತೊರೆದು ಸಿದ್ಧರಿದ್ದ ಹನ್ನೆರಡು ಮಂದಿಯ ತಲೆಯನ್ನು ಕಡಿಸಿ ಎಲ್ಲ ತಲೆಗಳನ್ನೂ ತರಿಸಿ ಕಂಪಿಲರಾಯನಿಗೆ ಗುರುತಾಗಿ ತೋರಿಸಿದನು. ರಾಯನು ತಲೆಗಳನ್ನು ನೋಡಿ ಮಡಿದ ಹನ್ನೆರಡು ಜನರನ್ನು ಗುರ್ತಿಸಿದನು. ಅನಂತರ ಪ್ರಧಾನಿಯು ಪ್ರತಿರಾಮನ ತಲೆಯನ್ನು ತೋರಿಸಿದನು. ಆದರೆ ಕಾಟ, ಲಿಂಗನೇ ಮೊದಲಾದವರ ತಲೆಯನ್ನು ಕಡಿಯಲು ಕಾರಣವೇನೆಂದು ರಾಯನು ಕೇಳಲು, ರಾಮನನ್ನು ಕೊಂದು ಹಿಂತಿರುಗುವಾಗ ಅವರು ತನ್ನನ್ನು ಹಿಂದಟ್ಟಿ ಬರಲು ಅವರ ತಲೆಗಳನ್ನೂ ಕಡಿಸಿದೆನೆಂದು ಉತ್ತರವಿತ್ತನು. ಅನಂತರ ರಾಯನು ರತ್ನಾಜಿಯನ್ನು ಕರೆಸಿದನು. ನಾಸಿದ ತಲೆ, ಮಾಸಿದ ಸೀರೆ, ಕೆದರಿದ ಮುಡಿಯಿಂದ ಭಾಷೆಗೆ ತಪ್ಪಿದ ರಾಯನೆನ್ನುತ್ತ, ಅಲ್ಲಲ್ಲಿ ನಿಲ್ಲುತ್ತ, ಅಲ್ಲಲ್ಲಿ ನೋಡುತ್ತ, ಮೆಲ್ಲಮೆಲ್ಲನೆ ಅಡಿಯಿಡುತ್ತ, ಗಲ್ಲದ ಮೇಲೆ ಕೈಯಿಟ್ಟು ರತ್ನಾಜಿಯು ಅಲ್ಲಿಗೆ ಬಂದಳು. ರಾಮನ ತಲೆಯನ್ನು ದೃಷ್ಟಿಸಿ ನೋಡಿ ಪಡಸಾಲೆಗೆ ಹಿಂತಿರುಗಿದಳು. ರಾಮನು ಧರಿಸುತ್ತಿದ್ದ ಕಡಕು ಮತ್ತು ಕಂಠಮಾಲೆಯನ್ನು ರಾಯನಿಗೆ ಯಾರಿಗೂ ತಿಳಿಯದಂತೆ ಮಂತ್ರಿಯು ತೋರಿಸಲು, ಕಂಪಿಲರಾಯನು ರಾಮನ ಕೊಲೆಯು ನಿಜವೆಂದು ನಂಬಿ ಬೆರಗಾಗಿ, 'ಮಂತ್ರಿವರ್ಯಾ! ಈ ರೀತಿ ಮುಂದಾಲೋಚನೆ ಇಲ್ಲದೆ ಮಾಡಬಹುದೇ? ನನ್ನ ಮೇಲಿನ ಹಗೆಯನ್ನು ತೀರಿಸಲು ಈ ರೀತಿ ಮಾಡಿದೆಯಾ; ಸಿಟ್ಟಿನಿಂದ ಮಾಡಿದ ಆಜ್ಞೆಯನ್ನು ಕೇಳದು; ನಿನ್ನ ತಲೆಗೆ ಹುಚ್ಚೇರಿತೇ? ರಾಮನನ್ನು ಬೇಗ ತೋರಿಸು' ಎಂದು ಹಂಬಲಿಸಿದನು. 'ಅಯ್ಯೋ! ರಾಮನನ್ನು ಕೊಲ್ಲು ಎಂದು ನಾನೇ ಆಜ್ಞೆಯನ್ನು ಮಾಡಿದೆನೇ! ಹೆಬ್ಬುಲಿ ರಾಮನನ್ನು ತೋರಿಸು' ಎಂದು ಉಬ್ಬುಬ್ಬಿ ಅಳುತ್ತ ಮುಖ ಅಡಿಯಾಗಿ ಬಿದ್ದನು. 'ಅರಸನ ಆಜ್ಞೆಯು ಸರಸವೇ ನನಗೆ' ಎಂದು ಹೇಳುತ್ತ, ರಾಮನ ಹೊನ್ನಿನ ಕಠಾರಿಯನ್ನು ತೋರಿಸಿದನು. ಮಾಣಿಕ್ಯದ ಉಂಗುರ, ಸರ, ಕಾಲ್ಪೆಂಡೆ, ಪಟ್ಟಿ, ಹಚ್ಚಡಗಳನ್ನು ತೋರಿಸಿದನು. ತಲೆಗೆ ಕಟ್ಟಿದ ಚಂದ್ರಗಾವಿ ಸಹಿತವಾಗಿ ಹನಿವ ರಕ್ತದ ತಲೆಯನ್ನು ಪುನಃ ತೋರಿಸಿದನು. ರಾಯನು ಅವನ್ನೆಲ್ಲ ನೋಡಿ ಕಣ್ಣೀರು

ಸುರಿಸುತ್ತ, 'ರಾಮನು ಮರಣಕ್ಕೆ ಮುನ್ನ ಆಡಿದ ಮಾತನ್ನು ತಿಳಿಸು' ಎಂದು ಕೇಳಿದನು. 'ಪರಿವಾರ, ಮಂತ್ರಿ ರಾಹುತರು ಎಲ್ಲರೂ ಸ್ಥಿರವಾಗಿ ಬಾಳಲಿ! ಧೊರೆಗಳ ಶಿರೋಮಣಿ ಕಂಪಿಲರಾಯನು ಧರೆಯನ್ನೆಲ್ಲ ಆಳಲಿ! ತಂದೆಯ ಮೋಹದ ರಾಣಿ ಚಿಕ್ಕಮ್ಮನು ಮುಪ್ಪಿನ ಮುತ್ತೈದೆಯಾಗಿ ನಂಜುಂಡೇಶನ ದಯದಿಂದ ಸ್ಥಿರವಾಗಿ ಬಾಳಲಿ' ಎಂದು ಹರಕೆಯನ್ನು ಒಪ್ಪಿಸಿದನು. ಹಗಲು ಕಗ್ಗೊಲೆಯ ಸಾಹಸ ಭೀಮನಾದ ರಾಮನು ನಿನಗೆ ಮರೆಯಾಗಿ ತಿಳಿಸಲು ಕೆಲವು ಮಾತುಗಳನ್ನು ಹೇಳಿದನು. 'ರತ್ನಮ್ಮನು ಹೇಳಿದ ಮಾತನ್ನು ಉಗಳು ದಾಟದಿರಲಿ; ಎಂದೆಂದಿಗೂ ರತ್ನಮ್ಮನ ಮಾತನ್ನು ಮೀರದಿರಲಿ; ಕುಂದದೆ ಇಬ್ಬರೂ ಸ್ಥಿರವಾಗಿ ಬಾಳಲಿ! ಎಂದು ಹೇಳಿ, ಕಂಪಿಲರಾಯನೇ ಏಳೇಳು ಜನ್ಮದಲ್ಲೂ ತಂದೆಯಾಗಲಿ ಏಳೇಳು ಜನ್ಮದಲ್ಲೂ ಹರಿಯಮ್ಮನೇ ತಾಯಿಯಾಗಲಿ ಎಂದು ರಾಮನು ಹಾರೈಸಿದನು. ಏಳೇಳು ಜನ್ಮದಲ್ಲೂ ಜಟ್ಟಂಗಿ ರಾಮೇಶನು ತನ್ನ ದೈವವಾಗಲೆಂದು; ಕಾಟಣ್ಣನಂಥ ಅಣ್ಣಂದಿರು ಇರಲೆಂದು; ಮಾರಮ್ಮ, ಸಿಂಗಮ್ಮನಂಥ ಸಹೋದರಿಯರಾಗಲೆಂದೂ ನುಡಿದನು. ಮೂಡಲು ಮುಖವಾಗಿ ಕುಳಿತ ಶಿರವನ್ನು ಬಾಗಿ ಕಡಿ' ಎಂದು ಹೇಳಿದನು. ಮಾತನಾಡದೆ ಶಿರವನ್ನು ಕಡಿದು ನಿನ್ನ ಬಳಿಗೆ ತಂದೆನು' ಎಂದು ಬೈಚಪ್ಪನು ಉಸುರಿದನು. ಈ ಮಾತನ್ನು ಕೇಳಿ, ಕಂಪಿಲರಾಯನು ಶೋಕದಿಂದ ಮೈಮರೆದು ಕಣ್ಣುಮುಚ್ಚಿದನು. ಕುಮಾರರಾಮನ ಹೆಸರು ಅಡಗಿ ಹೋಯಿತು. ನನ್ನ ವೈಭವವು ಹೋಯಿತು. ರಾಕ್ಷಸರ ದಂಡು ಬಂದರೆ ಅವರ ಸಂಗಡ ಕಾದುವ ವೀರರನ್ನೇ ಕಾಣೆನಲ್ಲಾ ಎಂದು ಪ್ರಲಾಪಿಸುತ್ತ, ಬಿಕ್ಕಿ ಬಿಕ್ಕಿ ಅಳುತ್ತ ಭೂಮಿಗೆ ಬೀಳಲು, ರಾಯನನ್ನು ಉಪಚರಿಸಿ, ತಬ್ಬಿಕುಳ್ಳಿರಿಸಿ, ರಾಮನ ಹಂಬಲವನ್ನು ಬಿಡು; ಮುಕ್ಕಣ್ಣನ ದಯೆ ಕಡಿಮೆಯಾಗಲು ರಾಮನು ಮಡಿದನು. ದುಃಖವನ್ನು ಬಿಡು ಎಂದು ಪರಿಪರಿಯಾಗಿ ಸಂತೈಸಿದನು. ರಾಮನ ತಲೆಯನ್ನು ಘಾತಕಿ ರತ್ನಿಗೆ ಕೊಟ್ಟು ಭಿನ್ನವಿಲ್ಲದೆ ಎಲ್ಲ ಸಂಗತಿಯನ್ನು ಅವಳಿಗೆ ತಿಳಿಸೆಂದು ಮಂತ್ರಿಯನ್ನು ಕಳುಹಿಸಿದನು. ರತ್ನಾಜಿಯು 'ಭಂಡುಮಾಡಿದ ತಲೆ ಇದು' ಎಂದು ನೋಡಿ ಮೀಸೆಯನ್ನು ಹಿಡಿದೆಳೆದಳು. ತಂದೆಯ ಅಪ

ಮಾನಸಕ್ಕೆ ಎಳಸಿದ ದ್ರೋಹಿ ಎಂದು ಗಲ್ಲವನ್ನು ಹಿಡಿದು ನೋಡಿದಳು. ಕಳ್ಳ ಒಂಟ ರಾಮನ ತಲೆಯನ್ನು ನೋಡಿ ರಾಮನ ತಲೆ ಎಂದು ನಂಬಿ ತಬ್ಬಿಕೊಂಡು, ಉಬ್ಬಿ ಹರ್ಷಿಸಿದಳು. ಕಡುಗಲಿ ರಾಮನನ್ನು ಕೊಂದೆನೆಂದು ಹಿರಿಹಿರಿ ಹಿಗ್ಗಿದಳು. ಪಾಪಿಯ ತಲೆಯನ್ನು ಮೆಟ್ಟುಗಾಲಿನಿಂದ ತೆಗೆದು ಆಗಳಿಗೆ ಬಿಸಾಡಿದಳು.

ಹರಿಯಾಲದೇವಿಯು ಮಗನು ಸತ್ತ ಸುದ್ದಿಯನ್ನು ಕೇಳಿದಳು. ಹೆತ್ತ ಒಡಲನ್ನು ಹೊಡೆದುಕೊಂಡು ಮರುಗಿದಳು. ಒಮ್ಮೆ ನನ್ನ ಮಗ ರಾಮನು ಎಂದಿಗೂ ಮಡಿದಿಲ್ಲ ಎನ್ನುವಳು. 'ಗಂಡರಗಂಡನಾದ ನೀನು ಹೊಟ್ಟೆಹೊರಕರಂತೆ ತಲೆಯನ್ನು ಕೊಟ್ಟು ಸಾಯುವರೆ? ಮೆಟ್ಟಿ ಎದುರು ಒಂದವರ ಮುಂಡಲೆಯ ಎಳೆದು ಹೊಟ್ಟೆಯ ಬಗೆಯದೆ, ದಿಟ್ಟತನದಲ್ಲಿ ಎದುರುಬಂದವರನ್ನು ಕೊಲ್ಲದೆ, ಹೇಡಿಯಂತೆ ಪ್ರಾಣವನ್ನು ಕಳೆದುಕೊಂಡೆಯಾ? ಕೋಟೆ-ಕೊತ್ತಳವನ್ನು ಬಡಿಯಲು ಒಂದವರನ್ನು ಎದುರಿಸಿ ಅವರ ತಲೆಗಳನ್ನು ತೆಗೆಯದೆ, ಪಟ್ಟಣವನ್ನು ಮುತ್ತಿದವರ ಸಂಗಡ ಕಾದಿ ಕೊಲ್ಲದೆ, ಮೋಸದ ಪಾಶಕ್ಕೆ ಸಿಕ್ಕಿ ಸಾಯಬಹುದೆ? ಗಟ್ಟಿಗನಾದ ರಾಮನನ್ನು ಮೋಸದಿಂದ ಕರೆದುಕೊಂಡು ಹೋಗಿ ಮರಸಿ ಕೊರಳನ್ನು ಕೊಯ್ದೆಯಲ್ಲ! ಕಂಪಿಲರಾಯನಿಗೆ ರತ್ನಾಜಿಯೇ ಹೆಚ್ಚಿನವಳಾದಳಲ್ಲ! ಅವಳ ಮತ್ಸರಕ್ಕೆ ನೀನು ಗುರಿಯಾದೆಯಲ್ಲ!' ಎಂದು ಪರಿಪರಿಯಾಗಿ ಹಲುಬುತ್ತ, ರಾಮನ ಶೌರ್ಯವನ್ನು ಕೊಂಡಾಡುತ್ತ, ಕಲ್ಲು ಮರಗಳಿಗೆ ತಲೆಯನ್ನು ಹಾಯುತ್ತ ಮರುಗಿದಳು. ಅಣ್ಣನ ಮರಣವಾರ್ತೆಯನ್ನು ಕೇಳಿ, ಸಹೋದರಿಯರ ಕಣ್ಣಿಗೆ ಸುಣ್ಣ ಬಡಿದಂತಾಯಿತು.

ಇನ್ನೊಂದು ಅರಮನೆಯಲ್ಲಿ ನಡೆದ ಚಿತ್ರವನ್ನು ನೋಡೋಣ. ರಾಮನಾಥನು ನಮ್ಮ ಅರಮನೆಗೆ ಬಾರದಿರಲು ಕಾರಣವೇನು ಎಂದು ರಾಮನಾಥನ ಹೆಂಡತಿಯರು ಯೋಚಿಸುತ್ತಿದ್ದರು. ರಾತ್ರಿ ಸ್ವಪ್ನದಲ್ಲಿ ಅರಮನೆಯ ದೊಡ್ಡ ಕಂಬವೊಂದು ಮುರಿದಂತೆಯೂ, ತವರುಮನೆಯವರು ಕಳುಹಿಸಿದ್ದ ಕರಬಾನವು ಒಂದುಳಿಯದೆ ಉರುಳಿದಂತೆಯೂ ಕಂಡ ಸ್ವಪ್ನದ ವಿವರವನ್ನು ಹಿರಿಯ ಹೆಂಡತಿ ರಾಮಲಾದೇವಿ ಹೇಳಿದಳು. ಅದಕ್ಕೆ ಕಿರಿಯ ಹೆಂಡತಿಯು ತನ್ನ ತರುಬು ಉರಿದಂತೆ ಕಂಡ ಸ್ವಪ್ನ

ವನ್ನು ತಿಳಿಸಿದಳು. ನನ್ನ ಕೊರಳ ಮುತ್ತಿನ ಹಾರವು ಭೂಮಿಗೆ ಹರಿದು ಬಿದ್ದ ಕನಸನ್ನು ಕಂಡೆನೆಂದು ಚಿಕ್ಕ ಹೆಂಡತಿ ತಿಮ್ಮಾಜಿಯು ಹೇಳಿದಳು. ತನ್ನ ಮುತ್ತಿನ ಹಾರವು ಕಿತ್ತು ಭೂಮಿಗೆ ಬಿದ್ದುದನ್ನೂ, ರಾಮನಾಥನ ಪಲ್ಲಕ್ಕಿಯು ಮುರಿದುಬಿದ್ದುದನ್ನೂ ಕನಸಿನಲ್ಲಿ ಕಂಡಂತೆ ಕಾಮಾಯಿಯೂ, ಬೊಲ್ಲನು ಸ್ವಪ್ನದಲ್ಲಿ ಸತ್ತಿದ್ದುದನ್ನು ಕಂಡೆನೆಂದು ಭೂಮಾಯಿಯೂ ಹೇಳಿದರು. ಅವರವರ ಸ್ವಪ್ನವನ್ನು ಹೇಳುತ್ತಿರಲು, ಅವರ ಅತ್ತೆಯು ರಾಮನಳಿದ ಸುದ್ದಿಯನ್ನು ತಿಳಿಸಿದಳು. ಅದಕ್ಕೆ ಕಾರಣವನ್ನು ಕೇಳಲು, ರತ್ನಾಜಿಯು ಕಂಪಿಲರಾಯನಿಗೆ ಇಂದ್ರಜಾಲ ಮಹೇಂದ್ರಜಾಲ ತಂತ್ರಗಳನ್ನು ಹೂಡಿ ರಾಮನನ್ನು ಕೊಲ್ಲಿಸಿದಳೆಂದು ಹರಿಯಮ್ಮ ಹೇಳಿದಳು. ತಾವು ಪಡೆದ ಫಲವು ಇಷ್ಟೇ ಎಂದು ತಮ್ಮತಮ್ಮೊಳಗೆ ಮಾತನಾಡಿಕೊಳ್ಳುತ್ತ ತಮ್ಮ ಮಾವನ ಬಳಿಗೆ ಹೋಗಿ ಕಿಚ್ಚನ್ನು ಬೇಡೋಣವೆಂದು ಮಾತನಾಡಿಕೊಂಡರು. ಪಟ್ಟೆ ಪೀತಾಂಬರವನ್ನು ಉಟ್ಟು ನವರತ್ನಖಚಿತಾಭರಣವನ್ನು ತೊಟ್ಟು, ಬಲಗೈಯಲ್ಲಿ ಕಠಾರಿಯನ್ನು ಹಿಡಿದು ಎಡಗೈಯಲ್ಲಿ ನಿಂಬೆಹಣ್ಣುಗಳನ್ನು ಹಿಡಿದು ಕಂಪಿಲರಾಯನ ಓಲಗಕ್ಕೆ ನಡೆದು ಬಂದರು. ಕನ್ನಡಿಯನ್ನು ನೋಡುತ್ತ ನಗೆದಾಡುತ್ತ ರಾಮನ ಕೀರ್ತಿಯನ್ನು ಹಾಡುತ್ತಿದ್ದರು. 'ಮಾವಯ್ಯ, ರಾಮನನ್ನು ಎಲ್ಲಿಗೆ ಕಳುಹಿಸಿರುವೆ? ಯಾವ ರಾಜ್ಯದ ಮೇಲೆ ದಾಳಿ ಮಾಡಲು ರಾಮನನ್ನು ಕಳುಹಿಸಿರುವೆ? ಮಲೆವ ರಾಯರ ಹಿಡಿದು ತರಲು ಕಳುಹಿಸಿರುವೆಯಾ? ಬಲ್ಲಾಳರಾಯನ ಬಳಿಗೆ ಕಳುಹಿಸಿದೆಯಾ? ಓರಗಲ್ಲ ಪ್ರತಾಪನ ಮೇಲೆ ಕಳುಹಿಸಿದೆಯಾ? ಗುತ್ತಿಯ ಜಗದಪ್ಪನ ಮೇಲೆ ಠಾಣ್ಯಮಾಡಲು ಕಳುಹಿಸಿದೆಯಾ? ಅಥವಾ ಹುಳಿಯಾರು ಮಾರಿಗೊಂಡನ ಮೇಲೆ ಕಳುಹಿಸಿರುವೆಯಾ?' ಎಂದು ಕಂಪಿಲ ಮಾವನನ್ನು ಕೇಳಿದರು. 'ಅಂಬಲಿಗಾಸೆಪಟ್ಟು ಅಮೃತಾನ್ನವನ್ನೇ ಚೆಲ್ಲಿದಂತಾಯಿತು. ಕಂಬಳಿಗಾಸೆಪಟ್ಟು ದೇವಾಲಯವನ್ನು ಬಿಸುಡಿದಂತಾಯಿತು. ಡೊಂಬರತ್ನಿಯ ಮಾತನ್ನು ಕೇಳಿ, ಕುಂಭಿನೀಪತಿ ರಾಮನನ್ನು ಕಡಿಸಿದೆಯಲ್ಲ? ಮಡದಿಯ ಮಾತು ನಿಜವೆಂದು ನಂಬಿ, ಮಗನನ್ನು ಕಡಿಯಲು ಅಪ್ಪಣೆ ಕೊಟ್ಟೆಯಾ? ನಿನ್ನ ಒಡಲು ಉರಿಯಲಿಲ್ಲವೆ? ಮಾವಾಜಿ, ಗಂಡನಾಜ್ಞೆಯನ್ನು ಮೀರದ

ಪತಿವ್ರತೆಯರು ಪ್ರಪಂಚದಲ್ಲಿರುವರು. ಆದರೆ ಹೆಂಡತಿಯ ಮಾತಿಗೆ ಮಕ್ಕಳನ್ನೇ ಕೊಲ್ಲಿಸುವ ತಂದೆಯರುಂಟೆ? ನಮ್ಮ ಮುತ್ತೈದೆತನಕೆ ಚಿತೆಯನ್ನಿಡಬಹುದೇ? ಮಾವಾಜಿ, ತಂದೆಯಾಜ್ಞೆಯನ್ನು ಮೀರಬಾರ ದೆಂಬ ಸತ್ಯಕ್ಕೆ ಕಟ್ಟುಬಿದ್ದು ತನ್ನ ತಲೆಯನ್ನೇ ರಾಮನು ಅರ್ಪಿಸಿದನು. ಅವನ ಎದುರಿಗೆ ನಿಂತು ಹೋರಾಡುವವರು ಹಿಂದೆ ಯಾರೂ ಇರಲಿಲ್ಲ. ಮುಂದೆ ಹುಟ್ಟುವುದಿಲ್ಲ. ಅಂಥ ಕಡುಗಲಿಯನ್ನು ಯಾವ ಧರ್ಮಾತ್ಮನು ಕೈಯ ಮುಟ್ಟಿ ಹೊಡೆದನೋ? ಅವನಿಗೆ ಕೈಗಳು ಹೇಗೆ ಮೇಲಕ್ಕೆ ಎದ್ದವೊ? ಶಿವ! ಶಿವ! ಕಟ್ಟಿಗೆಗಾಗಿ ಕಲ್ಪವೃಕ್ಷವನ್ನು ಕಡಿಸಿದಂತೆ, ಎಕ್ಕೆ ಬೆಳೆಯಲು ಬಾವನ್ನು ಕಡಿಸಿದಂತೆ ಮಾಡಿದೆಯಾ? ಮಾವಾಜಿ! ನಮ್ಮ ರಾಮನು ಮುಂದೆ ಹೋಗಿರುವನು; ನಾವೂ ಅವನೊಂದಿಗೆ ಹೋಗುವೆವು; ಕಿಚ್ಚನ್ನು ದಯಪಾಲಿಸು' ಎಂದು ಕಂಪಿಲ ಮಾವನನ್ನು ಬೇಡಿದರು. 'ನೀವು ಸಾಯಬೇಡಿ; ನಿಮ್ಮತ್ತೆಯರ ಸಂಗಡ ಸುಖವಾಗಿರಿ. ನಿಮಗಾಗಿ ರಾಜ್ಯವನ್ನು ಹಂಚಿಸಿ ಕೊಡುವೆನು 'ಎಂದು ಹೇಳಲು, 'ರಾಮ ನನ್ನು ಬಿಟ್ಟಿರುವುದು ನಮಗೆ ಧರ್ಮವೇ? ಅದು ಭಂಡತನವಲ್ಲವೆ? ಖಂಡಿತವಾಗಿಯೂ ಕಿಚ್ಚನ್ನು ಕೊಡಿ ' ಎಂದು ಪ್ರಾರ್ಥಿಸಿದರು. ಕಂಪಿಲ ರಾಯನು ತನ್ನ ಸೊಸೆಯರ ಮೂರ್ಖತನವನ್ನು ನೋಡಿ ಅವರನ್ನು ತಡೆಯಲರಿಯದೆ ಉಪಾಯದಿಂದ ಅವರನ್ನು ಕರೆದುಕೊಂಡು ಹೋಗು ವಂತೆ ಬೈಚಪ್ಪನಿಗೆ ತಿಳಿಸಿದನು. ಮಂತ್ರಿಯು ರಾಮನ ಮಾನಿನಿಯರನ್ನು ಕರೆದುಕೊಂಡು ಹೋಗಿ, ಬುದ್ಧಿವಾದವನ್ನು ಹೇಳಿ, ರಾಮನು ಸತ್ತಿರುವ ನೆಂದು ತಿಳಿಯಬೇಡಿ. ಅವನು ನಿಮ್ಮ ಚಿತ್ತದೊಳಗಿರಲಿ. ಆರು ತಿಂಗಳ ರಾಣಿವಾಸವನ್ನು ಮಾಡಿರಿ; ಅಷ್ಟರಲ್ಲಿ ಏನಾಗುವುದೋ ನೋಡೋಣ ಎಂದು ಸಮಾಧಾನ ಹೇಳಲು, ರಾಮನ ಮಡದಿಯರು ತಮ್ಮರಮನೆಗೆ ನಡೆದರು.

ಕಂಪಿಲರಾಯನು ತನ್ನ ಮಗ ರಾಮನನ್ನು ಕೊಲ್ಲಿಸಿದ ಸುದ್ದಿಯು ದಿಕ್ಕು ದಿಕ್ಕಿಗೂ ಹಬ್ಬಿತು. ರಾಮನಳಿದ ಸುದ್ದಿಯು ದಿಲ್ಲಿಗೆ ಮುಟ್ಟಿ ಸುಲ್ತಾನನಿಗೂ ತಿಳಿಯಿತು. ಅದನ್ನು ಕೇಳಿ ಸುಲ್ತಾನನು ತನ್ನ ಮಂತ್ರಿ ಯನ್ನು ಕರೆಯಿಸಿ ಯುದ್ಧಕ್ಕೆ ಸಿದ್ಧವಾಗೆಂದು ಹೇಳಿದನು. ದೇಶದ

ನಾನಾ ಭಾಗಗಳಿಂದ ಖಾನಖಾನರು, ರಾವುತರು ಬಂದರು. ಆರೇ ಗುಜ್ಜರ, ಗೌಳಿ, ಕನೋಜ್, ಸಿಂಧುಪಾವಳ, ಮಾಗಧವೇ ಮೊದಲಾದ ದೇಶದ ರಾಜರುಗಳಿಗೆ ಓಲೆಯನ್ನು ಬರೆಯಿಸಿ, ಸೈನ್ಯವನ್ನು ತರಿಸಿದನು. ಧೂರ್ಜಟಖಾನ, ಸೈಯದಲ್ಲಿ, ಶಂಶೀರಖಾನ್, ರಾಜಖಾನ್, ಮಹಮ್ಮದ್‌ಸಾಹೇಬ, ತುಂಬುರಖಾನ್, ಯಕಲಾಸಖಾನ್, ಬಡುಲಖಾನ್, ಉತ್ತರಂತಖಾನ್, ರತುಮಾನಖಾನ್. ಬಾಬಾಜಿ, ಅಬ್ದುಲ್ಲಾಖಾನ್, ಬಾಬಾಖಾನ್ ಮುಸಲಖಾನ್ ಸಕಲಾತಿ, ಹೈದರ ಮುಂತಾದ ಹೆಸರಾದ ಖಾನರು ಸುಲ್ತಾನನ ಓಲಗದಲ್ಲಿ ಸೇರಿದರು. ೧೮೦೦ ಆನೆ, ಕಾಲಾಳು ೯,೦೦೦೦೦, ೮೦,೦೦೦ ಕುದುರೆಯ ರಾವುತರು ಸಹಿತವಾಗಿ ನೇಮಿಯು ಭೇರಿ, ತಮ್ಮಟೆ, ಗಿಡಿಬಿಡಿ, ನಿಸ್ಸಾಳ, ಕೊಂಬು ಇವೇ ಮೊದಲಾದ ವೀರವಾದ್ಯಗಳ ರಭಸದೊಂದಿಗೆ ಘೋರೆಂದು ತೆರಳಿದನು. ಬಂಡಿಗಳಲ್ಲಿ ಆಹಾರ ಜಾಕಾಯಿಜಾಪತ್ರೆ ಮೊದಲಾದ ಹೇರುಗಳನ್ನು ತುಂಬಿ, ಕತ್ತಿಗಳನ್ನು ಸವರಿಸಿಕೊಂಡು ಸಾದಾಯು ತುಂಬಿಕೊಂಡು ಪ್ರಯಾಣ ಬೆಳಸಿದನು. ಇವರು ಬರುತ್ತಿದ್ದ ರಭಸಕ್ಕೆ ಕೆಂದೂಳು ಸೂರ್ಯಮಂಡಲವನ್ನು ಮುಸುಕಿತು. ಭಾಗೀರಥಿಯನ್ನು ದಾಟಿ ಚಿಕ್ಕ ದಿಲ್ಲಿಯನ್ನು ಸೇರಿ ಮುಂದಕ್ಕೆ ಪ್ರಯಾಣಮಾಡುತ್ತ ದಾರಿಯಲ್ಲಿ ಮಿರಜಿ, ಅಮರಾವತಿ ಮೊದಲಾದ ಪಟ್ಟಣಗಳನ್ನು ದಾಟಿಬಂದು ಒಂದು ಸ್ಥಳದಲ್ಲಿ ಬೀಡುಬಿಟ್ಟರು.

ನೇಮಿಖಾನನು ಶಕುನವನ್ನು ನೋಡಬೇಕೆಂದು ೧೦೧ ಶಾಸ್ತ್ರಿಗಳನ್ನು ಕರೆಯಿಸಿ ಕಾರಣಿಕವನ್ನು ಹೇಳಿರೆಂದನು. ಗಂಭೀರವಾದ ಟಗರೊಂದನ್ನು ತರಿಸಿ ಅದಕ್ಕೆ ನೇಮಿ ಎಂಬ ಹೆಸರನ್ನಿಟ್ಟನು ಕೆಂಬೋಡಿಯಾದ ಮತ್ತೊಂದು ಟಗರನ್ನು ತರಿಸಿ ರಾಮನೆಂಬ ಹೆಸರಿಡಿಸಿದನು. ನೇಮಿ ಎಂಬ ಟಗರಿಗೆ ಮುತ್ತಿನ ದಂಡೆಯನ್ನು, ರಾಮನೆಂಬ ಟಗರಿಗೆ ಬಣ್ಣದ ಹೂವಿನ ದಂಡೆಯನ್ನು ಹಾಕಲಾಯಿತು. ನೇಮಿಯ ಟಗರಿಗೆ ಮುತ್ತಿನ ಸತ್ತಿಗೆಯನ್ನು ರಾಮನ ಟಗರಿಗೆ ಕೊಡೆಯ ಸತ್ತಿಗೆಯನ್ನು ಹಿಡಿದರು. ಟಗರುಗಳ ಕಿವಿಯಲ್ಲಿ ಬೊಬ್ಬೆಮಾಡಿ, ಅಬ್ಬರದಲ್ಲಿ ಹೋಗಬಿಡಲು ನಿಬ್ಬರದಿಂದ ಸನೇ ತೆಗೆದವು. ನಾಲ್ಕು ಸನೇಗೆ ನೇಮಿಯ

ಟಗರು ತಲೆಮುದರಿಕೊಂಡು ಓಡಿತು. ನೇಮಿಯ ಎದೆ ಒಡೆಯಿತು. ಟಗರಿನ ಕಾಳಗವು ಸಾಕೆಂದು ನಿಲ್ಲಿಸಿದನು. ಹುಂಜದ ಕಾಳಗವನ್ನು ಹೂಡುವಂತೆ ಹೇಳಿದನು. ಬಲ್ಲಿದ ಹುಂಜವನ್ನು ತರಿಸಿ ನೇಮಿಯೆಂಬ ಹೆಸರಿಟ್ಟನು. ಹೆಂಬೇಡಿ ಹುಂಜವನ್ನು ತರಿಸಿ ರಾಮನ ಹೆಸರಿಟ್ಟನು. ಹೊಸ ಸಾಣೆ ಹಿಡಿಸಿದ ಕತ್ತಿಯನ್ನು ತನ್ನ ಹೆಸರಿನ ಹುಂಜಕ್ಕೂ, ಮಸೆಯದ ಮೊಂಡ ಕತ್ತಿಯನ್ನು ರಾಮನ ಹೆಸರಿನ ಹುಂಜಕ್ಕೂ ಕಟ್ಟಿಸಿದನು. ಎರಡೂ ಹುಂಜಗಳನ್ನು ಒಂದಕ್ಕೊಂದಕ್ಕೆ ತೋರಿಸಿ ಬಿಡಲು ರಾಮನ ಹುಂಜವು ನೇಮಿಯ ಹುಂಜದ ಕೊರಳನ್ನು ಕಚ್ಚಲು ಒಂದೇ ಬಾರಿಗೆ ನೇಮಿಯ ಹುಂಜವು ಹೆದರಿ ಓಡಿತು. ಆಟವನ್ನು ನೋಡುತ್ತ ನಿಂತಿದ್ದ ಖಾನರು ನೋಡಿ ಬೆರಗಾದರು. 'ನಿಮ್ಮ ಹೆಸರಿನ ಟಗರು, ಹುಂಜವು ಹಿಂದಕ್ಕೆ ಓಡಿದ್ದರಿಂದ ನಿಮಗೆ ಜಯವಿಲ್ಲ. ದೇವರ ಕೃಪೆಯು ರಾಮನಿಗಿರುವುದು' ಎಂದು ಶಾಸ್ತ್ರಿಗಳು ಹೇಳಿದರು. ಹಿಂದಕ್ಕೆ ಹೋದರೆ ಸುಲ್ತಾನನು ಕೋಪಗೊಳ್ಳುವನು. ಮುಂದಕ್ಕೆ ಹೋದರೆ ಅಪಜಯವು ಸಿದ್ಧವೆನ್ನುತ್ತ ಚತುರಂಗಬಲಸಹಿತ ದಂಡು ಮುಂದಕ್ಕೆ ತೆರಳಿತು. ತೊರಗಲ್ಲು, ಬಾದಾಮಿಗಳನ್ನು ದಾಟಿ ಕುಮ್ಮಟದುರ್ಗದಿಂದ ಮೂರು ಗಾವದ ದೂರದಲ್ಲಿ ನೇಮಿಯು ಬೀಡುಬಿಟ್ಟನು.

ನೇಮಿಯ ದಂಡು ಬರುವ ರಭಸಕ್ಕೆ ರಾಮನ ಸೀಮೆಯ ಜನರು ಊರುಕೇರಿಗಳನ್ನು ಬಿಟ್ಟೋಡಿದರು. ಕಾಡುಮಲ್ಲೆ ಸೊಪ್ಪನ್ನು ತಿನ್ನುತ್ತ ಬೇಡರು ನಾಯಿ ಬಡಿಗೋಲು ಸಹಿತ ಹೊರಟರು. ಇವರು ನೆತ್ತಿಯ ಮೇಲೆ ಗಂಟುಗಳನ್ನು ಹೊತ್ತುಕೊಂಡು ಕೈಗಳಲ್ಲಿ ಗೂಡೆಗಳನ್ನು ಹಿಡಿದುಕೊಂಡು ನಾನಾ ವಿಧವಾದ ಬಲೆಗಳನ್ನು ಹೊತ್ತುಕೊಂಡು ಹೋಗುತ್ತಿದ್ದರು. ಕುರಿಯ ಹಿಂಡುಗಳನ್ನು ಹೊರಳಿಸಿಕೊಂಡು ಮರಿಗಳನ್ನು ಹೆಗಲ ಮೇಲೆ ಹೊತ್ತುಕೊಂಡು ಮರುಗುವ ಹೆಂಡತಿಯರ ಕೈಹಿಡಿದುಕೊಂಡು ಗೊಲ್ಲರು ನಡೆದಿದ್ದರು. ಅಡ್ಡಣಿಗೆ ಕೊಡತಿಗಳನ್ನು ಹೆಗಲಮೇಲೆ ಹೇರಿಕೊಂಡು ಅಗಸರೂ, ಓದುವ ಕಡತಹಲಗೆ ಬಳಪ ಸಹಿತ ಓದಿಸುವ ಅಣ್ಣಗಳು, ಹೆಣ್ಣುಮಕ್ಕಳೊಡನೆಯೂ ಪಟ್ಟಣದ ಸ್ವಾಮಿಗಳೊಡನೆ ಶೆಟ್ಟರೂ, ಅಡಿಗಲ್ಲು, ತಿದಿ, ಇಕ್ಕಳ,

ಉಳಿ, ಬಾಚಿ, ಕೊಡತಿ ಸಹಿತ ಒಡಗಿಗಳೂ, ಕಂಬಿಗೆ, ನಿಚ್ಚಣಿಕೆಗಳನ್ನು ಹೊತ್ತುಕೊಂಡು ಜಾಡರೂ, ರಂಭೆಯ ಚಂದದ ಹೆಣ್ಣುಗಳೊಡನೆ ದೊಂಬರೂ, ಬಾಲಕರೂ, ಉಪಾಧ್ಯಾಯರೂ, ಜ್ಯೋತಿಷ್ಯರೇ ಮೊದಲಾದ ಬ್ರಾಹ್ಮಣರೂ ಹುಡುಗರೂ ಮಕ್ಕಳೂ ಎಲ್ಲರೂ ಊರುಕೇರಿಗಳನ್ನು ತೊರೆದು ಕಾಡುಮೇಡುಗಳನ್ನು ಹೊಕ್ಕರು

ಕುಮ್ಮಟದುರ್ಗದ ಸೀಮೆಯನ್ನು ಪ್ರವೇಶಿಸಿದೊಡನೆಯೇ ಬೇಡರು, ನೇಮಿಯ ಕಡೆಯವರಿಗೆ ಕಿರುಕುಳವನ್ನು ಕೊಡಲಾರಂಭಿಸಿದರು ಬೇಡರು ಹುಲ್ಲೆಯಂತೆ ಕುಪ್ಪಳಿಸುತ್ತ ಓಡಿಹೋಗಿ ನೇಮಿಯ ಎಡಭಾಗದಲ್ಲಿ ಓಡುತ್ತಿದ್ದ ಕುದುರೆಯವರನ್ನು ಹೊಡೆಯಲು ಕೆಲವು ಕುದುರೆಗಳು ನೆಲಕ್ಕೆ ಬಿದ್ದವು. ಇನ್ನು ಕೆಲವು ತಮ್ಮ ರಾವುತರನ್ನು ಕೆಡಹಿ ಹಿಂದಕ್ಕೆ ಓಡಿದವು. ನೇಮಿಯ ಬಲಭಾಗದಲ್ಲಿ ಬರುತ್ತಿದ್ದ ಕುದುರೆಯವರನ್ನು ಮುತ್ತಿ, ಒಳ್ಳೆಯ ಹೇರನ್ನು ಸುಗ್ಗುಮಾಡಿದಂತೆ ಎಲ್ಲ ರಾವುತರನ್ನು ಮಲಗಿಸಿದರು. ಗಡಿಯೊಳಕ್ಕೆ ಬಂದ ಕುದುರೆಗಳು ಬಿಲ್ಲು ಬಾಣಗಳ ಏಟಿಗೆ ನೊಂದು ಓಡಿದವು. ಮುಂಚೋಣಿಯಲ್ಲಿದ್ದವರನ್ನು ಧೈರ್ಯದಿಂದ ಕೊಲ್ಲುತ್ತಿದ್ದರು. ಹಿಂಬಾಲಿಸಿ ಬರುತ್ತಿದ್ದ ಕುದುರೆಗಳನ್ನು ದೊಂಬ ಲಾಗವನ್ನು ಹಾಕಿದಂತೆ, ಹೊಡೆದು ಕೊಲ್ಲುತ್ತಿದ್ದರು. ತಂಡತಂಡವಾಗಿ ಬರುತ್ತಿದ್ದ ಕುದುರೆಗಳು ದಿಂಡುರುಳಿ ಭೂಮಿಗೆ ಬಿದ್ದವು. ಹತ್ತುಸಾವಿರ ಕಾಲಾಳು, ಕುದುರೆಗಳನ್ನು ಕೊಂದರು. ಐನೂರು ಆನೆಗಳು ಮಡಿದವು. ಈ ರೀತಿ ತನ್ನ ಸೈನ್ಯಕ್ಕೆ ಆಗುತ್ತಿದ್ದ ತೊಂದರೆಯನ್ನು ನೋಡುತ್ತ ತನ್ನವರನ್ನು ಸಂತೈಸುತ್ತ ನೇಮಿಯು ರಣಾಂಗದಲ್ಲಿ ಮುಂದುವರೆಯುತ್ತ ಬಾದಾಮಿ, ತೊರಗಲ್ಲು ದಾಟಿ ಏಳು ತಿಂಗಳಿಗೆ ಕುಮ್ಮಟದುರ್ಗದ ಬಳಿಗೆ ಬಂದನು. ನೇಮಿಯು ಬೀಡುಬಿಟ್ಟು, ಬೆನ್ನಟ್ಟಿ ಬರುವ ರಾಮನು ಮಡಿದು ಹೋಗಿದ್ದಾನೆ ಕುಮ್ಮಟದುರ್ಗವನ್ನು ಧೂಳುಗೋಟೆಮಾಡಿ ಅವನ ರಾಜ್ಯವನ್ನು ಸೂರೆಗೊಳ್ಳುವೆನು ಎಂದು ಕೋಪದಿಂದ ಮಾತನಾಡಿದನು. ಕೋಟೆಯನ್ನು ತೆಗೆದುಕೊಳ್ಳುವೆನೆಂಬ ಹರ್ಷವು ಉಕ್ಕಲು ನೇಮಿಯು ಭಟರನ್ನು ಕರೆಯಿಸಿ, ಸಂಧಾನ ನಡೆಸಿದನು. ಯುದ್ಧಮಾಡದೆ ಬಾದೂರಖಾನನನ್ನು ಬಿಟ್ಟುಕೊಡಬೇಕೆಂದೂ,

ಐವರು ಭಟರೊಡನೆ ನೇಮಿಯು ಕಂಪಿಲರಾಯನಿಗೆ ಹೇಳಿಕಳುಹಿದನು. ಭಟರು ಕೋಟೆಯನ್ನು ಹೊಕ್ಕು ಕಂಪಿಲರಾಯನನ್ನು ಕಂಡು ಕಾಗದಗಳನ್ನು ಕೊಟ್ಟು 'ನೇಮಿಯ ಸಂಗಡ ಸಮರವು ಬೇಡ, ದುರ್ಗವನ್ನು ನಂಬಿ ಕೆಡಬೇಡ; ಬಾದೂರಖಾನನನ್ನು ಒಪ್ಪಿಸು. ಇಷ್ಟು ದಿನದಂತೆ ಯೋಚಿಸಬೇಡ. ಈಗ ಕಡುಗಲಿ ರಾಮನು ಮಡಿದಿರುವನು. ಬಾದೂರಖಾನನನ್ನು ಒಪ್ಪಿಸದಿದ್ದರೆ ನೇಮಿಯು ನಿನ್ನನ್ನು ಹುಟ್ಟುಗೆಡಿಸುವನು. ಅಸಮಾನ ಶೂರನಾದ ನೇಮಿಯೊಡನೆ ನಿನಗೆ ಸರಸವೇ? ಆದ್ದರಿಂದ ಬಾದೂರಖಾನನನ್ನು ಒಪ್ಪಿಸಿ, ಕಪ್ಪವನ್ನು ಕೊಟ್ಟು ನೇಮಿಯನ್ನು ಹಿಂದಕ್ಕೆ ಕಳುಹಿಸುವುದು ಮೇಲು' ಎಂದು ಭಟರು ನುಡಿದರು. 'ಮೊರೆಹೊಕ್ಕ ಖಾನನನ್ನು ಬಿಟ್ಟುಕೊಡೆನು. ಮಂಜು ಮುಸುಕಿದರೆ ಬೆಟ್ಟವು ಅಂಜದೆ ರಂಜಿಸುವುದು; ಜಂಬುಕನಿಗೆ ಕುಂಜರವು ಹೆದರುವುದೇ? ಹಿಂದಿಟ್ಟುಕೊಂಡಿರುವ ಬಾದೂರಖಾನನನ್ನು ಎಂದಿಗೂ ಬಿಟ್ಟುಕೊಡುವುದಿಲ್ಲ. ನೇಮಿಗೆ ಎಂದಿಗೂ ಅಂಜುವುದಿಲ್ಲ' ಎಂದು ಹೇಳಿ ಚಂದಚಂದದ ಉಡುಗೊರೆ – ವೀಳೆಯವನ್ನು ಕೊಟ್ಟು ಬಂದ ಭಟರನ್ನು ಹಿಂದಕ್ಕೆ ಕಳಿಸಿದನು. ಭಟರು ಹಿಂದಕ್ಕೆ ಹೋಗಿ ತಮ್ಮೊಡೆಯನಿಗೆ ಸುದ್ದಿಯನ್ನು ತಿಳಿಸಿದರು.

ಬಂದ ದಂಡನ್ನು ನೋಡಿ ಕುಮ್ಮಟ ಪಟ್ಟಣವು ತಲ್ಲಣಿಸಿತು. ಮಂದಿಯು ಅಲ್ಲಲ್ಲಿ ಗುಂಪುಗುಂಪಾಗಿ ನಿಂತು ಗುಜುಗುಜು ಗುಟ್ಟುತ್ತ ಬಾಯಿಬಾಯಿ ಬಿಡುತ್ತಿದ್ದರು. ಕಂಪಿಲರಾಯನು ತನ್ನ ಮಗನನ್ನು ನೆನೆದು 'ಪ್ರಾಪ್ತವಾದ ಕಷ್ಟವನ್ನು ಪರಿಹರಿಸುವವರನ್ನು ಕಾಣೆನಲ್ಲ' ಎಂದು ಮನದಲ್ಲಿಯೇ ಖೇದಪಟ್ಟನು. ತಾನೆ ಸಮಾಧಾನಮಾಡಿಕೊಂಡು ಚಾವಡಿಗೆ ಬಂದು ಕುಳಿತನು.

ಕಂಪಿಲರಾಯನು ಮಂತ್ರಿಯನ್ನೂ ಮುಖ್ಯಸ್ಥರನ್ನೂ ಚಾವಡಿಗೆ ಕರೆಸಿದನು. 'ಪಟ್ಟಣವನ್ನೆಲ್ಲ ಶೃಂಗರಿಸು. ಕೋಟೆಕೊತ್ತಲುಗಳ ಮೇಲೆ ಪೆಟ್ಟಲು ಬಾಣಗಳನ್ನು ಹೂಡಿಸು. ರಕ್ಕಸರಣಗಾರಿ ಎಂಬ ಕೊತ್ತಲಕ್ಕೂ, ಚತುರ್ ದಿಕ್ಕಿನ ಹೆಬ್ಬಾಗಿಲುಗಳಿಗೂ, ಚೋರಗಂಡಿಗಳಿಗೂ ಭೂತಗಳು ದಣಿಯುವಂತೆ ರಣಬಲಿಯನ್ನು ಹಾಕಿಸು' ಎಂದು ಆಜ್ಞೆ

ಮಾಡಿದನು. 'ರಾಮನನ್ನು ಕೊಲ್ಲಿಸಿ ಕುಮ್ಮಟದುರ್ಗಕ್ಕೆ ಮುತ್ತಿಗೆಯನ್ನು ತಂದೆ. ಈಗ ಚಿಂತಿಸಿದರೆ ಏನಾಗುವುದು? ರತ್ನಾಜಿಯನ್ನು ಕರೆದು ಮುತ್ತಿಗೆಯನ್ನು ಎಬ್ಬಿಸುವಂತೆ ಆಜ್ಞೆಮಾಡು' ಎಂದು ಬೈಚಪ್ಪ ಮಂತ್ರಿಯು ಹಂಗಿಸಲು, 'ಹಲವು ರೀತಿಯಲ್ಲಿ ನನ್ನನ್ನು ಹಂಗಿಸದಿರು. ನೀನು ನನ್ನ ತಂದೆಯ ಕಾಲದ ಹಳಬನಿರುವುದರಿಂದ ಅದನ್ನು ಸಹಿಸಬೇಕಾಗಿದೆ. ಕೊಲ್ಲೆಂದು ಹೇಳಿದ ಮಾತ್ರಕ್ಕೆ ಅರಗಳಿಗೆಯೂ ನಿಲ್ಲದಂತೆ ಮಗನನ್ನು ಕೊಲ್ಲಬಹುದೇ?' ಎಂದು ಕಂಪಿಲರಾಯನು ಕಣ್ಣೀರಿಟ್ಟನು. ರಾಜನ ಕಟ್ಟಾಜ್ಞೆಯನ್ನು ಮೀರಲರಿಯದೆ ಕೊಂದುದಾಗಿ ಮಂತ್ರಿಯು ಹೇಳಿದನು.

ರಾಯನು ಬಾದೂರಖಾನನನ್ನು ಓಲಗಕ್ಕೆ ಕರೆಸಿ ಅಂದಿನ ವಿದ್ಯಮಾನಗಳನ್ನು ತಿಳಿಸಿದನು. ಅದನ್ನು ಕೇಳಿ, ಅಂದೇ ಶತ್ರುಸೈನ್ಯವನ್ನು ಹೊಕ್ಕು ಕಗ್ಗೊಲೆಮಾಡುವುದಾಗಿ ಅವನು ತಿಳಿಸಿದನು. ರಾಯನು ಅವನ ಪರಾಕ್ರಮಕ್ಕೆ ಮೆಚ್ಚಿ ಅವನಿಗೆ ವೀಳೆಯವನ್ನು ಕೊಡಲು ಬಾದೂರಖಾನನು ವೀಳೆಯವನ್ನು ಸ್ವೀಕರಿಸಿ 'ಅಂದು ಕಗ್ಗೊಲೆ ಬಿದ್ದು ಏಳುನೂರು ಕುದುರೆಯ ಮಂದಿಯನ್ನು ಹಿಡಿದು ತರುವೆನು' ಎಂದು ಹೊಳೆವ ಖಡ್ಗವನ್ನು ಹಿಡಿದು ಶಪಥಮಾಡಿ, ಕಹಳೆಯು ಮೊಳಗುತ್ತಿರಲು ರಾಜನಿಗೆ ವಂದಿಸಿ ಸಭೆಯಿಂದ ಹೊರಟನು. ಆಹೊತ್ತಿಗೆ ಪಡುವಣ ದಿಕ್ಕಿನಲ್ಲಿ ಸೂರ್ಯನು ಮುಳುಗಿದನು. ನಕ್ಷತ್ರಗಳು ತಲೆದೋರಿದವು.

ಐವರು ಬೇಡರ ನಾಯಕರು ಎಂಟು ಸಾವಿರ ಸೈನ್ಯದೊಡನೆ ಆ ರಾತ್ರಿ ಚೋರಗಂಡಿಯಿಂದ ಹೊರಹೊರಟು ನೇಮಿಯ ದಂಡನ್ನು ಕಡಿದು ಓಡಿಸುವೆನೆಂದು ಮಾತನಾಡಿಕೊಳ್ಳುತ್ತ ನಡುರಾತ್ರಿಯ ಕಾಳಗತ್ತಲೆಯಲ್ಲಿ ತಮ್ಮ ತಮ್ಮ ಪಾಳೆಯವನ್ನು ಹೊಕ್ಕರು. ಐದು ಜನ ವೀರರು ಪಾಳೆಯನಲ್ಲಿ ಸೇರಿ ಅರಿಬಲವನ್ನು ಸೂರೆಮಾಡಿದರು. ಕುದುರೆ ರಾವುತರನ್ನೂ ಕಾಲಾಳುಗಳನ್ನೂ ಕಡಿದರು. ಶತ್ರುಪಕ್ಷದವರು ಕಂಗೆಟ್ಟು ಓಡಿದರು. ಶತ್ರುಗಳು ಮಿತ್ರರು ಎಂದು ಕತ್ತಲೆಯಲ್ಲಿ ಕಾಣದೆ ಶತ್ರುಗಳು ತಮ್ಮ ತಮ್ಮ ಆನೆ ಕುದುರೆ ಕಾಲಾಳುಗಳನ್ನೇ ಕಡಿಯುತ್ತ ಹಿಂದಕ್ಕೆ ಪಲಾಯನ ಮಾಡುತ್ತಿದ್ದರು. ಬೇಡರು ಕಗ್ಗೊಲೆ ಬಿದ್ದು ತುರುಕರನ್ನು ತುಂಡರಿಸಲು

ರಣಾಂಗಣವು ಭೂತಪ್ರೇತಗಳಿಗೆ ಸುಗ್ಗಿಯಾಯಿತು. ಸೇನೆಯ ದಂಡು ಬಯಲಾಯಿತು. ಬೇಡರು ಮುಂದುಮುಂದಕ್ಕೆ ನುಗ್ಗಿ ಶತ್ರುಗಳ ತಲೆ, ಕೊರಳು, ಮುಖ, ತೊಡೆ ಎಂಬ ಭೇದವಿಡದೆ ಕೋಲಾಹಲಮಾಡಿ ಕಡಿದು ಕೆಡಹುತ್ತ ನುಗ್ಗುತ್ತಿರಲು ತುರುಕರು ಹುಲ್ಲುಕಚ್ಚಿ ಕಂಗೆಟ್ಟು ಒತ್ತಲೆಯಾಗಿ ಹರಿದೋಡಿದರು. ಬೇಡರನಾಯಕರು ಒಂದು ಸಾವಿರ ಕುದುರೆಗಳನ್ನು, ನೂರಾರು ಆನೆಗಳ ಹಿಂಡುಗಳನ್ನು ಕೈಸೆರೆಹಿಡಿದು ಹಿಂತಿರುಗಿ ಬಂದು ಪಟ್ಟಣವನ್ನು ಸೇರಿ ಗಿಡಿಬಿಡಿ, ಕೊಳಲು, ತಪ್ಪಟೆ, ಕೊಂಬು, ನಿಸ್ಸಾಳಗಳು, ಚಿನ್ನಗಹಳೆಗಳು ಜಯಸೂಚನೆ ಮಾಡುತ್ತಿರಲು ಸಡಗರದಿಂದ ಬಂದು ಕಂಪಿಲರಾಯನಿಗೆ ಕೈಮುಗಿದರು. ಬಾದೂರ ಖಾನನು ಕಗ್ಗೊಲೆಯಲ್ಲಿ ಕೈಸೆರೆಹಿಡಿದ ಕಾಲಾಳು, ಸಾವಿರಾರು ಕುದುರೆ, ಒಂದು ನೂರು ಆನೆಗಳನ್ನು ರಾಯನಿಗೆ ಒಪ್ಪಿಸಲು, ರಾಯನು ಸಂತೋಷ ಭರಿತನಾಗಿ ಅವರಿಗೆ ಹಿಡಿಹೊನ್ನು, ಪಟ್ಟುಪೀತಾಂಬರಗಳನ್ನು ಬಹುಮಾನವಾಗಿ ಕೊಟ್ಟನು. ಆನಂತರ ಕಂಪಿಲರಾಯನು ದುರ್ಗದಿಂದ ಕೆಳಕ್ಕಿಳಿದು ಕೋಟೆಯ ಒಳಭಾಗದಲ್ಲಿ ಬೀಡುಬಿಟ್ಟನು. ಪುರದ ನಾಲ್ಕು ದಿಕ್ಕಿನ ಹೆಬ್ಬಾಗಿಲ ಮೇಲೆ ಲಕ್ಷ ಸಂಖ್ಯೆಯ ಗುಡಿತೋರಣಗಳು ಏರಿಸಲ್ಪಟ್ಟವು. ಕಂಪಿಲನ ಗುಡಾರದ ಮೇಲೆ ಮುತ್ತಿನ ಪಚ್ಚೆಯ ಗುಡಿಗಳು, ರತ್ನದ ಕಲಶಗಳು ಎದ್ದು ಶತ್ರುಗಳ ಕಣ್ಣು ಕೆಡುವಂತೆ ಪ್ರಕಾಶಿಸುತ್ತಿದ್ದವು.

ತನ್ನ ಬಿಡಾರದಿಂದ ತುರುಕರ ಸೇನೆ ಕುದುರೆಗಳನ್ನು ನೋಡಿ, ಕಂಪಿಲರಾಯನಿಗೆ ಎದೆಯೊಡೆದು ನೀರಾಯಿತು. ‘ ಕಂದ ರಾಮನು ಅಳಿದಕಾರಣದಿಂದ ನನ್ನ ಬಾಳು ಬಯಲಾಯಿತು. ಈ ಸುದ್ದಿಯನ್ನು ಕೇಳಿ ನೇಮಿಯು ದಂಡು ತೆಗೆದುಕೊಂಡು ಬಂದನು. ಮಾರಿಯನ್ನು ಮನೆಗೆ ಬರಮಾಡಿಕೊಂಡೆ. ನಮ್ಮ ಬಾಳು ಶತ್ರುಗಳು ನೋಡಿ ನಗುವಂತಾಯಿತು. ನಾವು ತುರುಕರ ಬಾಯಿಗೆ ತುತ್ತಾದೆವು. ರತ್ನಿಯೇ ನಮ್ಮ ಪಾಲಿಗೆ ಮೃತ್ಯುದೇವತೆಯಾದಳು. ಕುಮ್ಮಟದುರ್ಗವನ್ನು ತುರುಕರು ಸುತ್ತಲೂ ಮುತ್ತಿರುವರು. ಈ ಮುತ್ತಿಗೆಯಿಂದ ಪಾರಾಗುವ ಬಗೆ ಹೇಗೆ? ಆಗಲೆ ಬೈಚಪ್ಪನ ಮಾತುಗಳನ್ನು ಪಾಲಿಸದೆ ಹೋದೆನಲ್ಲಾ! ’ ಎಂದು ಚಿಂತಿಸಿದನು. ಚೆನ್ನ ರಾಮನಿಗೆ ರತ್ನಾಜಿಯು ಮನಸೋತು ಅನ್ಯಾಯದಿಂದ

ಆವನನ್ನು ಕೊಲ್ಲಿಸಿದಳು. ಆ ಪಾಪಿಯ ಮೇಲಣ ಮೋಹದಿಂದ ರಾಮ ನನ್ನು ಕೊಲ್ಲಿಸಿ ಪಾಪಕ್ಕೆ ಒಳಗಾಗಿರುವೆನು. ಈಗ ಕುಮ್ಮಟದುರ್ಗಕ್ಕೆ ಆಪತ್ತು ಬಂದಿರುವುದು. ಇದನ್ನು ಕಾಪಾಡುವವರಾರು?' ಎಂದು ರಾಯನು ಗೋಳಿಡಲು, ಮಂತ್ರಿಯು 'ನಿನ್ನರಸಿ ರತ್ನಾಜಿಯನ್ನು ಕರೆಸಿ ದುರ್ಗದ ಬಾಗಿಲನ್ನು ತೆಗೆಯಿಸಿ ಜೋಡು ತೊಡಿಸಿ ಕುದುರೆಯ ಮೇಲೆ ಕೂಡಿಸಿ ಭಲ್ಲೆಯೇ ಮೊದಲಾದ ಆಯುಧಗಳನ್ನು ಕೊಟ್ಟು, ನೇಮಿಯ ದಂಡನ್ನು ಮುರಿಯಲು ಕಳುಹಿಸು' ಎಂದು ಮರ್ಮಭೇದಕವಾದ ಮಾತು ಗಳನ್ನಾಡಲು, ಹುಣ್ಣಿನ ಮೇಲೆ ಬರೆಹಾಕಿದಂತಾಗಿ, ರಾಯನು 'ಈ ರೀತಿ ನನ್ನನ್ನು ಕಾಕುಮಾಡಬೇಡ. ಈಗ ಮೂಗಿನಮೇಲೆ ಸುಣ್ಣ ಹಚ್ಚಿರುವುದೇ ಸಾಕು. ನಿನ್ನ ಮಾತನ್ನು ಕೇಳದೆ ಲೋಕಾಧಿಪತಿಯಾದ ರಾಮನನ್ನು ಕೊಲ್ಲಿಸಿ ಮಾನಗೇಡಿಯಾಗಿರುವೆನು' ಎಂದು ದೈನ್ಯದಿಂದ ನುಡಿದನು. ಆದರೂ ಬೈಚಪ್ಪನು ಇನ್ನೂ ಹಂಗಿಸುವ ಮಾತುಗಳನ್ನು ಆಡಿದನು. 'ಹೆಂಡತಿಯ ಮಾತೇ ಹಿತವೆಂದು ಅವಳ ಮರುಳು ಮಾತಿಗೆ ನೀನು ಸೋತುದುದರಿಂದ ಸುತ ರಾಮನನ್ನು ಕೊಲ್ಲಿಸಿ ಮೂಲೋಕಕ್ಕೆ ಅಚ್ಚರಿಯಾದ ಕಥೆಯನ್ನು ಮಾಡಿದಳು. ನೇಮಿಯು ತನಗೆ ಪ್ರತಿ ವೀರನಿಲ್ಲೆಂದು ನಮ್ಮ ದುರ್ಗಕ್ಕೆ ಮುತ್ತಿಗೆ ಹಾಕಿರುವನು. ಅಂಥ ಧೀರನು ಪುನಃ ಹುಟ್ಟುವನೆ? ಸತ್ತವರು ಎದ್ದು ಬರುವರೆ? ಮೃತ್ಯು ನುಂಗಿದ ತುತ್ತು ಮರಳಿ ಬರುವುದೆ? ಹೆತ್ತ ಮಗನನ್ನು ಕೊಲ್ಲಿಸಿದ ಅಪಕೀರ್ತಿ ಸೂರ್ಯಚಂದ್ರರಿರುವವರೆಗೂ ಇರುವುದು. ರತ್ನಿಯ ಮಾತನ್ನು ಕೇಳಿ, ಮಣ್ಣನ್ನು ಸಕ್ಕರೆ ಎಂದು ನೀನು ಮುಕ್ಕಿದೆ. ಈಗ ದುಃಖಿಸಿ ಅತ್ತರೆ ರಾಮನು ಬರುವನೆ?' ಎಂದು ಮಂತ್ರಿಯು ನುಡಿಯಲು, ಅರಸು ರಕ್ಕಸನಾದರೆ ಮಂತ್ರಿಯು ಹೆಬ್ಬುಲಿಯಾಗುವಂತೆ 'ನಾನೊಮ್ಮೆ ನುಡಿದ ಮಾತಿಗೆ ಯೋಚಿಸದೆ ಮಗನ ಕೊರಳನ್ನು ಮುರಿ ಸಿದೆಯಲ್ಲಾ' ಎಂದು ರಾಯನು ನಿಟ್ಟುಸಿರು ಬಿಡಲು, 'ರಾಜನ ಮಾತನ್ನು ಮಂತ್ರಿಯು ಮೀರಿದನೆಂಬ ಅಪಕೀರ್ತಿ ಬರುವುದೆಂಬ ಭಯ ದಿಂದ ಪರಾಕ್ರಮಿ ರಾಮನನ್ನು ಕೊಲ್ಲಿಸಿದೆನು. ಮಗನ ಹಂಬಲವನ್ನು ಬಿಟ್ಟು ಹೇರಳವಾಗಿ ಕನಕ ವಸ್ತ್ರಗಳನ್ನು ವೆಚ್ಚಮಾಡು. ಹೊನ್ನಿನಾಸೆಗೆ

ಪುತ್ರರಂತೆ ಕಾದುವ ವೀರರುಂಟು. ನಿನ್ನ ಕಣ್ಣುಗಳು ದಣಿಯುವಂತೆ ಯುದ್ಧಮಾಡಿಸುವೆನು’ ಎಂದು ಮಂತ್ರಿಯು ನುಡಿದನು. ‘ಬೈಚಪ್ಪ, ನೀನು ನನ್ನನ್ನು ಈ ರೀತಿ ಕಾಡಬೇಡ. ಆಡು ಹುಲಿಯ ಮೇಲೆರಗಿ ಕೊಲ್ಲುವುದುಂಟೆ? ಸಾಮ್ರಾಜ್ಯದೊಡೆಯನಾದ ಸುಲ್ತಾನನ ಅಪಾರವಾದ ಸೈನ್ಯಕ್ಕೆ ನಾಡಸೈನಿಕರು ಇದಿರಾಗುವರೆ?’ ಎಂದು ಹೇಳುತ್ತಿರುವಾಗ, ಬಾದೂರಖಾನನನ್ನು ತಂದೊಪ್ಪಿಸದಿದ್ದರೆ ಕಾಳಗಕ್ಕೆ ಸಿದ್ಧವಾಗಬೇಕೆಂದು ಭಟರು ಬಂದು ಹೇಳಿದರು.

‘ಸೇನೆಯನ್ನು ಸಂವರಿಸಿ ಕಾಳಗಕ್ಕೆ ಅನುವಾಗು; ನಳಿನಪತ್ರದೊಳಗಿರುವ ನೀರಿನಂತೆ ಕುಮ್ಮಟದುರ್ಗವು ತುರುಕರ ಮುತ್ತಿಗೆಯಿಂದ ತಳಮಳಿಸುತ್ತ ಭಯಗೊಂಡಿರುವುದು’ ದುರ್ಗವು ಎಂದಿಗೂ ಉಳಿಯುವುದಿಲ್ಲ. ತುರುಕರು ಒಂದು ಸುತ್ತಿನ ಕೋಟೆಯನ್ನು ವಶಮಾಡಿಕೊಂಡು ಹುಲಿಮುಖದ ಬಾಗಿಲೊಳಗೆ ಬಂದು ನಿಂತಿರುವರು; ಸೇವಿಯ ಕಡೆಯವರು ನಮ್ಮನ್ನು ಮೂದಲಿಸುತ್ತ ಅಂಬಿನ ಮಳೆಗರೆಯುತ್ತ ನಿಂತಿರುವರು’ ಎಂದು ಬೈಚಪ್ಪನು ಹೇಳುತ್ತ ಕಂಬನಿ ಸುರಿದು ಕಂಪಿಲರಾಯನನ್ನು ಸಂತೈಸಿ ಮತ್ತೂ ಹೇಳತೊಡಗಿದನು. ಧೀರ ಕಂಪಿಲರಾಯನೇ, ನೀನು ಎದ್ದು ಏಳು ಅಂತಸ್ತಿನ ಉಪ್ಪರಿಗೆಯನ್ನೇರಿ ನೋಡುತ್ತಿರು. ದೊಡ್ಡ ಕಾಳಗವನ್ನು ಹೂಡಿ ತುರುಕರ ದಂಡನ್ನು ಹೆದ್ದೊರೆಯ ವರೆಗೆ ಓಡಿಸುವೆನು. ರಕ್ತದ ಕಾಲುವೆಯನ್ನು ಹರಿಸುವೆನು. ಮರುಳುಗಳು ಕೂಡ ಭಲಾ ಎನ್ನುವಂತೆ ಮಾಡುವೆನು’ ಎಂದು ಕಂಪಿಲರಾಯನನ್ನು ಉಪ್ಪರಿಗೆಯ ಮೇಲಕ್ಕೆ ಏರಿಸಿ ತಾನು ದುರ್ಗದ ಹೊರಗೆ ಹೊರಟು ರಾಮೇಶನ ಗುಡಿಯ ಬಳಿಗೆ ಬಂದನು. ವಾದ್ಯಗಳು ಮೊಳಗುತ್ತಿರಲು ಪ್ರಧಾನಿ ಬೈಚಪ್ಪನು ರಾಮೇಶನಿಗೆ ಕಾಣಿಕೆಯನ್ನೊಪ್ಪಿಸಿ ಅಡ್ಡಬಿದ್ದು ಕೈಮುಗಿದು ನೆಲಮಾಳಗಿಗೆ ಬಂದು ಕುರಿ ಕೋಣಗಳ ಬಲಿಗಳನ್ನು ಕೊಡಿಸಿದನು. ಏಳಯ್ಯ ‘ರಾಯರ ಗಂಡ, ಕುಮ್ಮಟದುರ್ಗವು ತಳಮಳಗೊಂಡು ಕಂಗೆಡುತ್ತದೆ. ನಿಮ್ಮ ತಂದೆಗೆ ದುರ್ಗವನ್ನು ರಕ್ಷಿಸುವುದಾಗಿ ಭಾಷೆಕೊಟ್ಟು ಬಂದಿರುವೆನು, ಎಂದು ಮಂತ್ರೀಶನು ನುಡಿಯಲು, ಕಾಟಣ್ಣನ ಸಂಗಡ ಚತುರಂಗ, ಪಗಡೆಯಾಡುತ್ತಿದ್ದ ರಾಮನು ಪ್ರಧಾನಿಯು ಬಂದ ಕಾರಣವನ್ನು ಕೇಳಿದನು.

ತುರುಕರು ಕುಮ್ಮಟದುರ್ಗಕ್ಕೆ ಬಂದು ಮುತ್ತಿರುವರು. ನಿಮ್ಮ ತಂದೆಗೆ ಹಾನಿಯು ಪ್ರಾಪ್ತವಾಗಿದೆ. ನೀನು ಬಂದು ದುರ್ಗವನ್ನು ಕಾಪಾಡಿ ತಂದೆಯ ಮರ್ಯಾದೆಯನ್ನು ಕಾಪಾಡಬೇಕು ಎಂದು. ಇದ್ದ ಸಂಗತಿಯನ್ನು ಮರೆಮಾಚದೆ ಹೇಳಲು, ರಾಮನು 'ಸಂಸಾರದ ಸುಖದುಃಖ ನನಗೆ ಸಾಕಾಗಿದೆ. ದೊರೆತನವು ಬೇಕಾಗಿಲ್ಲ. ನನ್ನ ತಂದೆಯು ಪ್ರೀತಿಯ ಹೆಂಡತಿಯ ಮಾತನ್ನು ಕೇಳಿ ನನಗೆ ಕುಹಕವನ್ನೇ ಮಾಡಿದನು. ನನಗೆ ತಂದೆತಾಯಿ ಬಂಧುಬಳಗಗಳಲ್ಲಿ ಹಿಂದುಮುಂದು ನನಗೆ ಯಾರೂ ಇಲ್ಲ. ಆದ್ದರಿಂದ ಕಂದರ್ಪಮರ್ದನ ನಾಗಬಟ್ಟಂಗಿಲಿಂಗನ ಪಾದವನ್ನು ಸೇರುವುದೇ ಲೇಸು ' ಎಂದು ಹೇಳಲು ' ಏಳು ಚನ್ನಿಗರಾಮ, ಏಳು ! ಸಾರಿಕಾಳಮರ್ದನನೆ, ಏಳು, ರಣರಂಗಧೀರ, ಏಳು ! ಕಾಲಮೇಘದಂತೆ ತುರುಬಿರುವ ತುರುಕರನ್ನು ಹಾಳುಮಾಡುವ ಧೀರ, ನೀನಲ್ಲದೆ ಇನ್ನಾರೂ ಇಲ್ಲ. ನೀನು ಏಳದಿದ್ದರೆ ನಿಮ್ಮ ತಂದೆ ಕಂಪಿಲನ ಆಣೆ ನಿನಗಿರಲಿ; ನಿನ್ನ ತಾಯಿ ಹರಿಯಮ್ಮನಾಣೆ ನಿನಗಿರಲಿ' ಎಂದು ಹೇಳುತ್ತಿರುವಾಗ, ಭಟರು ಬಂದು ತುರುಕರು ಪುರವನ್ನು ಮುತ್ತಿರುವರು ಮಂತ್ರಿಯವರು ಬರುವಂತೆ ರಾಯರಪ್ಪಣೆಯಾಗಿದೆ ಎಂದು ಕರೆಯಲು, ಮಂತ್ರಿಯು ಕಡುಗಲಿ ರಾಮನ ಮುಖವನ್ನು ನೋಡಿದನು. ಕೂಡಲೆ ರಾಮನು ಹರ್ಷಿತನಾಗಿ ಕಾಟಣ್ಣನೊಂದಿಗೆ ನೆಲಮಾಳಿಗೆಯಿಂದ ಹೊರಟುಬಂದನು. ಬೈಚಪ್ಪನು ರಾಮನನ್ನು ಕಂಡು ಹಿಗ್ಗಿ ಮುದ್ದಾಡಿ, ಉಳಿದ ಮಾನ್ಯರೊಡನೆ ಹೊರಟನು. ಕಳ್ಳಿಯ ನಾಗ, ಪಂಪಯ್ಯ, ಕಟುಗರ ದ್ಯಾಪ, ಹಂಪ ಮೊದಲಾದವರನ್ನು ಕದನಪ್ರಚಂಡ ರಾಮನಾಥನು ಕರೆದುಕೊಂಡು ಬಂದನು. ಕಂದನ ಕೈಹಿಡಿದು ಬೈಚಪ್ಪನು ತನ್ನ ಅರಮನೆಗೆ ಕರೆದುಕೊಂಡು ಬಂದನು. ಸ್ತ್ರೀಯರು ಚಂದ ಚಂದದ ಆರತಿಯನ್ನೆತ್ತಿ ಹಾಡಿದರು.

ಅರಸುಗುಮರ ಚೆನ್ನಿಗರಾಮನು ತನ್ನ ಆಯುಧಗಳನ್ನು, ಒಡವೆಗಳನ್ನು ತರಿಸಿ ಕಾಲುಗಗ್ಗರ, ಕೊರಳಲ್ಲಿ ಗೆಜ್ಜೆ, ಹೊಳೆಯುವ ಮಾಣಿಕ್ಯದ ಹಲ್ಲಣ, ತಳವುರನ್ನದಪಟೆ, ಮುತ್ತಿನ ಬಾಸಿಂಗಗಳನ್ನು ಧರಿಸಿದನು.

ಭಲ್ಲೆಯನ್ನು ಹಿಡಿದು ಲಕ್ಷ ಕುದುರೆಗಳನ್ನು ಹೊಕ್ಕಲಿಕ್ಕುವೆನೆಂದು ಹೇಳುತ್ತ ಬೊಲ್ಲನನ್ನು ಕರೆಸಿ ಗಂಧಾಕ್ಷತೆಯನ್ನು ಇರಿಸಿ ವಂದಿಸಿ ಕುದುರೆಯನ್ನೇರಿದನು. ಆರು ತಿಂಗಳಿಂದಲೂ ಮೇವು ನೀರನ್ನು ತೊರೆದಿದ್ದ ಬೊಲ್ಲನು ತನ್ನೊಡೆಯ ಚೆನ್ನಿಗರಾಮನು ಬಂದುದನ್ನು ಕಂಡು ಹರ್ಷಿಸಿ ಪಕ್ಷಿಯಂತೆ ಹಾರಿತು. ರಾಮನಿಗೆ ಬೈಚಪ್ಪನು ಜೋಡು ವಜ್ರಾಂಗಿಯ ತಲೆಯ ತಾಳಿ ಮೊದಲಾದುವುಗಳನ್ನು ಕೊಡಿಸಿದನು. ಮಾಯಾಕಾರನಾದ ಬೈಚಪ್ಪನು ರಾಯರಾವುತನೆಂಬ ಬಿರುದನ್ನು ಕೊಟ್ಟು ರಾಮನನ್ನು ಯುದ್ಧಕ್ಕೆ ಅನುವಾಗಿ ನಿಲ್ಲಿಸಲು, ಈ ರಾಯರಾವುತನು ಎಲ್ಲಿಂದ ಬಂದನೆಂದು ಎಲ್ಲರೂ ಕೇಳುವವರಾದರು. ಕಲ್ಯಾಣನಗರಿಯಿಂದ ರಾವುತನು ಬಂದಿರುವನೆಂದು ಹೇಳಿ, ಹೊಸ ರಾವುತನಿಗೆ ಹೆಸರಾದ ಕುದುರೆಯವರನ್ನು ಫೌಜನ್ನಾಗಿ ಮಾಡಿ ಕೊಟ್ಟು ಶೃಂಗಾರ ತೋಟಕ್ಕೆ ಕರೆತಂದನು. ಸುಲ್ತಾನನ ಮಂತ್ರಿ ನೇಮಿಯ ದಂಡಿಗೆ ಎದುರು ಫೌಜನ್ನು ಏರ್ಪಡಿಸಿದನು. ದೇವಿಶೆಟ್ಟಿಯ ಲಿಂಗ, ಬೇವಿನ ಶಿಂಗಯ್ಯ, ಭಾವಸಂಗಮ, ಹಾರೇ ಲಿಂಗ, ಬೆಟ್ಟದ ಸಿಂಗ, ಮರುಳು ಪಾಪ, ತೋಟಗಾರ ದ್ಯಾಪ, ವಿರೂಪ, ಹಾವಳಿಕಾರ ಹಂಪಯ್ಯ, ಮಾದಿಗರ ಹಂಪ, ಸಾದಾನೆ ಬಸವ, ರಾಜಯ್ಯ, ಎನಾಮಲ ಚಿತ್ತ, ಯಾರವೊತು ಗಂಗು, ಉರಿವರೊಳ್ಳಿಯ ನಾಗಣ್ಣ, ಬೂಟಕ ಬೊಮ್ಮ, ಮುದಿಗೊಂಡ್ಲ ಓಬ ಮುಂತಾದವರು, ರಾಮನ ಸಹಾಯಕ್ಕಾಗಿ ಸಿದ್ಧರಾದರು. ಎದುರುಭಟರುಗಳನ್ನು ಮೂದಲಿಸುತ್ತ ಭೇದವಿಲ್ಲದೆ ಬಾನೂರ ಖಾನನು ರಾಮನನ್ನು ಸೋಲಿಸಲು ಬಂದನು. ಇವರನ್ನೆಲ್ಲ ಯುದ್ಧಕ್ಕೆ ಸನ್ನದ್ಧರನ್ನಾಗಿ ಮಾಡಿ ಶೃಂಗಾರತೋಟದಲ್ಲಿರಿಸಿ, ಬೈಚಪ್ಪನು ಬೇಗದಿಂದ ಕಂಪಿಲರಾಯನ ಬಳಿಗೆ ಬಂದು ತನ್ನ ಮಾತಿನ ಮೇಲೆ ಹೊಸ ರಾವುತನು ಬಂದು ಯುದ್ಧಕ್ಕೆ ಸಿದ್ಧನಾಗಿರುವುದನ್ನು ತೋರಿಸಿದನು. ರಾಮನನ್ನು ಹೋಲುವ ಪ್ರತಿವೀರನನ್ನು ಕಾಣೆನು. ಅವನು ಶತ್ರುದಳವನ್ನು ಕಂಡಿದ್ದರೆ, ಅವರ ಮೇಲೆ ತಾಮಸ ಮಾಡುತ್ತಿದ್ದನೆ? ಅಂಥ ರಾಮನು ಪುನಃ ಹುಟ್ಟುವನೆ? ಎಂದು ಕೇಳುತ್ತಿರಲು ಕಾಳಗಕ್ಕೆ ಹೊರಡಲು ಸಿದ್ಧರಾಗಿದ್ದ ಯಕ್ಕಟಿಗರು ನೇಮಿಯ ಬಲವನ್ನು ಮುರಿದು ಶತ್ರುಗಳನ್ನು ಸೆರೆ ತರುವೆ

ವೆಂದು ಹೇಳುತ್ತ ಪ್ರಯಾಣ ಬೆಳೆಸಿದರು. ಅರಿರಾಯಮರ್ದನ ಹೊರಟನೆಂದು ರಣಭೇರಿಗಳು ಮೊಳಗಿದವು.

ಕೋಟೆಯಿಂದ ಹೊರಹೊರಟು ತುರುಕರ ಮೇಲೇರಿ ನಡೆದರು. ಹೊಸ ರಾವುತನ ಮುಂಗುಸನ್ನೆಯಿಂದ ರಾವುತರು ಸಾಗರದಂತೆ ಮುಂದೆ ನಡೆದರು. ಬಾದೂರಖಾನನು ಶತ್ರುಗಳ ದಂಡಿನ ಮೇಲೆ ಬಿದ್ದು ಅವನನ್ನು ಮೂದಲಿಸಿದನು. ಓಡದಿರಿ ಹೇಡಿಗಳಿರಾ ಎಂದು ಬಾದೂರಖಾನನು ತುರುಕರ ಆನೆಯ ಹಿಂದಿನ ಮೇಲೆ ಎರಗಿದನ. ಭಾಪು! ಭಾಪುರೇ! ಮಜರೇ! ಧೀರ ಬಾದೂರಖಾನ ಎಂದು ಹೊಗಳಿದರು. ನೇಮಿಯೂ ಖಾನರು ಮೇಲೆ ಬೀಳುತ್ತಿರುವ ಶತ್ರುಗಳ ತಂಡವನ್ನು ನೋಡಿ ರಾಮನು ಸತ್ತ ಸಂಗತಿಯು ಸಟೆ ಎಂದು ಹೇಳುತ್ತ ತಾನೇ ಯುದ್ಧಕ್ಕೆ ಸಿದ್ಧನಾಗಿ ಎದುರಿಗೆ ಬಂದನು. ಕಂಪಿಲರಾಯನ ವೀರ ಮಾನ್ನೆಯರು ನಾಲ್ಕು ಭಾಗವಾಗಿ ವಿಂಗಡಿಸಿಕೊಂಡು ತಮ್ಮ ಸಾಹಸಗಳನ್ನು ತೋರುತ್ತ ವೈರಿಶಿರಗಳನ್ನು ತೂರುತ್ತ ಒಂದು ದಿಕ್ಕಿನಲ್ಲಿ ಮುಂದುವರೆದರು. ಇನ್ನೊಂದು ದಿಕ್ಕಿನಲ್ಲಿ ಹೊಸ ರಾವುತನ ಪರಿವಾರವು ಶತ್ರುಗಳ ತಲೆಗಳನ್ನೆಲ್ಲ ಸವರುತ್ತ ನಡೆಯಿತು. ರಾಮನು ಬೊಲ್ಲನನ್ನು ಏರಿ ಮಲ್ಲಾನ್ತರನ್ನೂ ಖಾನರನ್ನೂ ಕೊಲ್ಲುತ್ತ ಸಾಗಿರಲು ಉಭಯರ ಕಡೆಯವರು ತಲೆಗಳನ್ನು ಕತ್ತರಿಸುತ್ತ ಕೈಕಾಲುಗಳನ್ನು ಮುರಿಯುತ್ತ ಹೋರಾಡಿದರು. ನೇಮಿಯ ದಂಡು ಸಂಹಾರ ಮಾಡುತ್ತ ಮುಂದೆ ನಡೆದಿರಲು, ಕಾಲಭೈರವನಂತೆ ಶತ್ರುಗಳ ತಲೆಗಳನ್ನು ಚಂಡಾಡುತ್ತ ನಿಂತಿರುವ ಏಕೈಕ ವೀರನನ್ನು ನೋಡಿ, ನೇಮಿಖಾನನು ಸ್ತಂಭಿತನಾದನು. ಇವನಾರಿರಬಹುದು? ಎಂದು ದೃಷ್ಟಿಸಿ ನೋಡಿ ಕೆಲವರು ರಾಮನಹುದೆಂದು ಮತ್ತೆ ಕೆಲವರು ಅಲ್ಲವೆಂದು ವಾದಿಸಿ ಕೊನೆಗೆ ರಾಮನಾಥನೇ ಅಹುದೆಂದು ನಿರ್ಧರಿಸಿ, ಕಂಗೆಟ್ಟಿರುವ ಕಳ್ಳರು ಕನ್ನವನ್ನಿಕ್ಕಿ ಮನೆಯನ್ನು ಹೊಕ್ಕು ಕೆಮ್ಮಿದಂತಾಯಿತು ನಮ್ಮ ಪಾಡು. ಇನ್ನೇನು, ಓಡಿಹೋಗೋಣವೆಂದರೆ ರಾಮನು ಬಿಡುವನೆ? ಎನ್ನುತ್ತ ತಮ್ಮತಮ್ಮೊಳಗೆ ಮಾತನಾಡುತ್ತಿದ್ದರು. ನೇಮಿಯ ಎಡಬಲದಲ್ಲಿದ್ದ ಕಡುಗಲಿ ವೀರ ರಾಹುತರು ಸಾವಕಾಶಮಾಡದೆ ರಾಮನನ್ನು ಕಡಿದು ಯಮಪುರಿಗೆ

ಕಳುಹಿಸಿ, ಬಾದೂರಖಾನನನ್ನು ಎಡಗೈ ಕಟ್ಟಿ ತರುವೆವು ಅಪ್ಪಣೆಯನ್ನು ದಯಪಾಲಿಸೆಂದು ಸೇಮಿಯ ಸುತ್ತಲು ಕಾರ್ಮುಗಿಲಿನಂತೆ ಖಾನರು ಸೇರಿ ಪ್ರಾರ್ಥಿಸುತ್ತಿದ್ದರು. ಇದನ್ನು ರಾಮನು ಕಂಡು ತನ್ನ ಕುದುರೆಯನ್ನೇರಿ ತನ್ನವರನ್ನೆಲ್ಲ ಒಟ್ಟಿಗೆ ಸೇರಿಸಿಕೊಂಡು, ಸುಲ್ತಾನನ ಮಂತ್ರಿ ಸೇಮಿಯೊಡನೆ ಯುದ್ಧಮಾಡಲು ಓಡಿಬಂದು ಮುತ್ತಿದನು. ಕುದುರೆ ಕಾಲಾಳು ಮತ್ತು ಆನೆಗಳು ಎದುರಾದವು. ರಾಮನು ವೈರಿಗಳನ್ನು ಸದೆ ಬಡಿಯುತ್ತಿರುವಾಗ ತುಂಬುರಖಾನನು ತನ್ನ ಚತುರಂಗ ಬಲದಿಂದ ಕೂಡಿ ರಾಮನನ್ನು ಮೂದಲಿಸುತ್ತ, ಖಡ್ಗವನ್ನು ಝಳಪಿಸುತ್ತ ರಾಮನಿಗೆ ಎದುರಾದನು. ರಾಮನು ನಿಲ್ಲು ಎಂದು ಹೇಳುತ್ತ ತಂಬುರಖಾನನ ಮೇಲೆ ಬೀಳಲು ಉಭಯ ದಳಗಳಿಗೆ ರಣರಂಗವಾಯಿತು. ರಾಮನ ಖಡ್ಗದೇಟಿಗೆ ಅವನ ನಡುಬೆನ್ನು ತೊಡೆಗಳು ಮುರಿದವು; ನೆತ್ತಿಯ ಚಿಪ್ಪು ಹಾರಿ, ಗೋಣು ಮುರಿದು ತುಂಬುರಖಾನನು ನೆಲಕ್ಕುರುಳಿ ಸತ್ತು ಹೋದನು. ತುಂಬುರಖಾನನು ಮಡಿದುದನ್ನು ಕಂಡು ಅವನ ಪರಿವಾರವು ಹುಯ್ಯಲು ಹಾಕುತ್ತ ರಾಮನು ಸಿಕ್ಕಿದನೆಂದು ಅವನನ್ನು ಮುತ್ತಿದರು. ರಾಮನ ಕಡೆಯವರು ರಾಮನ ಸಹಾಯಕ್ಕೆ ಬಂದರು. ರಾಮನೂ ಅವನ ಕಡೆಯವರೂ ಅಬ್ಬರಿಸಿ ಹೊಡೆಯಲು ಮೆದುಳು ಚಿಪ್ಪೊಡೆದು ಕರುಳು ಹರಿದು ಅರಿಬಲವು ಸಾಯುತ್ತಿರಲು ಭೂತ ಪ್ರೇತಗಳಿಗೆ ಹಬ್ಬವಾಯಿತು. ರಾಮನು ಸತ್ತ ಸುದ್ದಿಯನ್ನು ಕೇಳಿ ಬಂದೆವು. ಆದರೆ ರಾಮನು ಎದುರಿಗೆ ಇರುವನು. ಅವನು ಸತ್ತಿರುವುದು ಸಟೆಯಾಯಿತು. ಭೂಮಿಯನ್ನು ಹೊಕ್ಕರೂ ಅವನು ನಮ್ಮನ್ನು ಬಿಡುವುದಿಲ್ಲ ಎಂದು ಸೇಮಿಯ ಕಡೆಯವರು ಹೇಳುತ್ತ ಹುಲ್ಲನ್ನು ಕಚ್ಚಿ, ಹುತ್ತವನ್ನೇರಿ ನಿಂತಲ್ಲಿ ನಿಲ್ಲದೆ ಓಡಿಹೋದರು. ರಾಮನು ಬಿಡದೆ ವೈರಿಗಳನ್ನು ಬೆನ್ನಟ್ಟಲು, ಬೆಟ್ಟ, ಗವಿ, ಗಂವ್ಹರಗಳಲ್ಲಿ ಬಿದ್ದು, ದಾರಿಕಾಣದೆ ಓಡಿದರು. ಬಾದೂರಖಾನನು ಅವರನ್ನು ಹೆದ್ದೊರೆತನಕ ಅಟ್ಟಿ, ತೋರೆಗಲ್ಲು ಬಾದಾಮಿಯ ಮುಂದೆ ಕುದುರೆಯನ್ನಿಳಿದನು. ರಾಮನು ಐದಾರು ಗಾವುದ ಶತ್ರುಗಳನ್ನಟ್ಟಿ ಕುಮ್ಮಟದುರ್ಗಕ್ಕೆ ಹಿಂದಿರುಗಿದನು.

‘ಇಂದು ನಿನ್ನ ಹೊಸ ರಾವುತನನ್ನು ಕಂಡೆನು. ನಿನ್ನ ಭಂಟನಾದ

ಅವನು ಧೀರನಹುದು. ರಣದೊಳಗೆ ವೀರನಹುದು. ಸೇವಿಯ ದಂಡಿನ ಮೇಲೇರಿ ಹೋಗಿ ಕೈಚಳಕದಿಂದ ಬಾಣಗಳನ್ನು ಬಿಟ್ಟು ಶತ್ರುಗಳನ್ನು ಸೋಲಿಸಿ ಓಡಿಸಿದನು. ಅವನು ರಾಮನಲ್ಲದೆ ಮತ್ತಾರೂ ಅಲ್ಲ. ಆ ಸುರತಾಳರಾಯಮರ್ಧನನು ಆರೆಂಬುದನ್ನು ಪ್ರೀತಿಯಿಂದ ತಿಳಿಸು ಎಂದು ಕಂಪಿಲರಾಯನು ನುಡಿಯಲು, ಸತ್ತವರು ಎದ್ದು ಬರುವರೇ ? ಮೃತ್ಯು ನುಂಗಿದ ತುತ್ತು ಬರುವುದೆ! ಅವನು ಹೊಸ ರಾವುತನೆಂದು ಬೈಚಪ್ಪ ಮಂತ್ರಿಯು ಕಂಪಿಲರಾಯನಿಗೆ ಹೇಳಿದನು. ಮಂತ್ರಿಗಳ ಶಿರೋಮಣಿಯೇ, ಅವನನ್ನು ಕರೆಸು ಎಂದು ಹೇಳಲು, ಯುದ್ಧದಿಂದ ತಿರುಗಿಬಂದು ಬೇರೆ ಕುದುರೆಯನ್ನೇರಿ ಊರ ಫೇರಿಯನ್ನು ಮಾಡುತ್ತಿದ್ದ ರಾವುತನನ್ನು ಕರೆತರಲು, ಮಂತ್ರಿಯು ಆಳುಗಳನ್ನು ಅಟ್ಟಿದನು. ರಾಮನು ಕುದುರೆ ಇಳಿದು ಒಂದು ತಂದೆಗೆ ಕಾಣಿಕೆ ಇತ್ತು ಸೆರೆಹಿಡಿದವರನ್ನು ತಂದೊಪ್ಪಿಸಿ ಬೈಚಪ್ಪನ ಅಪ್ಪಣೆಯಂತೆ ತಲೆಯ ಟೊಳಿಯನ್ನು ವಜ್ರಾಂಗಿಯನ್ನು ತೆಗೆಯಲು ಮಗನ ಮುಖವನ್ನು ನೋಡಿ ಕಂಬನಿಯನ್ನು ದುಃಖದಿಂದ ಸುರಿಸಿ ರೋದಿಸಿದನು. ತಂದೆಯ ದುಃಖವನ್ನು ನೋಡಿ ರಾಮನು ತನ್ನ ತಂದೆಯನ್ನು ಸಮಾಧಾನ ಮಾಡಿ ನನ್ನ ಮನಸ್ಸನ್ನು ತಿಳಿಯದೆ ಚಿಕ್ಕಮ್ಮನಿಗಾಗಿ ನನ್ನ ಕೊಂದಿಯಾ? ಅಲ್ಲಲ್ಲ—ರಕ್ತದ ಕಾಯವನ್ನು ತೊಳೆದು ಉತ್ತಮ ವಜ್ರಾಂಗಿಯನ್ನು ಮಾಡಿಸಿದಂತಾಯಿತು, ಎಂದು ಹೇಳಿ ನಮಸ್ಕರಿಸಲು ಹತ್ತು ಸಾವಿರ ಹೊನ್ನನ್ನು ದಾನಮಾಡಿ ಮುತ್ತಿನ ನಿವಾಳಿಯನ್ನು ಚಲ್ಲಿಸಿದನು. ತಾಯಿ ಹರಿಯಮ್ಮ ಸಹೋದರಿಯರಾದ ಮಾರಮ್ಮ, ಸಿಂಗಮ್ಮನವರು ಬಂದು ರಾಮನನ್ನು ನೋಡಿ ಅಳುತ್ತಿರಲು ಆ ಸಮಯಕ್ಕೆ ಸರಿಯಾಗಿ ರಾಮಲಾದೇವಿಯು ನಾಲ್ಕುಜನ ಸವತಿಯರೊಂದಿಗೆ ಬಂದು ರಾಮನ ಪಾದಕ್ಕೆ ರಗಿದರು. ರಾಮನು ಎಲ್ಲರನ್ನೂ ಸಮಾಧಾನಮಾಡಿದನು. ಬಿರುದಿನ ಕಾಳೆಗಳು ಭೋರ್ಗರೆದವು.

ಕಹಳೆಗಳ ಧ್ವನಿ ಕೇಳಿ ರತ್ನಾಜಿಯು ಅದು ಏನು ಸಂಗತಿ ಎಂದು ತಿಳಿದುಕೊಂಡು ಬರುವಂತೆ ತೊತ್ತಿ ಸಂಗಿಯನ್ನು ಕಳುಹಿಸಿದಳು. ಸಂಗಿ ನೋಡಿಕೊಂಡು ಬಂದು ಸತ್ತ ರಾಮನು ಬಂದನೆಂಬ ಸುದ್ದಿಯನ್ನು

ಹೇಳಿದೊಡನೆ ಕಂಪಿಲರಾಯನು ಮಾಡಿದ ಮಾಟವನ್ನು ನೋಡೆಂದು ಸಂಗಿಗೆ ಹೇಳಿ ತಾನು ಕೊರಳಿಗೆ ನೇಣನ್ನು ಹೂಡಿ ಪ್ರಾಣವನ್ನು ಕಳೆದುಕೊಂಡಳು. ತನ್ನೊಡೆಯಳು ಸತ್ತುದನ್ನು ಕಂಡು ಸಂಗಿಯು ಕಠಾರಿಯಿಂದ ಇರಿದುಕೊಂಡು ಮಡಿದುಬಿದ್ದಳು. ಈ ಸಂಗತಿಯನ್ನು ಅಲ್ಲಿದ್ದ ಸ್ತ್ರೀಯರು ಓಡಿ ಬಂದು ಕಂಪಿಲರಾಯನಿಗೆ ತಿಳಿಸಿದರು. ರಾಯನು ಅಲ್ಲಿ ಇದ್ದವರನ್ನೆಲ್ಲ ಅವರವರ ಮನೆಗೆ ಕಳುಹಿದನು. ರತ್ನಾಜಿ ಸತ್ತುದು ಒಳ್ಳೆಯದಾಯಿತು ಎಂದು ಹೇಳಿ ಅವಳ ಶವವನ್ನು ಅಗ್ನಿಯೊಳಗೆ ಎಳೆದು ಹಾಕಿದರು. ಇತ್ತ ನೇಮಿಯು ಎಲ್ಲ ಸಮಾಚಾರವನ್ನು ಸುಲ್ತಾನನಿಗೆ ಅರುಹಿದನು.

ಕಂಪಿಲರಾಯನು ತನ್ನ ಮಗ ರಾಮನಿಗೆ ರಾಜ್ಯಪಟ್ಟಾಭಿಷೇಕ ಮಾಡಬೇಕೆಂದು ಯೋಚಿಸಿ ಮಂತ್ರಿ ಬೈಚಪ್ಪನನ್ನು ಕರೆಯಿಸಿ ಆಲೋಚನೆ ಮಾಡಿದನು. 'ನನಗೆ ಎಪ್ಪತ್ತು ವರುಷವಾಯಿತು. ಮುಪ್ಪಾಗಿದ್ದೇನೆ. ಈ ದೇಹವು ಸ್ಥಿರವಲ್ಲ. ಧುರಧೀರ ರಾಮನಿಗೆ ಪಟ್ಟಾಭಿಷೇಕವನ್ನು ಕಟ್ಟಿ ಅವನು ರಾಜ್ಯವಾಳುವುದನ್ನು ನೋಡಿ ಹರ್ಷಿಸಬೇಕು. ಇದಕ್ಕೆ ತನ್ನ ಅಭಿಪ್ರಾಯವನ್ನು ತಿಳಿಸಬೇಕು' ಎಂದು ಮಂತ್ರಿ ಬೈಚಪ್ಪನನ್ನು ಕೇಳಿದನು. ಹಾಗೆ ಮಾಡುವುದು ಯುಕ್ತವೆಂದು ಹೇಳಿ ಮಂತ್ರಿಯು ರಾಜಪುರೋಹಿತರನ್ನೂ, ವೇದಪಾಠಕರನ್ನೂ, ವಿದ್ಯಾರಾಧ್ಯರನ್ನೂ ಜೋಯಿಸರನ್ನೂ ಇತರ ಬ್ರಾಹ್ಮಣರನ್ನೂ ಕರೆಸಿ, ಅವರಿಗೆ ಗಂಧಾಕ್ಷತೆಯನ್ನೂ, ಖರ್ಜೂರ ಕದಳಿ ಫಲಗಳನ್ನೂ ಮುಂದಿಟ್ಟು ಹರಕೆಯನ್ನು ಹೊಂದಿ ಪಟ್ಟಾಭಿಷೇಕಕ್ಕೆ ಶುಭದಿವಸವನ್ನು ನಿಶ್ಚಯಿಸಬೇಕೆಂದು ಪ್ರಾರ್ಥಿಸಲು ಅಂದೇ ಶುಭದಿವಸವೆಂದೂ, ಅಮೃತಯೋಗ ಶುಭಲಗ್ನಗಳು ಕೂಡಿವೆಯೆಂದೂ ಹೇಳಿದರು. ಕೂಡಲೇ ವಸ್ತ್ರಾಭರಣ ಪುಷ್ಪಗಳೆಲ್ಲವನ್ನೂ ತರಿಸಿದನು. ಅರಸುಮಕ್ಕಳನ್ನೂ, ರಾವುತರನ್ನೂ, ಹಳಬರನ್ನೂ ಕರಸಿದನು. ರಾಮನನ್ನೂ ಕರಸಿ, ವಸ್ತ್ರಾಭರಣಗಳಿಂದ ಅಲಂಕರಿಸಿ, ಛತ್ರಿಚಾಮರಗಳನ್ನು ಹಿಡಿಸಿ, ಬುದ್ಧಿವಾದವನ್ನು ಹೇಳಿ ರಾಮನಿಗೆ ಪಟ್ಟಾಭಿಷೇಕವನ್ನು ಮಾಡಿದನು. ಮಂತ್ರಿ ಬೈಚಪ್ಪಸಹಿತವಾಗಿ ಅಲ್ಲಿಯ ಸಭಿಕರೆಲ್ಲರೂ ಎದ್ದು ಸಂತೋಷದಿಂದ ಕೈಮುಗಿದರು. ರಾಮ

ನನ್ನು ಹರಸಿ ಬ್ರಾಹ್ಮಣರು ಮಂತ್ರಾಕ್ಷತೆಯನ್ನಿಟ್ಟರು. ಊರನ್ನೆಲ್ಲ ಶೃಂಗಾರಮಾಡಿ ಆನೆಯ ಮೇಲೆ ಸಕ್ಕರೆಯನ್ನು ಹೇರಿ ಊರ ಜನರಿಗೆಲ್ಲ ಹಂಚಿದರು. ರಾಮನು ಬಂದ ಬ್ರಾಹ್ಮಣರಿಗೆ ಕೈಮುಗಿದು ವಂದನೆ ಮಾಡಿ ಹಿಡಿ ಹೊನ್ನು ವೀಳೆಯವನ್ನು ಕೊಟ್ಟು ಕಳುಹಿಸಿದನು. ಸಭೆಗೆ ಬಂದಿದ್ದವರಿಗೆಲ್ಲ ಗಂಧ ವೀಳೆಯವನ್ನು ಕೊಟ್ಟು ಕಳುಹಿಸಿದನು. ತಂದೆ ಕಂಪಿಲರಾಯನ ಪಾದಕ್ಕೆ ಅಡ್ಡಬಿದ್ದು ವಂದನೆಯನ್ನು ಮಾಡಿ ಅರಮನೆಯನ್ನು ಹೊಕ್ಕು ಹರಿಯಾಲದೇವಿಯ ಪಾದಕ್ಕೆರಗಿದನು. ಪರನಾರೀ ಸಹೋದರನಾಗಿ ಸ್ಥಿರಪಟ್ಟವಾಳೆಂದು ಹರಸಿದಳು ಮುತ್ತೈದೆಯರು ಮುತ್ತಿನಾರತಿ ಎತ್ತಿ ಹರಸಿದರು. ಸುತ್ತ ದೇಶಗಳ ರಾಯರನ್ನು ಗೆಲ್ಲೆಂದು ಅಕ್ಕತಂಗಿಯರು ಹರಕೆಹೊತ್ತರು. ರಾಮನು ಅವರೆಲ್ಲರಿಂದಲೂ ಹರಕೆಯನ್ನು ಹೊಂದಿ ಅರಮನೆಗೆ ಬಂದು ತನ್ನ ವಲ್ಲಭೆಯರ ಮೇಳದಲ್ಲಿ ಮಂಚದಲ್ಲಿ ಮಲಗಿ ಸುಖಿಸಿದನು.

ಮಾರನೆಯ ದಿನ ರಾಮನು ಉದಯಕಾಲದಲ್ಲಿ ಎದ್ದು ಊಟವನ್ನು ಮಾಡಿ ಸದರಿಗೆ ಬಂದು ಕುಳಿತನು. ಕರಣಿಕ ಲಿಂಗನನ್ನು ಕರಸಿ ತನ್ನ ಸೈನ್ಯದ ಎಣಿಕೆಯನ್ನು ಮಾಡಬೇಕೆಂದು ತಿಳಿಸಲು, ಕರಣಿಕನು ಕಟ್ಟಿಗೆಕಾರರನ್ನು ಕಳುಹಿಸಿ ಮಂದಿಯನ್ನೆಲ್ಲ ಕರಸಿದನು. ಧೀರ ಮಾನ್ನೆಯರು ತಮ್ಮ ಮಂದಿಯೊಡನೆ ಶೃಂಗಾರವಾಗಿ ಸಭೆಗೆ ಬಂದರು. ಬೂಟಕ ಬೊಮ್ಮನು ನೂರಾರು ಮಂದಿಗಳೊಡನೆ ಕೈಮುಗಿಯಲು, ಇವನು ಧಿಟ್ಟನೆಂದು ಹೇಳಿ ರಾಮನು ಕೊರಳಪದಕವನ್ನು ಕೊಟ್ಟನು. ಇದೇ ರೀತಿ ಬಂದವರಿಗೆ ಅವರವರ ಯೋಗ್ಯತೆಗೆ ತಕ್ಕಂತೆ ಮರ್ಯಾದೆ ಮಾಡಿದನು. ಮುನ್ನೂಲ ಮಾಚನು ಇನ್ನೂರು ಆಳು ಸಹಿತ ಬರಲು, ಬಲ್ಲಿದನೆಂದು ಹೊನ್ನ ಸರಪಳಿಯನ್ನೂ, ನೂರಾಳು ಸಹಿತ ಬಂದ ಗಡಿಯ ಕೋಟೆ ದೇವನು ಅರಿಪಡೆಯನ್ನು ಹೊಕ್ಕು ಕಡಿಯುವವನೆಂದು ಕಡಕು ಕಂಠಮಾಲೆಯನ್ನೂ, ಅನುವಾದ ಐವತ್ತು ಭಂಟರೊಡನೆ ಬಂದ, ಯನುಮುಲ ಚಿತ್ತನಿಗೆ ಮೊನೆಗಾರ ಭಂಟನೆಂದು ಕನಕಮಣಿಯನ್ನೂ, ಅರವತ್ತು ಮಂದಿ ಬಿಲ್ಲಿನ ಬಂಟರೊಡನೆ ಬಂದು ನಿಂತ ಮರುಳೇಯ ಪಾಪನಿಗೆ ಪರಬಾಲಾಂತಕನೆಂದು ಚೌಕಳಿಯನ್ನೂ, ನಾನೂರು ಭರಚಿಯ ಮಂದಿ

ಯೊಡನೆ ಎರಬೇತು ಕಾಮುಸು ಬರಲು ಅವನಿಗೆ ಬಿರುದು ಬಾಹುಲಿ ಸರಪಳಿಯುನ್ನೂ, ಹೊಳೆಯುನ್ನು ಕಾಯುವ ಇನ್ನೂರು ಮಂದಿಯೊಡನೆ ತುಳವರ ಹಿರಿಯನು ಬಂದು ಕೈ ಮುಗಿಯಲು ಅವನಿಗೆ ಬಿಳಿಯ ಮುತ್ತಿನೊಂಟಿ ಕಡಗಗಳನ್ನೂ, ಇನ್ನೂರು ಮಂದಿಯೊಡನೆ ಬಂದ ಮಲಗೇತಿ ತಿಪ್ಪನಿಗೆ ಹಳದಿ ಬಿರಿದು ಮುತ್ತಿನೊಂಟಿ ಕಡಗಗಳನ್ನೂ, ಮುನ್ನೂರು ಮಂದಿಯೊಡನೆ ಬಂದು ಕೈಮುಗಿದ ತೋಟಗಾರ ದೇವನಿಗೆ ತುರುಕರನ್ನು ಆಟವಾಡಿಸುವನೆಂದು ತಡಕುಮುರಡಿ ಸರಪಳಿಯುನ್ನೂ, ಇನ್ನೂರು ಮುಕ್ಕಣ್ಣ ಬಿಲ್ಲೆಯರ ಮಂದಿಯೊಡನೆ ಬಂದು ಕೈಮುಗಿದ ಒಕ್ಕಲಿಗರ ಮುದ್ದನಿಗೆ ತುರುಕರ ಮೇಲೆ ಇವನು ರಕ್ಕಸನೆಂದು ಹೊಕ್ಕಳಗಂಟಿಯುನ್ನೂ, ಮಾದಿಗ ಹಂಪನಿಗೆ ಐದೂರು ಉಂಬಳಿಯುನ್ನೂ, ಇನ್ನೂರು ಈಟಿಯುವರೊಡನೆ ಬಂದ ಅಸಗೋಡು ಬಸವನಿಗೆ ತುರುಕರನ್ನು ದೆಸೆಗೆಡಿಸುವನೆಂದು ಜವಳಿಯುನ್ನೂ, ಅಕ್ಕಸಾಲೆಯ ಚಿಕ್ಕನು ಮೂರೂರು ಬಾಣಗಾರರಿಂದ ಕೂಡಿ ಬಂದನು. ಮುನ್ನೂರು ಹಳೆಯ ಮಂದಿಯೊಡನೆ ಮಲೆಯ ಕಾಯುವ ಕಾಟನಾಯಕನು ಬಂದು ವಂದಿಸಲು ಉಡುಗೊರೆಯುನ್ನೂ, ನೂರು ಬೋಣದ ಮಂದಿಯೊಡನೆ ಬಾಣದ ಬಸವನು ಬಂದು ವಂದಿಸಲು ಜೂಣಿ ಕಾಳಗವನ್ನು ಹಿಡಿಸುವನೆಂದು ಹಿಡಿಹೊನ್ನನ್ನೂ, ದಳಧೂಳಿ ಮಾದನು ವಳಿಕಾವಲಿ ನಾನೂರು ಮಂದಿಯೊಡನೆ ಬಂದು ವಂದಿಸಲು ತುರುಕರ ತಲೆಯುನ್ನು ಹೆದರದೆ ತರುವನೆಂದು ಒಳೆಯುನ್ನೂ, ಮುನ್ನೂರು ಮುಕ್ಕಣ ಭರಚಿಯುವರೊಡನೆ ಒಕ್ಕಪಾಲನು ಒರಲು ರಕ್ಕಸಗಾಳ ಮುನ್ನಿಯನೆಂದು ಲೆಕ್ಕಮಾಡದೆ ಹೊನ್ನನ್ನೂ, ನೂರು ಜನ ಕತ್ತಿಗಾರಿಕೆಯವರೊಡನೆ ಗುತ್ತಿಯ ಕಾಚನು ಬಂದು ಕೈಮುಗಿಯಲು ಕತ್ತಲೊಳಗೆ ಕಗ್ಗೊಲೆಯ ಕದಿಯುವನೆಂದು ಮುತ್ತಿನಾಭರಣವನ್ನೂ, ಮುನ್ನೂರು ಗಾಜಿನವರೊಡನೆ ಬಂದ ಗುಜ್ಜಲ ಓಬನಿಗೆ ಭಾವುರಿಯುನ್ನೂ, ಮುನ್ನೂರು ಮುಕ್ಕಣ್ಣ ಭಲ್ಲೆಯುವರೊಡನೆ ಬಂದು ವಂದಿಸಿದ ರಕ್ಕಸ ಮಾದನಿಗೆ ಖಾನರನ್ನು ಸಿಟ್ಟುಗೆಡಿಸುವವನೆಂದು ಪಚ್ಚೆಯ ಕಡಗವನ್ನೂ, ತಂಬಿಮರದ ಬಿಲ್ಲಿನ ಮುನ್ನೂರು ಮಂದಿಯೊಡನೆ ಬಂದು ವಂದಿಸಿದ ಕುಂಭಕೋಣದ ವೀರನಿಗೆ ಅಂಬಿಗೊಬ್ಬೊಬ್ಬರನ್ನು ಕೆಡಹುವನೆಂದು

ಜೋಳಿಗೆ ತುಂಬ ಹೊನ್ನನ್ನೂ, ನೂರು ಮಂದಿ ಬಿಲ್ಲಿನವರೊಡನೆ ಅಗ್ಗದ ಮಾಡನು ಒಂದು ಕೈಮುಗಿಯಲು ಕದ್ದು ಕಗ್ಗೊಲೆಮಾಡಿ ಕುದುರೆಯ ತರುವನೆಂದು ಹುಗ್ಗಿ ತುಪ್ಪಕ್ಕೆ ಒಗಲು ಊಟ ಮಾಡಲು ಒಂದು ಊರನ್ನೂ, ನೂರು ಆಳಿನೊಂದಿಗೆ ಕುಂದಿರ್ಪಿಯ ಪಾಲನು ಒಂದು ಮಂದಿ ಸಲು, ಹಿಂದುಮುಂದಾದ ಖಾನರನ್ನು ಕಡಿಯುವನೆಂದು ಜಂದ್ರುಗಾವಿಯ ಬಿರುದನ್ನೂ, ಕಾಲುಸರದ ನೂರು ಮಂದಿಯೊಡನೆ ರಾಮದುರ್ಗದ ರಾಮನು ಬಂದು ವಂದಿಸಲು ಹೊನ್ನು ಜವಳಿಗಳನ್ನೂ ಕೊಟ್ಟನು. ಈ ರೀತಿ ಎಪ್ಪತ್ತೇಳು ಮಾನ್ಯರಿಗೆ ಉನ್ನತದ ವಸ್ತ್ರಭೂಷಣಗಳನ್ನೂ ಬಿರುದು ಬಾವಲಿಗಳನ್ನೂ ಕಾಲುಸರಗಳನ್ನೂ ಮೇಲಾಭರಣಗಳನ್ನೂ ಕೊಟ್ಟು ಸುರ್ಯಾದಿಸಿ ಇನ್ನೂ ಹೆಚ್ಚು ಹೆಚ್ಚು ದಳವನ್ನು ಕಟ್ಟ ಬೇಕೆಂದು ಅವರಿಗೆ ರಾಮನು ಹೇಳಿದನು.

ಕುದುರೆ ಫೌಜಿನವರನ್ನೂ, ಮದಗಜಗಳ ಹಿಂಡಿನ ರಾವುತರನ್ನು ಬರಮಾಡಿಕೊಂಡನು. ಆರೇಯ ಚಾರಾಮರಾಯನ ಮಕ್ಕಳು ಸಾವಿರ ಕುದುರೆಯವರೂ, ದೂರದ ದಾರಿಯನ್ನು ಕಾಯುವವರೂ ನೂರು ಭಾರಿ ಕುದುರೆಯವರೂ, ದೇವಿಶೆಟ್ಟಿಯ ಲಿಂಗ, ಭಾವಸಂಗಮದೇವ, ಜೀವ ರತ್ನದ ಮಲ್ಲದೇವ ಮೊದಲಾದವರೂ, ಯಾವಾಗಲೂ ರಾಮನನ್ನು ಕಾದುಕೊಂಡಿರುವ ಸಾವಿರ ಕುದುರೆಯವರೂ, ಹಂಡೆಯ ರಾವುತರೂ, ನೇಮಿಯ ಕೋಟೆಯನ್ನು ಪೊಕ್ಕು ಕಾದುವಾಗ ತಡಮಾಡದೆ ಅವರ ಮೇಲೇರಿ ಬಿದ್ದು ದಂಡನ್ನು ಕಡಿಯುವ ಶೂರರ ದಳದ ವಳಲಾಯುಡ ಸಾವಿರ ಕುದುರೆಯವರೂ, ಒಣ್ಣಕ್ಕೊಂಡು ಕುದುರೆಯುಳ್ಳ ಕಾಟಣ್ಣನ ಸಾವಿರ ಕುದುರೆಯವರೂ, ರಾಮನಾಥನ ಬಳಿಗೆ ಬಂದು ಕೈಮುಗಿದು ನಿಲ್ಲಲು ರಾಮನಾಥನು ಸಂತೋಷದಿಂದ ಕುದುರೆಯ ಫೌಜನ್ನು ಅವ ಲೋಕಿಸಿ ಎಣಿಕೆಯನ್ನು ಮಾಡಿಸಿದನು. ಉಡುಗೊರೆ ವೀಳ್ಯವನ್ನು ಬೊಕ್ಕಸದ ನಾಣ್ಯವನ್ನೂ ಕೊಟ್ಟು ಸನ್ಮಾನಿಸಿದನು.

ಕರಣಿಕ ಮಂತ್ರಿ ಲಿಂಗನನ್ನು ಕರಿಸಿ ಕುದುರೆದಳ ಮತ್ತು ಕಾಲಾಳುಗಳ ಸೈನ್ಯದ ಗಣಿಕೆಯನ್ನು ಕೇಳಲು ಒಟ್ಟು ಹತ್ತು ಸಾವಿರ ಕುದುರೆಯೂ, ಮೂವತ್ತು ಸಾವಿರ ಕಾಲುಮಂದಿಯೂ ಇರುವರೆಂದು

ಲಿಂಗಣ್ಣನು ಬಿನ್ನವಿಸಿದನು. ಈ ಸೈನ್ಯವು ನಮಗೆ ಸಾಲದು; ಸುಲ್ತಾನನ ಕಡೆಯವರು ಪುನಃ ದಾಳಿ ಇಡಲು ಬರುವುದು ಖಂಡಿತವಾದ ವಿಷಯ ವಾಗಿದೆ; ಕಲಹದಲ್ಲಿ ಅವನನ್ನು ಸೋಲಿಸದಿದ್ದರೆ ನಮಗೆ ಕೇಡು ತಪ್ಪದು; ಆದ್ದರಿಂದ ಒಂದು ಲಕ್ಷ ಕಾಲಾಳು ಮತ್ತು ಮೂವತ್ತು ಸಾವಿರ ಕುದುರೆ ಯವರುಳ್ಳ ಫೌಜನ್ನು ಕಟ್ಟಬೇಕೆಂದು ಮಂತ್ರಿ ಬೈಚಪ್ಪನಿಗೆ ತಿಳಿಸಿ, ಅಲ್ಲಿ ನೆರೆದಿದ್ದ ಮಾನ್ನೆಯರನ್ನೂ ರಾವುತರನ್ನೂ ಕರ್ಪೂರ ವೀಳೆಯಗಳನ್ನು ಉಡುಗೊರೆಗಳನ್ನು ಕೊಟ್ಟು ಅವರಿಗೆ ಅಪ್ಪಣೆ ಕೊಟ್ಟು ಕಳುಹಿಸಿ, ತಾನು ತನ್ನ ಅರಮನೆಗೆ ಹೋದನು.

ಸಂಜೆಯ ಸದರಿಗೆ, ರಾಮನು ಮೈಗಾವಲ ಮಂದಿ ಸಹಿತವಾಗಿ ಬಂದು, ಮಂತ್ರಿಯನ್ನು ಬರಮಾಡಿಕೊಂಡನು. ಸದರಿಗೆ ಕಂಪಿಲರಾಯನು ದಯಮಾಡಿಸಲು ರಾಮನು ತಂದೆಯ ಪಾದಕ್ಕೆರಗಿ ವಂದಿಸಿದನು. ಕಂಪಿಲರಾಯನು ಮಗನನ್ನು ಎತ್ತಿ ಕೂಡಿಸಿ 'ನಾನು ಮುಪ್ಪಿನವನಾದು ದರಿಂದ ರಾಜ್ಯಾಡಳಿತದ ಭಾರವನ್ನು ನಿನಗೆ ಒಪ್ಪಿಸಿದೆನು' ಎಂದು ಹೇಳಿ, ಅಲ್ಲಿ ನೆರೆದಿದ್ದ ಪ್ರಜೆಗಳನ್ನು ಕುರಿತು ತಾನು ಮಗನಿಗೆ ಪಟ್ಟಾಭಿಷೇಕ ಮಾಡಿದ ಸಂಗತಿಯನ್ನು ತಿಳುಹಿದನು. ಶೆಟ್ಟಿ ಮಾನ್ನೆಯರೂ, ಗೌಡ ಒಕ್ಕಲುಗಳೂ ಪಟ್ಟದ ಉಡುಗೊರೆಯನ್ನು ತಂದರು. ರಾಮನು ಬಂದವ ರನ್ನು ಆದರಿಸಿ ಕುಳ್ಳಿರಿಸಿ ಮನ್ನಿಸಿದನು. 'ನಿಮ್ಮಿಂದ ನಮಗೆ ದೊರೆತನ ಉಂಟಾಗಿದೆ. ನಿಮ್ಮನ್ನು ಕಾಪಾಡುವ ಭಾರವು ನನ್ನದು' ಎಂದು ಗಂಧ ವೀಳೆಯಗಳನ್ನು ಕೊಡಿಸಿದನು.

ರಾಮನ ಅಪ್ಪಣೆಯಂತೆ ಮಂತ್ರಿ ಬೈಚಪ್ಪನು ಸುತ್ತಣ ರಾಜ್ಯದ ನಾಡಗೌಡರಿಗೆ ಓಲೆಗಳನ್ನು ಬರೆಯಿಸಿ ಕರೆಸಿದನು. ಮತ್ತೊಂದು ದಿನ ನಡೆದ ಸಭೆಗೆ ನಾಡಗೌಡರುಗಳು ದಯಮಾಡಿಸಿದ್ದರು. ಇಕ್ಕೇರಿ ಸೀಮೆಯ ಒಕ್ಕಲು ಗೌಡರು ಲೆಕ್ಕದ ಕುಲಕರಣೀಕರು ಬಂದು ವಕ್ಕಳ ಒಂದು ಲಕ್ಷದ ಹನ್ನೊಂದು ಸಾವಿರ ಹೊನ್ನು, ಉಡುಗೊರೆ, ಹಣ್ಣುಫಲ ಗಳನ್ನು ಒಪ್ಪಿಸಿದರು. ಕಲ್ಯಾಣ ಕಲಬುರ್ಗಿ ಸೀಮೆಯ ಗೌಡರು ನಾಡಿ ಗರೂ ಒಂದು ಐದುಲಕ್ಷ ಹೊನ್ನನ್ನು ಭೂವಲ್ಲಭ ರಾಮನಿಗೆ ಒಪ್ಪಿಸಿ ದರು. ಸಾಗರದ ಸೀಮೆಯ ಶೆಟ್ಟರೂ ಪ್ರಜೆಗಳೂ ಕರಣಿಕರೂ

ಐದು ಲಕ್ಷ ಹೊನ್ನು ಮತ್ತು ಉಡುಗೊರೆಗಳನ್ನು ಒಪ್ಪಿಸಿ ಇನ್ನು ಮುಂದೆ ನಮ್ಮನ್ನು ಸಲುಹಬೇಕೆಂದು ಕೈಮುಗಿದರು. ತೊರಗಲ್ಲು ಬಾದಾಮಿ ಸೀಮೆಯ ಗೌಡರು ಮರಿಗೌಡರು ಮತ್ತು ಮಂದಿಗೌಡರು ಎರಡು ಸಾವಿರ ಹೊನ್ನನ್ನು ಬಿರುದಾಂಕ ರಾಮನಿಗೆ ಒಪ್ಪಿಸಿದರು. ಸೀರ್ಯದ ಸೀಮೆಯ ನಾರಾಯಣಗೌಡ, ನಾಗಗೌಡರು, ಬಂದು ಆರು ಲಕ್ಷ ಹೊನ್ನು ಉಡುಗರೆಯನ್ನೂ ಫಲಗಳನ್ನೂ ದೊರೆಯ ಪಟ್ಟಗಾಣಿಕೆಯಾಗಿ ಅರ್ಪಿಸಿದರು. ಬಸವಾ ಪಟ್ಟಣದ ಹಸುಮಗ ಮುದ್ದಸಗೌಡನು ಹೊಸ ಕಾಣಿಕೆ ಐವತ್ತು ಸಾವಿರ ಹೊನ್ನನ್ನು ಅಸಮಬಲ ರಾಮನಿಗೆ ಒಪ್ಪಿಸಿದನು. ಆದವಾನಿ ಸೀಮೆಯ ರಡ್ಡಿ ಕರಣೀಕರು ಕುಮ್ಮಟಕ್ಕೆ ಬಂದು ಹದಿನೆಂಟು ಸಾವಿರ ಹೊನ್ನೂ ಮೊಹರುಗಳನ್ನೂ ಮುದದಿಂದ ರಾಮನ ಮುಂದಿಟ್ಟು ಉಡುಗರೆಯನ್ನು ಒಪ್ಪಿಸಿದರು. ಈ ರೀತಿಯಾಗಿ ನಾನಾ ಸೀಮೆಗಳಿಂದ ಬಂದ ಗೌಡರೂ, ಶೆಟ್ಟರೂ ಮುಂತಾದವರನ್ನೆಲ್ಲ ಮನ್ನಿಸಿ ಅವರಿಗೆ ಉಡುಗೊರೆಗಳನ್ನು ಕೊಟ್ಟು ಕಳುಹಿಸಿದನು. ಅರಮನೆಗೆ ಬಂದು ಕಾಣಿಕೆಯಾಗಿ ಬಂದ ಹೊನ್ನನ್ನು ತಂದೆಯ ಮುಂದಿಟ್ಟು, ತಂದೆಯ ಪಾದಕ್ಕೆರಗಿ ವಂದಿಸಿ ತನ್ನ ಮಂದಿರವನ್ನು ಹೊಕ್ಕನು.

ಗುತ್ತಿಯ ಜಗದಪ್ಪರಾಯನು ತನಗೆ ಬಂದ ಓಲೆಗೆ ಉತ್ತರವನ್ನು ಬರೆಯಿಸಿ ಉಡುಗೊರೆ ಸಹಿತವಾಗಿ ಚರರ ಸಂಗಡ ಕಳುಹಿಸಿದನು. ರಾಮನು ಚರರನ್ನು ಬರಮಾಡಿಕೊಂಡು ಮಾವಾಜಿಯವರ ಯೋಗಕ್ಷೇಮವನ್ನು ವಿಚಾರಿಸಿದನು. ಚರರು ಜಗದಪ್ಪರಾಯನು ಕ್ಷೇಮವಾಗಿ ಇರುವುದಾಗಿಯೂ ಪಟ್ಟಾಭಿಷೇಕವಾದ ಸಂತೋಷಕ್ಕೆ ಪಟ್ಟದ ಉಡುಗೊರೆಯನ್ನು ಪೆಟ್ಟಿಗೆ ತುಂಬ ಬಂಗಾರವನ್ನು ಕಳುಹಿಸಿರುವುದಾಗಿಯೂ, ಕಂಪಿಲರಾಯನಿಗೆ ಪಟ್ಟಾವಳಿ ಕಳುಹಿಸಿರುವುದಾಗಿಯೂ, ಮುತ್ತಿನ ಆಭರಣಗಳನ್ನು ಮಗಳು ರಾಮಲಾದೇವಿಗೆ ಪಿಂಗಿಲಾದ ಜೇಪಿ ನಾಣ್ಯಗಳನ್ನೂ ಕೊಟ್ಟು ಕಳುಹಿಸಿರುವುದಾಗಿಯೂ ಹೇಳಿ, ರಾಮನಿಗೆ ವಂದನೆ ಮಾಡಿ ಒಪ್ಪಿಸಿದರು. ಸಂತುಷ್ಟನಾದ ರಾಮನು ಒಂದವರಿಗೆ ಬಂದೊಂದು ಸಾವಿರ ಹೊನ್ನು ಉಡುಗೊರೆಗಳನ್ನು ಕೊಟ್ಟು ಹಿಂದಕ್ಕೆ ಕಳುಹಿಸಿದನು.

ಚತುರ ರಾಮನು ಉದಯದೊಳೆದ್ದು ಮುಖಮಜ್ಜನಗಳನ್ನು

ತೀರಿಸಿ, ನಾಮವನ್ನು ಧರಿಸಿ, ಜಟ್ಟಂಗಿ ರಾಮೇಶನಿಗೆ ವಂದಿಸಿ ಪಟ್ಟ-ಸಾಲೆಗೆ ಬಂದು ಮಂತ್ರಿ ಬೈಚಪ್ಪನನ್ನು ಕರೆಸಿದನು. ಜಟ್ಟಂಗಿಗಿರಿಗೆ ಹೋಗಿ ಮೃತ್ಯುಂಜಯನೂ ಚಂದ್ರಶೇಖರನೂ ಆದ ಜಟ್ಟಂಗಿ ರಾಮೇಶನ ದರುಶನವನ್ನು ಪಡೆದು ಸಂತರ್ಪಣೆಯನ್ನು ಮಾಡಿ ಉಂಡುಟ್ಟು ಬರಬೇಕು. ತಂದೆ ಮಕ್ಕಳು ಸಹಿತವಾಗಿ ಕುಟುಂಬಯಾತ್ರೆ ಮಾಡಬೇಕು. ಆದ್ದರಿಂದ ಅಪ್ಪನವರ ಕೂಡ ಸಂಗತಿಯನ್ನು ತಿಳಿಸಿ ಎಲ್ಲ ಸಿದ್ಧತೆಗಳನ್ನು ಮಾಡೆಂದು ತಿಳಿಸಿದನು. ಮಂತ್ರಿ ಬೈಚಪ್ಪನು ಮಹಾಸಂತೋಷವನ್ನು ಹೊಂದಿ ಭೂಮೀಶ ಕಂಪಿಲರಾಯನ ಮನೆಗೆ ಬಂದು ಕುಮಾರನು ಹೇಳಿದ ಪ್ರೇಮದ ಸಂಗತಿಯನ್ನು ತಿಳುಹಿಸಲು ರಾಯನು ಆನಂದ ಹೊಂದಿದನು.

ಮುಕ್ಕಣ್ಣನ ನೈವೇದ್ಯಕ್ಕೆ ಕೂಡಲೆ ಅಕ್ಕಿ, ಬೇಳೆ, ಗೋದಿಹಿಟ್ಟು, ಸಂಬಾರ, ಸಕ್ಕರೆ, ಬೆಲ್ಲ, ಹಸನಾದ ಅಡಿಕೆ, ವೀಳೆಯದೆಲೆ, ಕರ್ಪೂರ, ಖರ್ಜೂರ ಫಲ ಮುಂತಾದುವುಗಳನ್ನು ಕಳುಹಿಸಿದನು. ಹಾಲು ಮೊಸರಿಗೆ ರಾಯನ ಸ್ವಂತ ಕಂಪಳವೇ ಸಾಗಿಸಲ್ಪಟ್ಟಿತು. ಕಬ್ಬಿನ ಹಾಲನ್ನು ಕೊಡಗಳಲ್ಲಿ ತುಂಬಿಸಿ ಕಳುಹಿಸಿದನು. ಬೊಕ್ಕಸದಿಂದ ಜವಳಿಯನ್ನೂ ಹೊನ್ನುಗಳನ್ನೂ ಮುಕ್ಕಣ್ಣನ ಪಾದಕಾಣಿಕೆಗಾಗಿ ತೆಗೆದುಕೊಂಡನು. ಪರಿವಾರದವರನ್ನು, ಕಟ್ಟಿಗೆಯವರನ್ನು ಮೋಪು ಸಾಗಿಸಿಕೊಂಡು ಮುಂದಾಗಿ ಹೋಗುವಂತೆ ಆಜ್ಞೆಮಾಡಿದನು. ಹತ್ತು ಖಂಡುಗ ಅಕ್ಕಿ, ಐದು ಖಂಡುಗ ಬೇಳೆ, ಮುತ್ತಿನ ಸರದ ಸಣ್ಣಕ್ಕಿ, ಪುನಗುರಾಜ ಗಿಣಿಮೂಗಿನಕ್ಕಿ ಮುಂತಾದ ಹೇರುಗಳನ್ನು ಉಗ್ರಾಣದಿಂದ ತೆಗೆಸಿ ಕಳುಹಿಸಿದನು. ತುಪ್ಪ, ಎಣ್ಣೆ, ಕಡಲೆ, ಹುರುಳಿ, ಬಿದಿರಕ್ಕಿ, ಅರಿಶಿನ, ಶುಂಠಿ, ಕೊಬ್ಬರಿ, ಪರಿಪರಿಯ ಸಂಬಾರ ಹೇರುಗಳನ್ನು ಹೊತ್ತುಕೊಂಡು ಅರಮನೆಯ ಸಾಪಿರ ಎತ್ತುಗಳು ಜಟ್ಟಂಗೀಶನಿಗೆನೆಡೆಗೆ ನಡೆದವು.

ರಾಮನು ಹಡಪದ ಬೊಲ್ಲಗನ ಸಹಿತ ತಂದೆಯ ಬಳಿಗೆ ಬಂದು ವಂದಿಸಿ ಪ್ರಯಾಣ ಬೆಳೆಸಬೇಕೆಂದು ಕೇಳಿಕೊಂಡನು. ತಾಯಿಗೆ ವಂದಿಸಲು, ಹರಿಯಮ್ಮನು ಜಗದಪ್ಪರಾಯನನ್ನು ಕರಿಸಬೇಕೆಂದು ಹೇಳಿದಳು.

ಕೂಡಲೆ ರಾಮನು ಹೊನ್ನಂದಣಗಳನ್ನು ಉಡುಗರೆಯನ್ನು ಕಳುಹಿಸಿ ಆತ್ತೈಮಾಪಂದಿರನ್ನು ಕರೆಸಿದನು.

ಕಂಪಿಲರಾಯನು ಹರಿಯಮ್ಮನೊಂದಿಗೂ, ರಾಮನು ಸರಸಿಜ ವದನೆಯರೊಡನೆಯೂ, ಹೆಮ್ಮಕ್ಕಳೂ ಮಾರಮ್ಮ, ಸಿಂಗಮ್ಮ ಸಹಿತ ವಾಗಿ ಪಲ್ಲಕ್ಕಿಗಳನ್ನು ಏರಿ ಹೊರಟರು. ಅರಸುಮಕ್ಕಳು, ಹೆಮ್ಮಕ್ಕಳು, ಹಿರಿಯ ಸೊಸೆ ಕಂಚಲಮ್ಮನೂ ಹೊರಟರು. ಎಲ್ಲರು ಇಂದುಶೇಖರ ಪಂಪಾಪತಿಯ ಗುಡಿಗೆ ಬಂದು ಇಳಿದರು. ಸ್ನಾನಪಮಾಡಿ ಮಡಿಯುಟ್ಟು ಮೇಣೆಗಳಲ್ಲಿ ಕುಳಿತು ವಿರೂಪಾಕ್ಷನ ಗುಡಿಗೆ ಬಂದು ಎಲ್ಲರೂ ಅಡ್ಡ ಬಿದ್ದು, ಹಿಡಿಹೊನ್ನ ಕಾಣಿಕೆಯನ್ನೊಪ್ಪಿಸಿ ಗಂಧಪ್ರಸಾದವನ್ನು ಸ್ವೀಕರಿ ಸಿದರು. ಆ ದಿನ ಅಲ್ಲಿಯೇ ತಂಗಿ ಜಂಗಮರಿಗೆ ಪರುವಮಾಡಿ ಲಕ್ಷ ಬ್ರಾಹ್ಮಣರಿಗೆ ಸಮಾರಾಧನೆ ಮಾಡಿಸಿ ದಕ್ಷಿಣೆ ತಾಂಬೂಲವನ್ನು ಕೊಟ್ಟು ಮಂತ್ರಾಕ್ಷತೆಯನ್ನು ಸ್ವೀಕರಿಸಿದರು. ಎಲ್ಲರೂ ಉಂಡುಟ್ಟು ಸಂತೋಷದಿಂದ ಮುಂದಕ್ಕೆ ತೆರಳಿದರು.

ಅಲ್ಲಿಂದ ಭೀಮೇಶನ ಗುಡಿಗೆ ಹೋಗಿ ಕಂಪಿಲರಾಯನು ರಾಮ ಸಹಿತ ಭೀಮೇಶ್ವರನನ್ನು ಪೂಜೆಮಾಡಿ ಹಿಡಿ ಹೊನ್ನುಕಾಣಿಕೆಯನ್ನು ಕೊಟ್ಟು ಪರುವವನ್ನು ಮಾಡಿಸಿ ದೇವರ ಪ್ರಸಾದವನ್ನು ಹೊಂದಿ ಮುಂದಕ್ಕೆ ಹೊರಟರು.

ಅಲ್ಲಿಂದ ಎಲ್ಲರೂ ಹೊರಟು ನಿಲ್ಲದೆ ಪ್ರಯಾಣವನ್ನು ಮಾಡಿ ಜಟ್ಟಂ ಗಿಯ ಕೆಳಗೆ ಉಲ್ಲಾಸದಿಂದ ಬೀಡುಬಿಟ್ಟರು. ಕೂಡಲೆ ದಂಡು ಪಾಳೆಯ ವನ್ನು ಕಟ್ಟಿದರು. ಅಲ್ಲಿಯೇ ಬೀದಿ ಬಜಾರ ಅಂಗಡಿಗಳು ಹುಟ್ಟಿದವು. ಗುಡಿತೋರಣಗಳಿಂದ ಬೀಡೆಲ್ಲ ಶೃಂಗಾರವಾಯಿತು. ಆ ಗಿರಿಯ ಮಧ್ಯ ದಲ್ಲಿ ದೇವಸಮುದ್ರವೆಂಬ ರಮಣೀಯವಾದ ಕೆರೆಯೂ, ಕಸ್ತೂರಿಯ ಮೃಗವೂ ಇರುತ್ತಿದ್ದವು. ಎಲ್ಲರೂ ಅಭ್ಯಂಗ ಸ್ನಾನಮಾಡಿದರು; ಗಿರಿ ಯನ್ನೇರಿದರು. ಕಂಪಿಲನು ಮಲ್ಲಿಕಾರ್ಜುನ ಜಟ್ಟಂಗೀಶನ ಗುಡಿಗೆ ಬಂದನು. ಸಕಲರೂ ಬಂದು ಅಡ್ಡಬಿದ್ದು ಕಾಣಿಕೆಯನ್ನೊಪ್ಪಿಸಿ, ಅಕ ಳಂಕ ಮಹಿಮನನ್ನು ಭಜಿಸಿ, ಭಕ್ತಿಯಿಂದ ಹಣ್ಣು ಫಲಗಳಿಂದ ಪೂಜಿಸಿ ಮುಕ್ತಿಪಥವನ್ನು ಕೇಳಿಕೊಂಡರು. ಪಂಚಮುಖ ಪರಮಾತ್ಮನಿಗೆ ಪಟ್ಟಾ

ಭಿಷೇಕವನ್ನು ಮಾಡಿಸಿ ಪಂಚಭಕ್ಷ್ಯಪರಮಾನ್ನವನ್ನು ಒಪ್ಪಿಸಿ ಪಂಚಾರತಿಗಳನ್ನು ಬೆಳಗಲಾಯಿತು. ಕಂಪಿಲರಾಯನು ಬ್ರಾಹ್ಮಣರಿಗೂ ಲಕ್ಷ್ಯ ಜಂಗಮರಿಗೂ ಸಮಾರಾಧನೆಯನ್ನು ಮಾಡಿಸಿ ದಕ್ಷಿಣೆಯನ್ನು ಕೊಟ್ಟನು. ಅಲ್ಲಿಗೆ ಬಂದಿದ್ದ ಗುರಿಕಾರರೂ, ಯಕ್ಕಟಿಗರೂ ಹಳೆಯ ಮಂದಿಗಳೂ, ರಾವುತರೂ, ಮರಿಮಕ್ಕಳೂ, ಮಾನ್ಯರು ಮೊದಲಾದವರಿಗೆ ಪಡಿರೋಜುಗಳನ್ನು ಕೊಡುವಂತೆಯೂ, ಧೊರೆಯ ಮಕ್ಕಳಿಗೆ ಉಲುಪೆಯನ್ನೂ, ಅಲ್ಲಿ ನೆರೆದಿರ್ದ ಜನರು ಪರಿವಾರಕ್ಕೆಲ್ಲ ಒಂದೊಂದು ಹೊನ್ನನ್ನು ಕೊಡುವಂತೆ ಕರಣೀಕ ಲಿಂಗಯ್ಯನಿಗೆ ರಾಮನು ಆಜ್ಞೆಮಾಡಿದನು. ಹರಿಯಮ್ಮನು ಹೆಮ್ಮಕ್ಕಳು ಸಹಿತವಾಗಿ ಪರಿಪರಿಯಾಗಿ ಪೂಜೆಮಾಡಿದಳು. ರಾಮನಿಗೆ ದೊರೆತನವು ಸ್ಥಿರವಾಗಲಿ ಎಂದು ಪಟ್ಟಂಗಿರಾಮೇಶನ ಹರಕೆಯನ್ನು ಬೇಡಿದಳು. ರಾಮನು ದೇವದೇವನನ್ನು ಧ್ಯಾನಿಸಿ, 'ನನ್ನನ್ನು ನರಜನ್ಮದೊಳಗೆ ಏತಕ್ಕೆ ಹುಟ್ಟಿಸಿದೆಯೋ ದೇವ! ಧೊರೆಯ ಹೊಟ್ಟೆಯಲ್ಲಿ ಹುಟ್ಟಿ ಧರಿಸಿರುವ ಬಿರುದುಗಳನ್ನು ರಣರಂಗದಲ್ಲಿ ದಕ್ಕಿಸಿಕೊಳ್ಳುವಂತೆ ಮಾಡಿ, ನಿನ್ನ ಬಳಿಗೆ ನನ್ನನ್ನು ಕರೆದೊಯ್ಯುವಂತೆ ಮಾಡು ಈ ದೇಹವು ನಂಬಿಗೆಯದಲ್ಲ; ಎಂದಿದ್ದರೊಂದು ದಿನ ನಾಶವಾಗಲೇಬೇಕು; ಒಂದು ದಿವಸ ನಿನ್ನ ಸಮೀಪಕ್ಕೆ ಬರಲೇಬೇಕು ಕಂಡನ ಮೇಲೆ ದಯಮಾಡಿ ಕರುಣಿಸಬೇಕು.' ಎಂದು ಬೇಡಿಕೊಂಡ ಭಕ್ತಿಗೆ ಶಿವನು ಮೆಚ್ಚಿ ಬೇಡಿದ ವರಗಳನ್ನು ಮತ್ತು ನೆತ್ತಿಯ ಮೇಲಿನ ಮಲ್ಲಿಗೆ ಪುಷ್ಪವನ್ನು ಪ್ರಸಾದವಾಗಿ ಕರುಣಿಸಿದನು. ಮೃತ್ಯುಂಜಯನು ಕೊಟ್ಟ ಪ್ರಸಾದವನ್ನು ರಾಮನು ಕೈಲಿ ತೆಗೆದುಕೊಂಡು ಮಂಡೆಯಲ್ಲಿ ಧರಿಸಿದನು. ಎಲ್ಲರೂ ಕೂಡಿ ಪ್ರಯಾಣಮಾಡಿ ಕುಮ್ಮಟದುರ್ಗವನ್ನು ಬಂದು ಸೇರಿ ತಮ್ಮ ತಮ್ಮ ಮನೆಗೆ ತೆರಳಿದರು.

ರಾಮನು ಉದಯದಲೆದ್ದು ತಂದೆತಾಯಿಗಳ ಬಳಿಗೆ ಬಂದು ವಂದಿಸಿ 'ನಿಮ್ಮ ಅಂತರಂಗವನ್ನು ತಿಳಿದಿರುವೆನು; ಸೈನ್ಯವನ್ನು ಹೆಚ್ಚಿಸುವುದಕ್ಕೆ ಸಿಟ್ಟನ್ನು ಮಾಡದಿರಿ; ನೀವು ನನಗೆ ಪಟ್ಟಾಭಿಷೇಕ ಮಾಡಿದ ಸಂಗತಿಯು ದಿಲ್ಲಿಗೆ ತಲುಪುವುದು. ಸುಲ್ತಾನನ ಮಗಳು ನನ್ನನ್ನು ಮದುವೆಯಾಗಬೇಕೆಂದು ನೇಮದಿಂದ ಕಾದಿರುವಳು. ಅವಳು ತನ್ನ ತಂದೆಗೆ ಈ ವಿಷಯ

ವನ್ನು ಪರಿಪರಿಯಾಗಿ ಹೇಳಿಕೊಳ್ಳುವಳು. ರಾಮನನ್ನು ಹಿಡಿಯಾಳ ಮಾಡಿ ಹಿಡಿದು ತರಿಸೆಂದು ತಂದೆಯನ್ನು ಬೇಡುವಳು. ಸುಲ್ತಾನನಿಂದ ಆಜ್ಞಾಪ್ತನಾಗ ನೇಮಿಯು ಪುನಃ ದಂಡು ತೆಗೆದುಕೊಂಡು ಬಂದು ನಮ್ಮ ದುರ್ಗವನ್ನು ಮುತ್ತುವನು. ಇದು ಖಂಡಿತ. ನೇಮಿಯನ್ನು ವಧೆ ಮಾಡದ ಹೊರತು ರಾಜಕಾರ್ಯವು ನಿಲ್ಲುವುದೇ ಇಲ್ಲ. ನಾನು ಪರನಾರೀ ಸಹೋದರನೆಂಬ ಬಿರುದನ್ನು ಧರಿಸಿದ್ದೇನೆ. ಅದನ್ನು ದಕ್ಕಿಸಿಕೊಳ್ಳುವ ಬಗೆಯನ್ನು ಚಟ್ಟಂಗೀಶನೇ ಬಲ್ಲನು' ಎಂದು ಬಿನ್ನಹ ಮಾಡಿ ಮುಂದಿನ ಕಾರ್ಯವನ್ನು ಮಾಡಲು ಅವರ ಅಪ್ಪಣೆಯನ್ನು ಹೊಂದಿ ಹಿಂದಿರುಗಿ ಮನೆಗೆ ಬಂದು ಪ್ರೀತಿಯ ಸತಿಯರೊಂದಿಗೆ ಚಪ್ಪರಮಂಚದಲ್ಲಿ ಸುಖಿಸಿ ನಿದ್ರೆಗೈದನು.

ರಾಮನು ಒಪ್ಪದಿಂದ ಊಟ ಮಾಡಿದ ಮೇಲೆ ಶೃಂಗರಿಸಿಕೊಂಡು ನೀಲನನ್ನು ಏರಿ ಬೈಚಪ್ಪ ಮತ್ತು ಮುಖ್ಯ ಮನ್ನೆಯರನ್ನು ಸಂಗಡ ಕರೆದುಕೊಂಡು ಹೊಸಮಲೆದುರ್ಗವನ್ನು ಹೊಕ್ಕನು. ಅಸಹಾಯ ಶೂರರಿಗೆ ಪುಷ್ಪ ಗಂಧ ತಾಂಬೂಲವನ್ನು ಹಂಚಿ ಹೊನ್ನನ್ನು ಕೊಟ್ಟು ಮರ್ಯಾದಿಸಿದನು. ಬಿದ್ದಿದ್ದ ಕೋಟೆಯನ್ನು ಸರಿಪಡಿಸಿ, ಭಂಡಾರವನ್ನು ನೋಡಿಕೊಂಡು ಒಕ್ಕಲಿಗರಿಗೆ ಬುದ್ಧಿವಾದವನ್ನು ಹೇಳಿ ಹೊರಟನು. ಸಂಚಾರ ಹೊರಟು ಎಲ್ಲ ಗಡಿಗಳನ್ನು ನೋಡಿಕೊಂಡು, ಭದ್ರವನ್ನು ಮಾಡಿದನು. ಬೊಕ್ಕಸ ಕಣಜಗಳನ್ನು ಬಲಿಸಿದನು. ಕೆರೆಗಳನ್ನು ಕಟ್ಟಿಸಿದನು. ಹೂವಿನ ತೋಟಗಳನ್ನು ಹಾಕಿಸಿದನು. ಸೆರೆಯಲ್ಲಿದ್ದವರನ್ನು ಬಿಡಿಸಿದನು. ಹಸಿದು ಬಂದವರಿಗೆ ಅನ್ನವನ್ನಿಡುವ ಏರ್ಪಾಡು ಮಾಡಿದನು. ಇವನ ರಾಜ್ಯವು ಕೆರೆ, ಕಾಲುವೆ, ಭಾವಿಗಳಿಂದ ರಂಜಿಸುತ್ತಿತ್ತು. ದೇಶದೇಶಗಳಿಂದ ಮಕ್ಕಳುಗಳನ್ನು ಕರೆಸಿ, ತನ್ನ ದೇಶದಲ್ಲಿ ಪ್ರೇಮದಿಂದ ನೆಲಸುವಂತೆ ಅಪ್ಪಣೆ ಮಾಡಿ ಸುಖದಿಂದ ಬಾಳುವಂತೆ ಪ್ರಜೆಗಳಿಗೆ ಮನ್ನಿಸಿದನು. ಕೊಟ್ಟ ಮಾತಿಗೆ ತಪ್ಪುವುದಿಲ್ಲವೆಂದೂ, ಗಟ್ಟಿಯಾಗಿ ದುಡಿದು ಸುಖದಿಂದ ಇರುವಂತೆ ಪರದೇಶದಿಂದ ಬಂದವರಿಗೆ ಭರವಸೆ ಕೊಟ್ಟನು. ಅಲ್ಲಲ್ಲಿ ಅನ್ನಛತ್ರಗಳನ್ನೂ, ಅರವಟ್ಟಿಗೆಗಳನ್ನೂ, ಕಟ್ಟಿಸಿ ಮಠ, ಮಾನ್ಯ, ಅಗ್ರಹಾರಗಳನ್ನು

ನಿರ್ಮಿಸಿ ಬ್ರಾಹ್ಮಣರಿಗೆ ಕೊಟ್ಟು, ರಾಮನು ಅತ್ಯಂತವಾದ ಹರ್ಷದಿಂದ ರಾಜ್ಯವನ್ನು ಪರಿಪಾಲಿಸುತ್ತಿದ್ದನು.

ತಂದೆ ಮಕ್ಕಳು ಸುಖಸಂಕಥಾ ವಿನೋದದಿಂದ ರಾಜ್ಯವನ್ನು ಪರಿಪಾಲಿಸುತ್ತ ಇರುವಾಗ, ದಿಲ್ಲಿಯ ಸುಲ್ತಾನನು ಕುಮ್ಮಟದ ದೊರೆಗಳಂತೆ ಕೀರ್ತಿಯುತರಾದ ರಾಜರುಗಳು ಯಾರೂ ಇಲ್ಲವೆಂಬ ಸುದ್ದಿಯನ್ನು ಕೇಳಿದನು. ಸುಲ್ತಾನನ ಕುಮಾರಿಯು ರಾಮನ ಬಿರುದುಗಳನ್ನು ಕೇಳಿ ಸಂತೋಷಿತಳಾಗಿ ತನ್ನ ತಂದೆಯ ಬಳಿಗೆ ಬಂದು, ತನ್ನ ಯೌವನವು ಮೀರಿ ಹೋಗುತ್ತಿರುವುದೆಂದೂ, ನೇಮಿಯನ್ನು ಕಳುಹಿಸಿ ರಾಮನನ್ನು ತರಿಸಬೇಕೆಂದೂ, ಬಿನ್ನೈಸಿಕೊಂಡಳು. ಸುಲ್ತಾನನು ಮಗಳ ಮಾತನ್ನು ಕೇಳಿ ಮನ್ನಿಸಿ ಚಿಂತೆಗೊಳಗಾದನು.

ಸುಲ್ತಾನನ ಮಂತ್ರಿಯಾದ ನೇಮಿಖಾನನು ರಾಮನ ಚಿತ್ರಪಟವನ್ನು ಸುಲ್ತಾನನ ಕುಮಾರಿಗೆ ಕೊಟ್ಟನು. ಅದನ್ನು ಕಂಡ ಕೂಡಲೇ ಬಾಚಮ್ಮನು ಮೂರ್ಛೆ ಹೋದಳು. ಸ್ವಲ್ಪ ಹೊತ್ತಿನ ಮೇಲೆ ಸಖಿಯರ ಉಪಚಾರದಿಂದ ಮೂರ್ಛೆ ತಿಳಿದೆದ್ದು ವಿರಹದಿಂದ ತವಕಪಡುತ್ತಿದ್ದಳು ಸುಲ್ತಾನನು ಮಗಳ ಚಿಂತಾಜನಕವಾದ ಅವಸ್ಥೆಯನ್ನು ಕೇಳಿ ಮನನೊಂದವನಾಗಿ ಕುಮಾರಿಯ ಅಭಿಪ್ರಾಯವನ್ನು ಕೇಳಿದನು. ಬಾಚಮ್ಮನು ತನ್ನ ಮನವನ್ನು ಸೂರೆಗೊಂಡ ಕುಮ್ಮಟದರಸು ರಾಮನ ಚಿತ್ರಪಟವನ್ನು ತಂದೆಗೆ ತೋರಿಸಿ ರಾಮನನ್ನು ವಿವಾಹವಾಗದ ಹೊರತು ತನ್ನ ಮನಸ್ಸು ತಣಿಯದೆಂದು ಹೇಳಿ ಮನಸ್ಸಿನಲ್ಲಿ ನೊಂದು ಮಲಗಿದಳು. ಸತ್ತುಹೋದನೆಂದು ತಿಳಿದಿದ್ದ ರಾಮನನ್ನು ಪುನಃ ಕರೆಸಿ ನಮ್ಮ ಸೈನ್ಯದೊಡನೆ ಕಾದಿ ಗೆಲಿಸಿ ತಂದೆತಾಯಿಗಳಿಗೆ ಸಂತೋಷವನ್ನುಂಟು ಮಾಡಿದ ಮಂತ್ರಿಯ ಜಾಣತನಕ್ಕೆ ಸುಲ್ತಾನನು ಮೆಚ್ಚಿ, ಅಂಥ ಚತುರಬುದ್ಧಿಯ ಪ್ರಧಾನರು ತನಗಿಲ್ಲವೆಂದು ಕೋಪದಿಂದ ನೇಮಿಯನ್ನು ನಿಂದಿಸಿದನು. ವಿರಹತಾಪದಿಂದ ಸೊರಗಿ ಮಲಗಿದ್ದ ಸುತೆಯನ್ನು ಸಮಾಧಾನ ಮಾಡಿ ಹೊರಚಾವಡಿಗೆ ಬಂದು ನೇಮಿಖಾನನನ್ನು ಕರೆಸಿದನು.

ಪುನಃ ಕುಮ್ಮಟದುರ್ಗಕ್ಕೆ ಸೈನ್ಯಸಮೇತ ಹೋಗಿ ರಾಮನನ್ನು ಸೆರೆಹಿಡಿದು ತರಬೇಕೆಂದು ಆಜ್ಞಾಪಿಸಲು ಮಂತ್ರಿಯು ಸುಲ್ತಾನನಿಗೆ

ಕಂಪಿಲರಾಯನು ತನ್ನ ಮಗನಾದ ರಾಮನಿಗೆ ದೊರೆತನವನ್ನು ಕೊಟ್ಟು ಪಟ್ಟಕಟ್ಟಿದನು. ನನ್ನ ಭಾರಿ ಸೈನ್ಯವನ್ನು ರಾಮನು ಸಂಬುಗೆಯ ಬೇಡರ ಸಹಾಯದಿಂದ ಕಡಿದು ರಕ್ತದ ಕಾಲುವೆಯನ್ನು ಹರಿಸಿದನು. ಕಂಪಿಲರಾಯನ ಮಗನು ಅಂತಹ ಧಿಟ್ಟನಾಗಿರುವನು. ಎಂಟು ದಿಕ್ಕುಗಳಲ್ಲೂ ಅವನ ಸಮಾನರಿಲ್ಲ. ಭೂಮಿಯಲ್ಲೇ ಹೆಸರುವಾಸಿಯಾಗಿದ್ದ ಪ್ರತಾಪರುದ್ರರಾಯನು ರಾಮನೆದುರಿಗೆ ನಡುಗಿಹೋದನು. ಅವನನ್ನು ಹಿಡಿದು ತರುವುದಾಗಿ ಹೇಳಿ ಕದನಕ್ಕೆ ಹೋದವರೆಲ್ಲ ಅವನ ಕೈಗೆ ಸಿಕ್ಕು ಮಡಿದುಹೋದರು. ಚಿನ್ನಗಿರಿಯ ಮೊಗಲನು ಎಪ್ಪತ್ತು ಸಾವಿರ ಕುದುರೆಯವರೊಂದಿಗೆ ರಾಮನೊಡನೆ ಕದನಕ್ಕೆ ಹೋಗಿ ಮಡಿದನು. ರಾಮನು ಆ ನಾಡಕಡುಗಲಿಯಾದ ಜಗದಪ್ಪರಾಯನನ್ನು ಸೋಲಿಸಿ, ಅವನ ಮಗಳನ್ನು ಮದುವೆಯಾದನು. ರಾಮನೆದುರಿಗೆ ಒಂದು ನಿಮಿಷವೂ ಯುದ್ಧ ಮಾಡುವ ವೀರರನ್ನೇ ಕಾಣೆನು. ಹೀಗಿರುವಲ್ಲಿ ನನ್ನ ಗತಿಯೇನು? ಕುಮ್ಮಟದುರ್ಗವು ಸುತ್ತಲೂ ತರುಗಿರಿಗಳಿಂದ ಆವರಿಸಲ್ಪಟ್ಟಿರುವುದು. ಐಶ್ವರ್ಯದಿಂದ ತುಂಬಿ ತುಳುಕಾಡುತ್ತಿದೆ. ಮುಗಿಲ ಶರಗಿನಂತೆ ಮಿಗಿಲಾದ ದುರ್ಗವು ವರ್ಣನಾತೀತವಾಗಿರುವುದು. ಇನ್ನುಮೇಲೆ ಕುಮ್ಮಟ ದುರ್ಗಕ್ಕೆ ಕಾಳಗವಾಡಲು ಸುಲ್ತಾನರ ದಂಡು ಹೋಗಬಾರದು. ಹಿಂದೂ ರಾಯನಾದ ರಾಮನು ಅಷ್ಟು ಬಲ್ಲಿದನಾಗಿದ್ದಾನೆ. ಯುದ್ಧ ಮಾಡಲು ನನ್ನನ್ನು ಎಲ್ಲಿಗಾದರೂ ಕಳುಹಿಸಬಹುದು. ಆದರೆ ಕುಮ್ಮಟ ದುರ್ಗದ ಅರಸನಾದ ಸೋಗೆಕಂಗಳ ರಾಮನ ಮೇಲೆ ಮಾತ್ರ ಕಳುಹ ಬೇಡ; ಗುಜರಾತಕ್ಕಾದರೂ, ತೆಲುಗು ರಾಜ್ಯಕ್ಕಾದರೂ, ಮಾಗಧ ಮಲೆಯಾಳರ ಮೇಲಾದರೂ ಕಳುಹಿಸು. ಆದರೆ ಕುಮ್ಮಟದುರ್ಗಕ್ಕೆ ಮಾತ್ರ ಬೇಡ. ಉಳಿದ ಹಿಂದೂ ರಾಯರ ಮೇಲೆ ಹೋಗಿ ಯುದ್ಧ ಮಾಡಬಲ್ಲೆ; ನಾಗಲೋಕಕ್ಕೆ ಹೋಗೆಂದರೂ ಹೋಗಿ ಕಾದಲು ಸಿದ್ಧನಾಗಿರುವೆನು; ಕುಮ್ಮಟದುರ್ಗಕ್ಕೆ ಮಾತ್ರ ಹೋಗಲಾರೆನು ' ಎಂದು ನಾನಾ ವಿಧವಾಗಿ ನೇಮಿಯು ಹೇಳಿದನು. ಈ ಮಾತನ್ನು ಸುಲ್ತಾನನು ಕೇಳಿ ಚಿಂತೆಗೊಳಗಾದನು.

'ರಾಮನನ್ನು ಹಿಡಿದು ತರುವುದಾಗಿ ಪಂಥವನ್ನು ಮಾಡಿ, ಅವ

ನನ್ನು ತರಲಾರದೆ ಹೋದಿರಿ; ರಾಮನು ಅಂತಹ ಕಾಲಾಂತಕನೇ! ಅಲ್ಲಿಗೆ ಹೋದವರೆಲ್ಲ ಬಾದೂರಖಾನನನ್ನು ಹಿಡಿದು ತರದೆ ಹಿಂದಕ್ಕೆ ಬಂದಿರುವಿರಿ' ಎಂದು ಮಾತಂಗಿ ಎಂಬ ಮಾದಿಗಗಿತ್ತಿಯು ಸುಲ್ತಾನನ ಮುಂದೆ ಹೇಳುತ್ತ 'ರಾಮನನ್ನು ಹಿಡಿದು ತರುವೆನು; ನನಗೆ ವೀಳೆಯವನ್ನು ಪಾಲಿಸಿರಿ' ಎಂದು ಬಿನ್ನೈಸಿದಳು. ಸುಲ್ತಾನನು ಈ ಮಾತನ್ನು ಕೇಳಿ, ಹೇಡಿ ಮಂತ್ರಿಯ ಮುಖವನ್ನು ನೋಡಿ, 'ಹೆಂಗಸು ರಾಮನನ್ನು ಹಿಡಿದು ತರುವಳು' ಎಂದು ಮೂದಲಿಸಿದನು. ಮಂತ್ರಿಯು ಮಾದಿಗಗಿತ್ತಿಯನ್ನು ಚೆನ್ನಾಗಿ ಬೈದು 'ರಾಮನನ್ನು ಹಿಡಿದು ತರುವೆಯಾ?' ಎಂದು ಕೇಳಿದನು. 'ಮಾತಂಗಿಯು ಖಂಡಿತವಾಗಿಯೂ ತರುವೆನು' ಎಂದಳು. ಮಂತ್ರಿಯು ಸೋಜಿಗದಿಂದ ಮನಸ್ಸಿನಲ್ಲಿಯೇ ಚಿಂತೆ ಮಾಡುತ್ತಿದ್ದನು. ಸುಲ್ತಾನನು ಮಾತಂಗಿಗೆ ವೀಳೆಯವನ್ನು ಕೊಟ್ಟು, ರಾಮನನ್ನು ತರಬೇಕೆಂದು ಆಜ್ಞೆ ಮಾಡಿ ನೇಮಿಗೆ ಸೈನ್ಯಸಮೇತ ಮಾತಂಗಿಯೊಡನೆ ಹೊರಡುವಂತೆ ಹೇಳಿದನು. ಚೆಲುವು ಚೆನ್ನಾರಿ, ಒನಪು ವೈಯಾರಿ, ಬಲುಹಿನ ಮಾನಿನಿ ರನ್ನೆಯಾದ ಮಾತಂಗಿಯು, ಶೃಂಗರಿಸಿದ ಕುದುರೆಯನ್ನು ಏರಿ, ಅವಕ್ಕೆ ಒಪ್ಪುವ ಹೊನ್ನಾಯ ಸರಪಳಿ, ಝುಲ್ಲಿ, ಜವುದಂಡೆಗಳನ್ನು ಧರಿಸಿದಳು. ನೇಮಿಯೊಡನೆ ಒಂಬತ್ತು ಲಕ್ಷ ಕುದುರೆ ಕಾಲಾಳುಗಳು ಸಿದ್ಧವಾಗಲು, ಸುಲ್ತಾನನು ಭೂಮಿಯನ್ನೇ ಸೂರೆಗೊಂಬುವನೋ ಎಂಬಂತೆ ಸಿದ್ಧವಾದ ಸೈನ್ಯವನ್ನು ಕುಮ್ಮಟದುರ್ಗವನ್ನು ಮುತ್ತಲು ಅಪ್ಪಣೆ ಕೊಟ್ಟು ಕಳುಹಿಸಿದನು. ತುಂಬಿದ ಓಲಗದಲ್ಲಿ ಮಾತಂಗಿಯು ಎದ್ದು ಸುಲ್ತಾನನ ಪಾದಕ್ಕೆ ಬಿದ್ದು, ಕಂಪಿಲರಾಯನನ್ನು ಗಾಯಗೊಳಿಸಿ ರಾಮನನ್ನು ಕಟ್ಟಿ ಹಿಡಿದು ತರುವೆನೆಂದು ಜಗತ್ತೇ ಅರಿಯುವಂತೆ ಭಾಷೆ ಮಾಡಿದಳು. ಕೊಂಕಣ ಮಧ್ಯದೇಶದವಳಾದ ಮಾತಂಗಿಯು ಕುದುರೆಯನ್ನೇರಿ ರಾಮನ ದುರ್ಗವನ್ನು ಹಿಡಿದು ಅವನ ಬಿಂಕವನ್ನು ಮುರಿಯುವುದಾಗಿ ಹೇಳುತ್ತ ನಡೆದಳು. ಹತ್ತುಸಾವಿರ ಕುದುರೆಗಳೊಂದಿಗೆ ಎರಡು ಕಡೆಗಳಲ್ಲಿಯೂ ಛತ್ರಿಗಳನ್ನು ಹಿಡಿಸಿಕೊಂಡು ಪ್ರಯಾಣ ಮಾಡಿದಳು. ನೇಮಿಯ ದಂಡು ಸಮೀಪದಲ್ಲಿಯೇ ಹಿಂಬಾಲಿಸುತ್ತಲಿತ್ತು. ದಿಲ್ಲಿಯಿಂದ ಕುಮ್ಮಟದುರ್ಗಕ್ಕೆ ಆಗುವ ಮುನ್ನೂರು ಅರವತ್ತು ಗಾವುದ ದೂರಕ್ಕೆ

ಅಲ್ಲಿಗಲ್ಲಿಗೆ ಅಂಚೆಯನ್ನಿಡಿಸಿ ಮುಂದಕ್ಕೆ ದಾಳಿಯಿಟ್ಟಳು. ಮಾತಂಗಿಯು ಕಳುಹಿಸಿದ ಮುಂಚಾಣಿ ಕುದುರೆಗಳು ಸಂಜೆಯ ಹಡಗುಗಳನ್ನು ಮಂಜು ಮುಸುಕುವಂತೆ ರಾಮನ ರಾಜ್ಯವನ್ನು ಅಂಚಿಕೆ ಇಲ್ಲದೆ ಒಳಹೊಕ್ಕವು. ಎಂದಿಗೂ ಆಗದೆ ಇರುವ ಕಾರ್ಯವನ್ನು ಮಾಡುವುದಾಗಿ ಹೇಳುತ್ತ, ಫೌಜನ್ನು ಕೂಡಿಕೊಂಡು ಪ್ರಯಾಣದ ಮೇಲೆ ಪ್ರಯಾಣ ಮಾಡುತ್ತ ವೇಗವಾಗಿ ರಾಮನ ರಾಜ್ಯಕ್ಕೆ ಬಂದಳು. ಕಂಪಿಲನ ದುರ್ಗವನ್ನು ಮುಟ್ಟಿ, ಅದನ್ನೂ ಸೂರೆಗೊಂಡು ರಾಮನನ್ನು ಎಡಕೈ ಕಟ್ಟಿ ಬಾದೂರ ನನ್ನು ಹಿಡಿದುಕೊಂಡು ಸುಲ್ತಾನನ ಬಳಿಗೆ ತೆಗೆದುಕೊಂಡು ಹೋಗುವು ದಾಗಿ ಹೇಳಿಕೊಳ್ಳುತ್ತ, ಸುಲ್ತಾನನ ರಾಜ್ಯದ ಗಡಿಯನ್ನು ದಾಟಿ ರಾಮನ ರಾಜ್ಯವನ್ನು ಹೊಕ್ಕಳು.

ಈ ರೀತಿ ತನ್ನ ದೇಶವನ್ನು ಹೊಕ್ಕ ದಂಡನ್ನು ರಾಮನು ಕಂಡು ತನ್ನ ತಂದೆಯ ಬಳಿಗೆ ವರ್ತಮಾನವನ್ನು ಕಳುಹಿಸಿ ದಿನದಿನಕ್ಕೆ ಹತ್ತು ಸಾವಿರ ಹೊನ್ನನ್ನು ಕಳುಹಿಸುವಂತೆ ಪ್ರಾರ್ಥಿಸಿದನು. ಭೂಮಿಯು ಬಿರಿವಂತೆ ಬರುತ್ತಿದ್ದ ತುರುಕರ ದಂಡನ್ನು ರಾಮನು ತನ್ನ ಮಾಸ್ನೆಯ ರೊಂದಿಗೆ ಕೋಡುಗಲ್ಲನ್ನು ಹತ್ತಿ ನೋಡಿದನು. ರಾಮನು ಮನಸ್ಸಿನ ಲ್ಲಿಯೇ ಸಂತೋಷ ಹೊಂದಿ, ಅರಮನೆಯಲ್ಲಿದ್ದ ತನ್ನ ತಂದೆಗೆ ಈ ರೀತಿ ಹೇಳಿ ಕಳುಹಿಸಿದನು. 'ನೀವು ಸಂದೇಹಪಡಬೇಡಿ. ಶತ್ರುಗಳನ್ನು ಹೊಡೆದು ಕೊಲ್ಲುವೆನೆಂಬ ಪಂಥವನ್ನು ಬಿಡೆನು. ದುರ್ಗಕ್ಕೂ ನನಗೂ ಮದುವೆಯಾ ಗಿದೆ. ಸ್ವರ್ಗ, ಮೃತ್ಯು ಪಾತಾಳಗಳಲ್ಲಿ ನನ್ನ ಕೀರ್ತಿಯು ಹಬ್ಬುವಂತೆ ಮಾಡುವೆನು. ದೂರ ದೇಶದ ಬಾದೂರಖಾನನು ತನ್ನ ದೇಶವನ್ನು ಬಿಟ್ಟು ನನ್ನ ದೇಶಕ್ಕೆ ಜೀವದಾಸೆಯಿಂದ ಬಂದು ನಮ್ಮನ್ನು ಮರೆ ಹೊಕ್ಕನು. ಅಂದೇ ನನ್ನ ತಲೆಯು ಸುಲ್ತಾನನಿಗೆ ಮೀಸಲಾಯಿತು. ಮರೆ ಬಂದ ಬಾದೂರನನ್ನು ಎಂದಿಗೂ ಬಿಡುವುದಿಲ್ಲವೆಂಬ ಭಾಷೆಯನ್ನು ಕೊಟ್ಟುದು ತಪ್ಪುವುದಿಲ್ಲ. ತುರುಕರ ದಂಡನ್ನು ತುಂಡುತುಂಡಾಗಿ ಕಡಿಯುವೆನು. ಜಟ್ಟಂಗಿ ರಾಮೇಶನ ವರಕುಮಾರನು ನಾನು. ಆತನ ದಯವು ನನಗಿರು ವುದು. ಆದ್ದರಿಂದ ಈ ಕಾಳಗವು ಪೂರೈಸುವ ವರೆಗೂ ತಾವು ಸುರಕ್ಷಿತ ವಾಗಿ ಹೊಸದುರ್ಗದ ಕೋಟೆಯಲ್ಲಿರಬೇಕೆಂದು ಹೇಳಿ ಕಳುಹಿಸಿದನು.

ಮಂತ್ರಿ ಬೈಚಪ್ಪನನ್ನು ಕಂಡು ರಾಮನು ಅವನೊಡನೆ ಸಮಾಲೋಚನೆ ಮಾಡಿದನು. ತುರುಕರು ಬಾದೂರಖಾನನನ್ನು ಹಿಡಿಯಲು ಬಂದಿದ್ದಾರೆ. ಆದ್ದರಿಂದ ಅವನಿಗೆ ಹೆಂಡರು ಮಕ್ಕಳನ್ನು ಕರೆದುಕೊಂಡು ಭಂಡಾರ ಸಮೇತ ಹೊಸಮಲೆಗೆ ಹೋಗಿರಬೇಕೆಂದು ತಿಳಿಸಿ ಐನೂರು ಕುದುರೆ ಸಹಿತವಾಗಿ ಮಂತ್ರಿ ಬೈಚಪ್ಪನನ್ನು ಕಳುಹಿಸಿದನು. ಇತ್ತಲಾಗಿ ಕುಮ್ಮಟ ದುರ್ಗವನ್ನು ಬಿಟ್ಟು ಹೊರಟನು.

ತುರುಕರ ದಂಡು ಮುಂದೆ ನುಗ್ಗಿ ಬರುತ್ತಿರಲು ರಾಮನು ಶತ್ರುಗಳ ದಂಡನ್ನು ಕಣಿವೆಗಳಲ್ಲಿಯೇ ಮುತ್ತಿ ಕಡಿದು, ರಣಭೀತಿ ಹೆಣಭೀತಿ ಮಾಡಿದನು. ಭೂತ ಪ್ರೇತಗಳಿಗೂ ಮರುಳು ಕಂಡಕ್ಕೂ ದಣಿಯುವಂತೆ ಉಣಿಸಿದನು. ಅನಂತರ ಕುಮ್ಮಟದುರ್ಗಕ್ಕೆ ಹಿಂತಿರುಗಿದನು. ನಡೆದ ಸಂಗತಿಯನ್ನು ಓಲೆಯಲ್ಲಿ ಬರೆದು ಚರರ ಸಂಗಡ ತಂದೆಗೆ ಕಳುಹಿಸಿದನು. ಊಳಿಗದವರು ಓಡಿ ಬಂದು ಹರಿಯಾಲದೇವಿಗೆ ಈ ಸುದ್ದಿಯನ್ನು ತಿಳಿಸಿದರು. ಕಂಪಿಲ ಅರಸು ಭಂಡಾರದಿಂದ ಎರಡು ಖಂಡುಗ ಹೊನ್ನನ್ನು ತರಿಸಿ ರಾಮನಿಗೆ ಕಳುಹಿಸಿದನು. ಹಿಂತಿರುಗಿದ ರಾಮನು ಮಂದಿ, ಅರಸು ಮಕ್ಕಳು ಸಹಿತ ಆನೆ ಕುದುರೆಗಳನ್ನು ಏರಿ ಸಂಜೆಯ ಹೊತ್ತಿನಲ್ಲಿ ಊರನ್ನು ಹೊಕ್ಕು ಅರಮನೆಯನ್ನು ಸೇರಿದನು.

ಮಾತಂಗಿಯ ದಂಡು ಉಬ್ಬುಬ್ಬಿ ಕುಮ್ಮಟ ನಗರವನ್ನು ಮುತ್ತಲು ಬರುತ್ತಿರುವಾಗ ಅದರ ಎದುರಿಗೆ ಹೋಗಿ ಯುದ್ಧ ಮಾಡಲು ರಾಮನ ಕಡೆಯವರು ಸಿದ್ಧರಾಗಿದ್ದರು. ಹೆಬ್ಬಾಗಿಲನ್ನು ತೆಗಸದಲೆ ಮಾತಂಗಿಯ ಮೇಲೇರಿ ಹೋಗುವುದಾಗಿ ರಾಮನ ದಂಡಿನವರು ಉಬ್ಬುಬ್ಬಿ ಭಾಷೆ ಕೊಟ್ಟರು. ಆ ಹೊತ್ತಿಗೆ ನಳಿನ ಸಖನು ಅಸ್ತಮಾನವಾಗಲು, ದೀಪಗಳ ಸಾಲಿನಿಂದ ಕುಮ್ಮಟದುರ್ಗಕ್ಕೆ ಕಳೆಯೇರಿತು. ಕೋಟೆಯ ಕಾವಲಿನವರೂ, ಬಿಲ್ಲಿನವರೂ, ಎಕ್ಕಟಿಗರೂ ಎಲ್ಲರೂ ಕೋಟೆಯ ಮೇಲೆ ನಿಂತು ಕೆಲ ದೀವಟಿಗೆಗಳನ್ನು ಹಿಡಿದುಕೊಂಡು ನೋಡುತ್ತಿದ್ದರು.

ಬೆಳಗಾದ ಮೇಲೆ ರಾಮನು ಶ್ರೀಪತಿಯನ್ನು ಧ್ಯಾನಿಸುತ್ತ ಅರಮನೆಗೆ ಬಂದು ಮಾನ್ನೆಯರನ್ನೆಲ್ಲ ಕರೆಸಿ, ಸುಖಭೋಜನವನ್ನು ಮಾಡಿಸಿ ಉಡುಗೊರೆ ಇತ್ತು ಮನ್ನಿಸಿದನು. ಅನೇಕ ಜನ ರಾವುತರಿಗೆ ರಾಮನು

ವಸ್ತ್ರಾಭರಣಗಳನ್ನು ದಾನಮಾಡಿ, ಗಂಧ, ಕಸ್ತೂರಿ, ಕುಂಕುಮ, ಕದಂಬವನ್ನು ಎಲ್ಲರಿಗೂ ಹಂಚಿದನು. ಭೂಮಂಡಲದ ರಾಯರ ಗಂಡನೆಂಬ ಬಿರುದನ್ನು ಕಾಲೊಳಗೆ ಧರಿಸಿದನು. ಮುತ್ತು, ಪಚ್ಚೆ, ಚಿನ್ನದ ಚಿತ್ರಗಳನ್ನು ಧರಿಸಿದನು. ವಜ್ರಾಂಗಿಯನ್ನು ತೊಡಿಸಿದರು. ಕುದುರೆಗೂ ಅಲಂಕರಿಸಿದರು. ರಾಮನ ಎಡಬಲದಲ್ಲಿ ಭಟರು ನಿಂತು ಬಿರುದುಗಳನ್ನು ಉಗ್ಗಡಿಸುತ್ತಿದ್ದರು. ರಾಮನು ಬಂದು ಹೆಬ್ಬಾಗಿಲನ್ನು ತೆಗೆಯಿಸಿದನು. ರಾವುತರು ರಾಮನನ್ನು ಉಪಚರಿಸುತ್ತ ಬರುತ್ತಿದ್ದರು. ಚಿತ್ರದ ಮಕರ ರೆಕ್ಕೆಯನ್ನು ಎತ್ತಿಹಿಡಿದಿದ್ದರು. ಬಿರುದಿನ ಡೊಳ್ಳುಗಳನ್ನು ಬಾರಿಸುತ್ತಿದ್ದರು. ರಾಮನನ್ನು ಕಂಡು ಮಾತಂಗಿಯು ಕೊಂಡಾಡಿದಳು. ರಾಮನು ದುರ್ಗವನ್ನಿಳಿದು ಹೆಬ್ಬಾಗಿಲನ್ನು ತೆಗೆಯಿಸಿದನು.

ಕೂಡಲೆ ಕೈ-ಕಾಳಗವು ಕೂಡಿತು. ಒಬ್ಬರನ್ನೊಬ್ಬರು ಮೂದಲಿಸುತ್ತಿರಲು, ರಾಮನು ಶತ್ರುಗಳನ್ನು ತಿವಿಯುತ್ತಿದ್ದನು. ಮುಂದಕ್ಕೆ ಹೋದ ತನ್ನ ಕಡೆಯವರು ಹಿಂದಿರುಗದಿರುವುದನ್ನು ಕಂಡು ಮಾತಂಗಿಯು ಬೆರಗಾಗಿ ಕುದುರೆಯನ್ನೇರಿ ಮುಂದಕ್ಕೆ ನಡೆದಳು. ರಾಮನು ಮಾತಂಗಿಯು ಬರುತ್ತಿರುವುದನ್ನು ಕಂಡು, ತನ್ನ ಕಡೆಯವರಿಗೆ ಕೈಬೀಸಿ ಎಚ್ಚರಿಸಿದನು. ಕೂಡಲೆ ಬೇಡರು ಮುಂದಕ್ಕೆ ನುಗ್ಗಿ ತುರುಕರ ಡೇರೆಗಳನ್ನು ಹೊಕ್ಕು ವೀರರನ್ನು ಎಣಿಕೆಯಿಲ್ಲದೆ ಕಡಿಯುತ್ತ, ಕುದುರೆಗಳನ್ನು ಸೆರೆಹಿಡಿದು ತಂದು ರಾಮನಿಗೆ ಒಪ್ಪಿಸುತ್ತಿದ್ದರು.ರಣರಂಗವು ಎಲ್ಲೆಲ್ಲಿಯೂ ಹೆಣಮಯವಾಯಿತು. ರಾಮನ ಕಡೆಯವರು ಕಣಿವೆಗಳಲ್ಲಿ ಕಾದಿದ್ದು ಒಳಕ್ಕೆ ಬರುವ ತುರುಕರ ಮೇಲೆ ಬಿದ್ದು ಕಗ್ಗೊಲೆಯನ್ನು ಮಾಡುತ್ತಿರಲು, ತುರುಕರು ಕಂಗೆಟ್ಟು ರಾಮನನು ಕೆಣಕಿ ಕೆಟ್ಟೆವು ಎಂದು ಹೇಳುತ್ತ ಮಾತಂಗಿಯ ದಂಡು ದಿಕ್ಕಾಪಾಲಾಗಿ ಓಡಿತು. ಆದರೆ ಮಾತಂಗಿಯ ಪ್ರೋತ್ಸಾಹದಿಂದ ಕೆಲವು ತುರುಕರು, ಕುದುರೆಗಳು ಹಿಂದಕ್ಕೆ ಓಡದಂತೆ ನಾಲ್ಕು ಕಾಲುಗಳನ್ನು ಕಟ್ಟಿ ನಿಂತು ಯುದ್ಧ ಮಾಡಲುಪಕ್ರಮಿಸಲು, ಮಾತಂಗಿಯ ಚಾತುರ್ಯವನ್ನು ಕಂಡು ರಾಮನು ಕುದುರೆಯನ್ನೇರಿ, ಮದಕರಿಯು ಕದಳಿವನವನ್ನು ಹೊಕ್ಕಂತೆ ಶತ್ರುಗಳನ್ನು ಪಟ್ಟಾಕತ್ತಿಯಿಂದ ಕಡಿಯುತ್ತಿದ್ದನು. ಇವನ ಹೊಡೆತ

ದಿಂದ ಅರಿಬಲದ ರಾವುತರ ತೋಳು ಖಂಡಿಸಿತು; ಗುಂಡಿಗೆಯೊಡೆದು ತುಂಡುತುಂಡಾಗಿ ಬೀಳುತ್ತಿದ್ದರು. ತುರುಕರ ರಾವುತರು ಮಡಿಯುತ್ತಿದ್ದುದನ್ನು ಬಣ್ಣಿಸಲಸದಳವಾಯಿತು. ಭೂತಪ್ರೇತಗಳು ಮೂರು ತಂಡವಾಗಿ ಒಂದು ತಂಡವು ರಾಮನನ್ನು ಕೊಂಡಾಡುತ್ತ ಇವನನ್ನು ಹಿಂಬಾಲಿಸಿತು. ಮಿಕ್ಕವುಗಳನ್ನೆಲ್ಲ ದಿಕ್ಕುದಿಕ್ಕಿನಲ್ಲಿ ದಣಿಸಿದನು. ಕುಮ್ಮಟದ ಆಳುನೇದಿಯು ಸುತ್ತಲೂ ರಣಮಯವಾಯಿತು. ಕಾಟಣ್ಣನು ಕುಮ್ಮಟದ ಕೋಟೆಗೆ ತುರುಕರ ಬಲಿಯನ್ನು ಕೊಡುತ್ತ ಕಾಳಗದಲ್ಲಿ ಜಯವನ್ನು ಹೊಂದಿ ರಾಮನಿಗೆ ತಿಳಿಸಿದನು. ರಾಮನ ಕಡೆಯವರು ಕೊಪ್ಪರಿಗೆಯಲ್ಲಿ ಕಾದ ಎಣ್ಣೆಯನ್ನೂ, ಕಾರಬೊಗ್ಗನ್ನೂ ತಂದು ಕೋಟೆಯಮೇಲೆ ಏರಿಬರುವ ಖಾನರ ಮೇಲೆ ಚೆಲ್ಲಿದರು. ಅಯ್ಯೋ ! ಅಯ್ಯೋ ! ಎಂದೆನ್ನುತ್ತ ರಾಮನ ಸಂಗಡ ಕಾದುವುದು ಅಸದಳವೆನ್ನುತ್ತ ಮಾತಂಗಿಯು ಹಿಂತಿರುಗಿದಳು. ರಾಮನ ಸಂಗಡ ಗುದ್ದಾಡುಗಳಲ್ಲಿ ನಿಂತು ಕಾದಬಾರದು ಎಂದು ಖಾನವಜೀರನನ್ನು ಕರೆದುಕೊಂಡು ಹಿಂದಕ್ಕೆ ತಿರುಗಿ ರಾಮನ ಕೂಡ ಕಾದುವವರೇ ಇಲ್ಲದ ಹಾಗಾಯಿತು ಎಂದು ತಮ್ಮ ತಮ್ಮೊಳಗೆ ಚಿಂತಿಸುತ್ತ ಒಂದು ಗಾವುದ ದಾರಿಯನ್ನು ಸಾಗಿದರು.

## ಕನ್ನಡನಾಡಿನ ಜೋಹರ್

ರಾಮನು ಕಾಳಗದಲ್ಲಿ ಜಯವನ್ನು ಪಡೆದು ಮಾತಂಗಿಯನ್ನು ಹಿಂದಕ್ಕೋಡಿಸಿ, ತಾನು ಅರಮನೆಗೆ ಹಿಂತಿರುಗಿ ಹೋದ ಮೇಲೆ ರಾಮನ ಕಡೆಯ ತೆಲುಗರು ಸೇರಿ ಒಂದು ಆಲೋಚನೆಯನ್ನು ಮಾಡಿದರು. ನವ ಲಕ್ಷ ತೆಲುಗರ ಗಂಡನೆಂಬ ಬಿರುದಿನ ಕಡಗವನ್ನು ಕಾಲಲ್ಲಿ ಧರಿಸಬಹುದೇ? ಇದರಿಂದ ನಮ್ಮ ತೆಲುಗರಿಗೆ ಅವಮಾನವಾಗಲಿಲ್ಲವೆ? ಎಂದು ತಮ್ಮ ತಮ್ಮಲ್ಲೇ ಮಾತನಾಡಿಕೊಂಡು ರಾಮನನ್ನು ಹೇಗಾದರೂ ಮಾಡಿ ಸೋಲಿಸಬೇಕೆಂದು ಆಲೋಚಿಸಿ ಮಾತಂಗಿಯು ಹಿಂತಿರುಗಿ ಹೋಗ ಕೂಡದೆಂದೂ ಪುನಃ ಕುಮ್ಮಟದುರ್ಗಕ್ಕೆ ಬಂದು ಮುತ್ತಿಗೆ ಹಾಕಿದರೆ ತಾವು ಕೋಟೆಯ ಬಾಗಿಲನ್ನು ತೆಗೆದು ಕೋಟೆಯನ್ನು ವಶಮಾಡುವುದಾಗಿಯೂ ವಿವರಿಸಿ ಓಲೆಯನ್ನು ಬರೆಸಿ ಮಾತಂಗಿಗೆ ಕಳುಹಿಸಿದರು.

ಮಾತಂಗಿಯು ಓಲೆಯನ್ನು ಕಂಡು ಸಂತೋಷದಿಂದ ಮುಂದಿ, ಕುದುರೆ ರಾವುತರನ್ನೆಲ್ಲ ಕೂಡಿಕೊಂಡು ಹಿಂದಕ್ಕೆ ಬಂದು ಬೇಡರನ್ನು ಕಡಿದೊಟ್ಟು ತ್ತಿದ್ದಳು.

ಇದನ್ನು ತಿಳಿದು ಕಾಟಣ್ಣನು ಕೂಡಲೆ ರಾಮನ ಅರಮನೆಗೆ ಹೋಗಿ ಮಾತಂಗಿಯು ಹಿಂತಿರುಗಿ ಬಂದು ಮುತ್ತಿಗೆ ಹಾಕಿದ ಸಂಗತಿಯನ್ನು ತಿಳಿಸಿದನು. ಇಂದು ಕುಮ್ಮಟದುರ್ಗದಲ್ಲಿ ಕಾಲನ ಆಟವಾಗಿದೆ. ದುರ್ಗದಲ್ಲಿದ್ದ ಬಾಲಕರು ಮಕ್ಕಳೆನ್ನದೆ ಎಲ್ಲರನ್ನೂ ತುರುಕರು ಕಡಿದೊಟ್ಟುತ್ತಿದ್ದಾರೆ. ಕೆಳಗೋಟೆಯು ನಮ್ಮ ಕೈತಪ್ಪಿ ಶತ್ರುಗಳ ವಶವಾಗಿದೆ. ನಮ್ಮ ತೆಲುಗು ಮಾನ್ನೆಯರು ತುರುಕರಿಗೊಳಗಾದ ಸುದ್ದಿಯು ಬಂದಿದೆ. ಎಂದು ಕಾಟಣ್ಣನು ಹೇಳಿದ ಮಾತನ್ನು ಕೇಳಿ ರಾಮನು ಬಹು ದುಃಖಿತನಾಗಿ ತನ್ನೊಳಗೆ ತಾನೆ ಇದೇನಚ್ಚರಿ! ಎಂದುಕೊಳ್ಳುತ್ತ ಯುದ್ಧಕ್ಕೆ ಕೂಡಲೆ ಹೋಗಿ, ತುರುಕರ ಸಂಗಡ ಕಾದಾಡುವುದಾಗಿಯೂ ದೈವಸಂಕಲ್ಪವಿದ್ದರೆ, ಮಡಿಯಲು ಸಿದ್ಧನಾಗಿರುವುದಾಗಿಯೂ ದೃಢಸಂಕಲ್ಪಮಾಡಿ, ಅರಮನೆಯ ಸ್ತ್ರೀಪರಿವಾರವನ್ನೆಲ್ಲ ಕರೆಯಿಸಿದನು. ಮುತ್ತಿನ ಗದ್ದುಗೆಯ ಮೇಲೆ ಕುಳಿತು ಹರುಷದಿಂದ 'ನಾನು ಮಡಿದರೆ ನೀವು ನನ್ನೊಡನೆ ವೀರಸ್ವರ್ಗಕ್ಕೆ ಬನ್ನಿರಿ. ಕಿಚ್ಚನ್ನು ಕಂಡು ಬೆದರಬೇಡಿರಿ. ಮನೋನಿಶ್ಚಯವನ್ನು ಮಾಡಿಕೊಳ್ಳಿರಿ.' ಎಂದು ಮೆಚ್ಚಿನ ಮಡದಿಯರಿಗೆ ಬುದ್ಧಿವಾದವನ್ನು ಹೇಳಿ ಅವರಿಂದ ತಾಂಬೂಲವನ್ನು ಹೊಂದಿ ರಣದ ಉಡುಪನ್ನು ಧರಿಸಿ ಕಾಳಗಕ್ಕೆ ತೆರಳಲನುವಾದನು. ಪಟ್ಟದರಾಣಿಯು ಚಿನ್ನದ ಬಟ್ಟಲಲ್ಲಿ ಅಮೃತವನ್ನು ತಂದಳು. ರಾಮನು ಒಡಹುಟ್ಟಿದ ಕಾಟಣ್ಣನೊಡನೆ ಒಂದೇ ಬಟ್ಟಲಲ್ಲಿ ಊಟಮಾಡಿ ಪರಿವಾರಕ್ಕೆಲ್ಲ ಭೇದವಿಲ್ಲದೆ ಚಿನ್ನದ ತಟ್ಟೆಯಲ್ಲಿ ವೀಳಯವನ್ನು ಕೊಟ್ಟನು. ಇಂದಿಗೆ ನನ್ನ ಆಯುಷ್ಯವು ತುಂಬಿತು. ಜಟ್ಟಂಗಿ ಶಂಭುಲಿಂಗನ ಕೃಪೆಯು ತಪ್ಪಿತು. ಎಂದು ಹೇಳಿ ತನ್ನೊಡನೆ ವೀರಸ್ವರ್ಗವನ್ನೇರಲು ಸಿದ್ಧರಾದ ನಾಲ್ಕುಸಾವಿರ ಚಿನ್ನದ ಕಟ್ಟಿನ ಬಿಲ್ಲಿನವರಿಗೆ ವೀಳಯವನ್ನು ಕೊಟ್ಟು ತಾನು ಧನುರ್ಧಾರಿಯಾಗಿ, ಚಿನ್ಮಯಮೂರ್ತಿ ಜಟ್ಟಂಗಿ ರಾಮೇಶನನ್ನು ಸ್ಮರಿಸುತ್ತ ಕಾಳಗಕ್ಕೆ ಅನುವಾಗಿ ಹೊರಟನು.

ರಾಮನು ಹೆಬ್ಬಾಗಿಲಿಗೆ ಬಂದು ನಿಂತನು. ಯಾರು ಯಾರು ಕಾಳಗದಲ್ಲಿ ಬಿದ್ದರು ಎಂದು ವಿಚಾರಿಸಿದನು. 'ನಲ್ಲ ನಾಗ, ಬಿಲ್ಲ ಪೆನ್ನ, ಮೀಸಿಗ ಸಂಗ, ಜೆಲ್ಲಿಪಲ್ಲಿನ ಬುಕ್ಕನಾಯಕ, ಕಲ್ಲಿಕೋಟೆಯ ಚಿಕ್ಕ ಮೊದಲಾದವರು ಬಿದ್ದರು. ಮಾದಿಗರ ಹಂಪನು ರಣದಲ್ಲಿ ಹೊಕ್ಕು ವೈರಿಗಳನ್ನು ಮೂದಲಿಸುತ್ತ ಒಳಹೊಕ್ಕು ಬರುತ್ತಿದ್ದ ತುರುಕರೊಡನೆ ಹೋರಾಡಿ ಮಡಿದುಬಿದ್ದನು. ಅಕ್ಕಸಾಲೆಯ ಚಿಕ್ಕ ಮೊದಲಾದ ಎಕ್ಕಟಿಗರು ಬಿದ್ದರು. ದಿಕ್ಕುದಿಕ್ಕಿಗೆ ಬಲಿಗಳನ್ನಿಕ್ಕುತ್ತ ರಕ್ಕಸ ಮಾದನು ಬಿದ್ದನು. ಖಂಡೆಯಕಾರ ತುಳವರ ಮುದಿಯು ಬಿದ್ದನು. ಕೊಳ್ಳಿಯ ನಾಗ, ಬೇವಿನ ಸಿಂಗ, ಮೋಹದ ಭಂಟ, ಹೊಲೆಯರ ಹಳ್ಳುಗ ಮೊದಲಾದವರು ಬಿದ್ದರು ಎಂದು, ವಿವರಿಸಿ ಹೇಳಿದ ಮಾತನ್ನು ಕೇಳುತ್ತ ಮನದಲ್ಲಿ ರೋಷವನ್ನು ತಾಳಿದನು. ತುರುಕರ ದಂಡನ್ನು ಕಾಳಗದಲ್ಲಿ ಹೋಳು ಹೋಳಾಗಿ ಕಡಿಯುವೆನು ಎಂದು ಕಿಡಿಕಿಡಿಯಾದನು. ತನಗೆ ಬೇಕಾದ ವೀರರೊಂದಿಗೆ ಬೇರೆ ಕಡೆಗೆ ಹೋಗಿ ಕಾದಾಡಿರಿ ಎಂದು ಕಾಟಣ್ಣನಿಗೆ ಹೇಳಿದನು. ಕೊಂಬು, ಹೆಗ್ಗಾಳೆ, ಬೊಂಬಳೆ, ನಿಸ್ಸಾಳಗಳು ಕುಂಭಿನಿಯು ಬಿರಿಯುವಂತೆ ಧ್ವನಿಮಾಡುತ್ತಿರಲು, ರಾಮನು ಸಂಭ್ರಮದಿಂದ ದುರ್ಗವನ್ನಿಳಿದನು. ಕಹಳೆಯ ಧ್ವನಿಯನ್ನು ಕೇಳಿ, ತುರುಕರ ಪಾಳೆಯದಲ್ಲಿ ಗದಗದಿಸಿದರು. ಅಗೋ! ರಾಮನು ದಾಳಿ ಬರುತ್ತಿರುವನು ಎಂದು ತಮ್ಮ ತಮ್ಮೊಳಗೆ ಬೆದರಿದರು. ರಾಮನು ಕೈಯಲ್ಲಿ ಧನುವನ್ನು ಹಿಡಿದು ಝೇಂಕಾರ ಮಾಡುತ್ತ ಭರದಿಂದ ದುರ್ಗವನ್ನಿಳಿದನು. ಬೊಲ್ಲನನ್ನು ತಂದಿರಿಸಲು, ಮೆಲ್ಲನೆ ಕುದುರೆಯನ್ನು ಏರಿ ನಡೆದನು. ಆನೆಯನ್ನೇರಿ ಬರುತ್ತಿದ್ದ ಮಾತಂಗಿಗೆ ರಾಮನನ್ನು ತೋರಿಸಿದರು. ಮಾತಂಗಿಯು ಚೆಲುವರ ಗಂಡ ರಾಮನನ್ನು ಕಣ್ಣುತುಂಬ ನೋಡಿದಳು. ರಾಮನು ಕಾದುತ್ತಲೇ ಮಾದಗಿತ್ತಿಯನ್ನು ತೋರಿಸೆಂದು ಪಕ್ಕದವರನ್ನು ಕೇಳಿದನು. ಮಾತಂಗಿಯು ಮೂದಲಿಸುತ್ತ ರಾಮನಿಗೆ ಎದುರಾಗಿ ಬಂದಳು. ಆ ಹನ್ನೆ ಮಾತಂಗಿಯು 'ನಿನ್ನನ್ನು ನೀನೇ ಅರಿಯೆ' ಎಂದು ಹೇಳಿದಳು. ರಾಮನಿಗೆ ಸಮನಾದ ತುರುಕರ ವೀರರು ಅನೇಕ ಕುದುರೆ ಮತ್ತು ಆನೆಯ ರಾವುತರು ಒಮ್ಮೆಲೆ ರಾಮನ ಮೇಲೆ ಬಿದ್ದರು. ರಾಮನು ಎದು

ರಾಗಿ ಬರುತ್ತಿದ್ದ ಶತ್ರುಗಳ ಮೇಲೆ ನುಗ್ಗಿ, ಮಾತಂಗಿಯ ವೀರಜಡೆಯನ್ನು ಹಿಡಿದು ಎಳೆದು ಕತ್ತಿಯಿಂದ ಕಡಿಯಲು ಕೈ ಎತ್ತಿದನು. ಅಷ್ಟರಲ್ಲಿಯೇ ಕಾಳಗದಲ್ಲಿ ಕಾದಿ ಹೆಂಗಸನ್ನು ಕೊಂದರೆ, ಸ್ವರ್ಗದಲ್ಲಿ ದುಸ್ಸಂಗ ತಪ್ಪದು ಎಂದು ಮನದಲ್ಲಿಯೇ ಯೋಚಿಸುತ್ತ ಕತ್ತಿಯನ್ನು ಒರೆಯಲ್ಲಿ ಹಾಕಿ, ಜಡೆಯನ್ನು ಬಿಟ್ಟು 'ಜೀವವನ್ನು ಉಳಿಸಿಕೋ ಹೋಗು' ಎಂದನು. ಆದರೆ ಕೃತಘ್ನಳಾದ ಮಾತಂಗಿಯು ರಾಮನ ಮೇಲೆ ತಿರುಗಿ ಬಿದ್ದು ಗುರಿ ಇಟ್ಟು ಬಾಣಗಳನ್ನು ಬಿಡಲು ಎದೆಗೆ ಒಡಿದು ಚುಚ್ಚಿಕೊಂಡಿತು. ರಾಮನು ತನ್ನ ಎದೆಯ ಅಂಬನ್ನು ಕಿತ್ತನು. ರಕ್ತವು ಧಾರೆಯಾಗಿ ಹರಿದುದನ್ನು ನೋಡಿ ಸಂತೋಷಿಸಿದನು. ಮುಖವು ಬಾಡಿತು. ಇಂದು 'ಧರೆಯ ಗಂಡ' ನೆಂಬ ಬಿರುದು ಅಳಿಯಿತು. 'ಹಾ! ವಿಧಿಯೆ! ವೀರರಾಯರ ಗಂಡನೆಂಬ ಕೀರ್ತಿಯು ಇಂದಿಗೆ ಅಳಿಯಿತೇ?' ಎಂದು ನುಡಿಯುತ್ತ, ರಾಮನ ಭಟರು ಬಾಣಗಳನ್ನು ಬಿಡುತ್ತಲೇ ಇದ್ದರು.

ರಾಮನ ಅವಸ್ಥೆಯನ್ನು ಕಂಡ ಎಕ್ಕಟಿಗರು ಅತುಳ ಶೌರ್ಯದಿಂದ ಶತ್ರುಗಳ ಮೇಲೆ ಬಾಣದ ಮಳೆಗರೆದರು. ಶತ್ರುಗಳನ್ನು ಕೆಣಕಿ ರೋಷದಿಂದ ರಣರಂಗವನ್ನು ಹೆಣಮಯ ಮಾಡಿದರು. ಬಾಣದ ಬಸವಯ್ಯನು ರಣರಂಗವನ್ನು ಹೊಕ್ಕು, ಹೆಬ್ಬುಲಿಯು ಪಶುವಿನ ಹಿಂಡಿನೊಳಕ್ಕೆ ಹೊಕ್ಕು ಪಶುಗಳನ್ನು ಕೊಲ್ಲುವಂತೆ, ಖಾನಖಾನರನ್ನು ದಣಿಯದೆ ಹಣಿದನು. ಶತ್ರುಗಳು ಇವನ ಮೇಲೆ ಬಿದ್ದು ಬಾಣಗಳಿಂದ ಹೊಡೆಯಲು ಬಸವಯ್ಯನು ಬಿದ್ದನು. ಈ ರೀತಿ ಹೊಯ್ದಾಡಿದ ಕಾಳಗದಲ್ಲಿ ಹೆಣದ ರಾಶಿಗಳು ರಣರಂಗದಲ್ಲಿ ತುಂಬಿಹೋದವು. ಹುಲಿಮುಖದ ಬಾಗಿಲಿನಲ್ಲಿ ರಾಮನ ಭಟರು ತುರುಕರ ದಂಡನ್ನು ಕಡಿದು ಹಾಕಿದರು. ರಾಮನ ಇಕ್ಕೆಲದಲ್ಲಿಯೂ ಮುಸುಕಿದ್ದ ತುರುಕರ ತಲೆಗಳನ್ನೆಲ್ಲ ಚೆಂಡಾಡಿದರು.

ರಾಮನು ಆ ಸ್ಥಳವು ಸರಿಯಾಗಿಲ್ಲವೆಂದು ತಿಳಿದು ಬಾಗಿಲನ್ನು ಮುಚ್ಚಿ ಗೂಗೆ ಕಲ್ಲಿನ ಮೇಲೆ ಒಂದು ನಿಂತನು. ಇವನ ಮಂದಿಯು ಹಿಂಬಾಲಿಸಿತು. ರಾಮನು ನಿಶ್ಶಕ್ತನಾಗಿರುವುದನ್ನು ಇನ್ನೊಂದು ಕಡೆಯಲ್ಲಿ ಕಾದುತ್ತಿದ್ದ ಕಾಟಣ್ಣನು ಕಂಡು ರಾಮನೆಡೆಗೆ ಬಂದನು. ಕೂಡಲೆ ಕಾಟಣ್ಣನು 'ಪರಬಲಾಂತಕ ವೈರಿಯ ಗಂಡನೆಂಬ ಬಿರುದು ಸಲ್ಲುವುದೋ

ರಾಮ ನಿನಗೆ ' ಎಂದನು. ನಿಜಗಲ್ಲು ಚೆನ್ನಿಗ ರಾಮನು ನನ್ನ ಜೀವನವು ಮುಗಿಯಿತು. ನೀನು ಊರಿಗೆ ಹೋಗಿ ಇಲ್ಲಿನ ವಿಷಯಗಳನ್ನೆಲ್ಲ ಹರಿಯಮ್ಮನಿಗೆ ತಿಳಿಸೆಂದು ಕಾಟಣ್ಣನ ಅಡಿಗೆರಗಿದನು. ಶತ್ರುಗಳು ಹೊಡೆದ ಗಾಯದ ನೋವಿನಿಂದ ನಾನು ನಿಶ್ಯಕ್ತನಾಗುತ್ತಿದ್ದೇನೆಂದು ತಾಯಿ ಹರಿಯಮ್ಮನಿಗೆ ತಿಳಿಸು ' ಎಂದು ಬೇಡಿದನು. ಕಣ್ಣುಹೋದ ಸಿಂಹದಂತೆಯೂ, ಒಡಲೊಳಗೆ ಸಾಸುವೆಯನ್ನು ಹಾಕಿದಂತೆಯೂ ಆಗಿದ್ದೇನೆ. ಇಂದು ನನ್ನ ಪುಣ್ಯವು ಕೊನೆಯಾಯಿತು ಎಂದು ಅಣ್ಣನಿಗೆ ತಿಳಿಸಿದನು. 'ಜೀವಗಳ್ಳರ ಗಂಡನಾದ ರಾಮನೇ ! ನಮಗೆ ಚಟ್ಟಂಗಿ ರಾಮೇಶನ ಕೃಪೆ ತಪ್ಪಿತು. ನಾನು ಹಿಂತಿರುಗದೇ ನಿನ್ನೊಡನೆ ಸಾಯುವೆನು. ಧರಣಿಯಲ್ಲಿ ಪ್ರಚಂಡನಾದ ಚೆಲುವರ ಗಂಡ ರಾಮನೇ ! ನಿನ್ನನ್ನು ಗಾಯಗೊಳಿಸಿದ ವಜೀರರನ್ನು ತೋರಿಸು. ಅವರನ್ನು ಬೇರುಮಟ್ಟ ಕಿತ್ತು ತರುವೆನು ' ಎಂದು ಕಾಟಣ್ಣನು ಹೇಳಲು, ರಾಮನು 'ತನ್ನ ಕೈಗೆ ಸಿಕ್ಕಿದ ಮಾತಂಗಿಯನ್ನು ಹೆಂಗಸೆಂದು ಕೊಲ್ಲದೆ ಬಿಡಲು, ಕೃತಘ್ನಳಾದ ಮಾತಂಗಿಯು ತಿರುಗಿ ನನ್ನ ಮೇಲೆ ಬಿಟ್ಟ ಬಾಣವು ನನ್ನ ಎದೆಯನ್ನು ತಾಕಿತು ! ಕಂಗೆಡದೆ ಹಿಂದಕ್ಕೆ ಹೋಗು ' ಎಂದು ಮತ್ತೆ ಬೇಡಿದನು. 'ನನ್ನ ಸಂತೋಷಕ್ಕೆ ಕಿಚ್ಚನ್ನು ಇಟ್ಟೆಯಲ್ಲೋ ರಾಮ ! ನಿನ್ನಂಥ ಸೋದರನನ್ನು ಎಂದು ಕಾಣುವೆನು ! ಇರುವೆ ಗೂಡಿಗೆ ಬೆಂಕಿ ಇಟ್ಟಂತೆ ಆಯಿತು. ಹರಿಯಮ್ಮನಿಗೆ ಈ ಸುದ್ದಿಯನ್ನು ಏನೆಂದು ತಿಳಿಸಲಿ ' ಎಂದು ನಿಟ್ಟುಸಿರು ಬಿಟ್ಟನು. ಅಣ್ಣಯ್ಯ ಕಂಗೆಡದಿರು; ಸಂಗ್ರಾಮದಲ್ಲಿ ಕಾದು ಕೀರ್ತಿಯನ್ನು ತಂದು ರಣದಲ್ಲಿ ಬಿದ್ದೆನೆಂದು ಅಂಗನೆಯರಿಗೆ ತಿಳಿಸು. ಅಭಿಮಾನವನ್ನು ತೊಡೆದು ರಾಣಿಯ ವಾಸವನ್ನೆಲ್ಲ ಕೊಲ್ಲು ' ಎಂದು ಬೇಡಿದನು. 'ನಾನು ತಂದೆಯ ವಂಶಕ್ಕೆ ಕುಂದನ್ನು ತರದಂತೆ ಕಾದಿದೆನು. ಅಂದೆ ಚಿಕ್ಕಮ್ಮನು ನನ್ನನ್ನು ಕೊಂದಿದ್ದಳು. ಇಂದಿನ ವರೆಗೂ ತಂದೆಯ ವಂಶಕ್ಕೆ ಕುಂದು ತರದೆ ಕಾದಾಡಿದೆನು. ಚಟ್ಟಂಗೀಶನ ದಯೆ ಕುಂದಲು ಇಂದು ಕುಂದಿರುವೆನು ' ಎಂದು ಕಾಟಣ್ಣನೊಡನೆ ನುಡಿದನು. ನನ್ನನ್ನು ಹೆತ್ತ ತಾಯಿ ಹರಿಯಮ್ಮನಿಗೆ ಈ ಕಥೆಯನ್ನು ಹೇಳಬೇಡ. ಇನ್ನು ಗಾಯದಿಂದ ನರಳುತ್ತ ಕಾಲಿಡುತ್ತಲಿರುವನೆಂದು ತಿಳಿಸು ' ಎಂದು ಪರಿಪರಿಯಾಗಿ

ಬೇಡಿದನು. 'ಜಟ್ಟಂಗಿ ರಾಮೇಶನ ಕೃಪೆಯು ನನಗೆ ತಪ್ಪಿತು. ನಾನು ಅರಮನೆಗೆ ಹೋಗಿ ಸುದ್ದಿಯನ್ನು ತಿಳಿಸಿ ಒಂದು ಗಳಿಗೆಯಲ್ಲಿ ಬರುವೆನು; ನಾನು ಬರುವ ವರೆಗೂ ನೀನು ಪ್ರಾಣವನ್ನು ಹಿಡಿದಿರು' ಎಂದು ಕಣ್ಣೀರು ಬಿಡುತ್ತ, ತಮ್ಮನಿಗೆ ತಿಳಿಸಿ ಅಲ್ಲಿ ನಿಲ್ಲದೆ ಉರಿಗೊಂಡ ಕರ್ಪೂರದಂತೆ ತರಹರಿಸುತ್ತ ಅರಮನೆಗೆ ಓಡಿಬಂದನು. ಕಾಟಣ್ಣನು ದುಃಖದಿಂದ ಹೇಳಿದ ಮಾತನ್ನು ಕೇಳಿ, ಕಂಪಿಲನು ಮೂರ್ಛೆ ಹೋದನು. ಈ ಸುದ್ದಿಯನ್ನು ಕೇಳಿದ ಕೂಡಲೆ ಹರಿಯಮ್ಮನೂ ಕಡುಗಲಿ ರಾಮನ ಒಡಹುಟ್ಟಿದವರೂ ಎಲ್ಲರೂ ಹುಡಿಯಲ್ಲಿ ಬಿದ್ದು ಹೊರಳಾಡಿದರು. ಕಾಟಣ್ಣನು ಅಲ್ಲಿ ನಿಲ್ಲದೆ ಕುಮ್ಮಟದುರ್ಗಕ್ಕೆ ಓಡಿಬಂದು ರಾಮನ ಮಡದಿಯರನ್ನೆಲ್ಲ ಶೃಂಗಾರಮಾಡಿಸಿದನು. ಮಡದಿಯರು ಚೆಂದದಿಂದ ರಾಮನ ಕೀರ್ತಿಯನ್ನು ಹಾಡುತ್ತ ರಾಜಬೀದಿಯಲ್ಲಿ ಬಂದರು. ಚೆಲ್ವಚೆನ್ನಿಗ ರಾಮ, ಕಂದರ್ಪರೂಪ, ವೀರಾಧಿವೀರ, ರಣಶೂರ ಎಂದು ಮೊದಲಾಗಿ ನಾರಿಯರೆಲ್ಲರೂ ರಾಮನನ್ನು ಕೊಂಡಾಡುತ್ತ, ಮಂಗಳಗೌರಿಯನ್ನು ಪೂಜೆಮಾಡಿ ಏಳೇಳು ಜನ್ಮಗಳಿಗೂ ದೊರೆ ರಾಮನೆ ತಮ್ಮ ಪತಿಯಾಗಿ ದೊರಕಲಿ, ಅರಸು ಕಂಪಿಲರಾಯ ಮಾವನಾಗಲಿ, ಹರಿಯಮ್ಮ ಅತ್ತೆಯಾಗಲಿ ಎಂದು ಹೇಳುತ್ತ, ಓಡಿ ಬಂದು ಕೊಂಡವನ್ನು ಹತ್ತಿ ರಾಮನ ಕೀರ್ತಿಯನ್ನು ಹಾಡುತ್ತ, ನಸುನಗೆ ನಗುತ್ತ ಕೆಂಡದಲ್ಲಿ ಧುಮುಕಿದರು. ಕಾಟಣ್ಣನು ಸುದತಿಯರನ್ನೆಲ್ಲ ಕಿಚ್ಚಿನೊಳಗೆ ನೂಕಿದನು. ಅವರನ್ನೆಲ್ಲ ಕಿಚ್ಚು ಸುಡುತ್ತಿರಲು, ಜನಗಳ ಬೊಬ್ಬೆಯು ಹೆಚ್ಚಿ ಕುಮ್ಮಟವೇ ಬೆಚ್ಚಿತು. ಕಾಟಣ್ಣನು ಅಲ್ಲಿ ನಿಲ್ಲದೆ ತನ್ನರಮನೆಗೆ ಬಂದು, ರಾಮನ ಮಡದಿಯರನ್ನೆಲ್ಲ ಕಿಚ್ಚಿನಲ್ಲಿ ಹಾಕಿದ ಸಂಗತಿಯನ್ನು ತನ್ನ ಮಡದಿಗೆ ಹೇಳಲು, ಕಡುಗಲಿ ಕಾಟಣ್ಣನರಸಿಯು 'ನನ್ನ ಆಸೆಯನ್ನು ಬಿಟ್ಟು ತಡಮಾಡದೆ ನನ್ನನ್ನು ಕಡಿ' ಎಂದು ತನ್ನರಸನನ್ನು ಪ್ರಾರ್ಥಿಸಿದಳು. 'ನನಗೆ ಜೀವದಾಸೆಯಿಲ್ಲ' ಎಂದು ಹೇಳುತ್ತ, ತನ್ನ ತಲೆಯನ್ನು ಕಾಟಣ್ಣನ ಮುಂದೆ ಬಗ್ಗಿಸಿದಳು. ಕೂಡಲೆ ಕಾಟಣ್ಣನು ಕತ್ತಿಯನ್ನು ಝಳಪಿಸುತ್ತ, ತನ್ನರಸಿಯ ಉರದ ಮೇಲೆ ಇರಿಯಲು, ಸುರಿವ ರಕ್ತವನ್ನು ಕಂಡು ಬಾಯಿಬಾಯಿ ಬಿಟ್ಟನು. ಈ ರೀತಿ ಹೆಮ್ಮಕ್ಕಳನ್ನೆಲ್ಲ ಕೊಂದು, ಮನಸ್ಸನ್ನು ನಿರ್ಮಲ ಮಾಡಿ

ಕೊಂಡು ತಮ್ಮ ರಾಮನು ಏನಾಗಿರುವನೋ ಎನ್ನುತ್ತ ರಣರಂಗಕ್ಕೆ ಓಡಿ ಬಂದನು. ರಾಮನ ಎಕ್ಕಟಿಗರು ತಮ್ಮೊಡೆಯನ ಸುತ್ತುಗಟ್ಟಿ ನಿಂತು ಶತ್ರುಗಳೊಡನೆ ಹೋರಾಡಿದರು. ರಾಮನಿಗೆ ತನ್ನ ಪ್ರಾಣವನ್ನೇ ಮೀಸಲಾಗಿಟ್ಟಿದ್ದ ದೇವಿಶೆಟ್ಟಿ ಲಿಂಗನು ಪ್ರಾಣದಾಸೆಯನ್ನು ತೊರೆದು ಖಾನರನ್ನು ಮಲುಕರನ್ನೂ ಕೊಂದು ತಾನೂ ಕಾಳಗದಲ್ಲಿ ಮಡಿದು ಬಿದ್ದನು. ತನ್ನ ಮೈಯೆಲ್ಲವೂ ಗಾಯವಾಗಿದ್ದರೂ ಶತ್ರುಗಳೊಡನೆ ಕಂಪಿಲನ ಕುಮಾರ ಲಿಂಗನು ಹೊಯ್ದಾಡಿ ರಾಮನಡಿಯಲ್ಲಿ ಬಿದ್ದು ಮಡಿದನು. ಕಾಟಣ್ಣನು ರಣರಂಗಕ್ಕೆ ಬಂದು ಅಲ್ಲಿ ಮಡಿದು ಬಿದ್ದಿದ್ದ ವೀರರನ್ನೆಲ್ಲ ನೋಡಿದನು. ದೇವಿಶೆಟ್ಟಿಯ ಲಿಂಗ, ಒಡಹುಟ್ಟಿದ ಲಿಂಗ ಮುಂತಾದವರನ್ನು ನೋಡಿದನು. ಸಿಂಹದ ಮರಿಯಂತೆ ಕುಳಿತಿದ್ದ ರಾಮನನ್ನು ನೋಡಿ, ಏಳು ವೀರರ ಗಂಡ, ಏಳು ಒಲ್ಲಾಳರ ಗಂಡ, ಏಳು ಸುರತಾಳನ ಗಂಡ, ಏಳು! ಏಳು! ನನ್ನ ಕಷ್ಟವನ್ನು ನೋಡು ಎಂದು ರಾಮನನ್ನು ಮಾತನಾಡಿಸಿದನು. ರಾಮನು ಬೊಲ್ಲನ ಮೇಲೆ ಏರಿ ಕೂತಿದ್ದನು; ಕೈಯಲ್ಲಿ ಭಲ್ಲೆಯನ್ನು ಹಿಡಿದಿದ್ದನು. ಮಾತಂಗಿಯ ಬಾಣದ ಏಟಿನ ಗಾಯದ ನೋವಿನಿಂದ ಕಣ್ಣು ಮುಚ್ಚಿದ್ದನು. ಅಂಜಿನ ಹೊಡೆತದಿಂದ ಬೊಲ್ಲನು ನೊಂದು ಮೂರ್ಛೆಯಿಂದ ತೂಕಡಿಸುತ್ತ ನಿಂತಿತ್ತು. ಕಾಟಣ್ಣನ ಧ್ವನಿ ಕೇಳಿ ರಾಮನು ಕಣ್ಣುಬಿಟ್ಟನು. ಕೂಡಲೆ ತುರುಕರು ಚೆದರಿ ಓಡಿದರು. ಕಾಟಣ್ಣನು ಮಾದಗಿತ್ತಿಯನ್ನು ತೋರಿಸು ಎಂದು ಹೇಳುತ್ತ, ಮೂದಲಿಸುತ್ತ ಓಡುವವರನ್ನು ಹಿಂಬಾಲಿಸಿದನು. ಹತ್ತು ಸಾವಿರ ಸುಲ್ತಾನನ ದಂಡು ಒಡನೆಯೆ ಅಲ್ಲಿಗೆ ಬಂದು ಕಾಟಣ್ಣನನ್ನು ಮುತ್ತಿತು. ಮಾದಗಿತ್ತಿಯು ಅಲ್ಲಿಗೆ ಬಂದು ಕಾಟಣ್ಣನನ್ನು ಮುತ್ತಿದಳು. ಮಾದಗಿತ್ತಿಯು ಸಿಕ್ಕಳೆಂದು ಕೂಗುತ್ತ ಅವಳ ಮೇಲೇರಿ ಹೋಗುತ್ತಿರಲು ಅವಳ ಸುತ್ತಲೂ ಇದ್ದ ಖಾನಖಾನರು ಕಾಟಣ್ಣನ ಮೇಲೆ ಬಿದ್ದರು. ಹದ್ದು ಹಕ್ಕಿಗಳನ್ನು ಕೊಯ್ಯುವಂತೆ, ತನ್ನ ಮೇಲೆ ಬಿದ್ದ ಖಾನರನ್ನು ಕಾಟಣ್ಣನು ತರಿಯುತ್ತ, ತಾನೂ ರಣದಲ್ಲಿ ಬಿದ್ದು ಮಡಿದನು. ತನ್ನ ಒಡಹುಟ್ಟಿದ ಅಣ್ಣನು ಮಡಿದದ್ದನ್ನು ನೋಡಿ ಚೆನ್ನಿಗರಾಮನು ಮುಚ್ಚಿದ ಕಣ್ಣನ್ನು ತಿರುಗಿ ತೆರೆಯಲೇ ಇಲ್ಲ.